out taking sides, that the consequences would be bad. However, it should not have happened. The M.L.A. from Shikaripur was here on that day, and I too got two telegrams that his house was raided by some people, and he came to me in an agitated mood. I immediately sent him to Shikaripur to find out what it is because his family members were involved. Such a situation should not have developed; we will see to it. We will also be strict so far as dealing with crimes are concerned irrespective of whether persons belong to this Party or that Party.

Secondly, I will be very happy if local leaders like Sriyuths A.R. Badrinarayan, J.H. Patel and others visit Shikaripur sometime and advise both parties and workers not to indulge in these things. Otherwise, they may tell them: "we leave it to your fate; the Government will take appropriate action". There are several methods of taking action. Suppose we put some additional strong contingent of Police there, the people will have to pay for it. We may think of some other punishment under the Police Act. Whatever it is. I have not yet thought about it. If the situation further deteriorates, I may have to deal with this matter more severely.

Budget Estimates for 1978–79 Demands for Grants

Demand No. 41, 42, 43 and 44 (Debate Continued)

10-00 A.M.

†ಶ್ರೀ ಬಿ.ಜಿ. ಕೊಡ್ಗಿ (ಬೈಂದೂರ್).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಇಲಾಖಾ ಸಚಿವರು ಮಂಡಿಸಿರತಕ್ಕಂಥಾ ಬೇಡಿಕೆ ೪೧, ೪೨, ೪೩, ೪೪ ಏನು ಇದೆ ಇದಕ್ಕೆ ನಾನು ಸಂಪೂರ್ಣವಾಗಿ ಅನುಮೋದನೆಯನ್ನು ವ್ಯಕ್ತಪಡಿಸುತ್ತಾ ಕೆಲವೊಂದು ಸೂಚನೆಗಳನ್ನು ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ತಮಗೆಲ್ಲಾ ಗೊತ್ತಿರುವ ಹಾಗೆ ಈ ಇಲಾಖೆ ಬಹಳ ಮಹತ್ವಪೂರ್ಣವಾದಂಥ ಇಲಾಖೆಯಾಗಿದೆ ಅಂದರೆ ಲೋಕಕ್ಕೆ ಉಪಯೋಗ ಮಾಡುವಂಥಾ ಇಲಾಖೆ ಎನ್ನತಕ್ಕಂಥಾದ್ದಾಗಿದೆ ಹಾಗೂ ಇದನ್ನು ಸಾರ್ವಜನಿಕ ಕಾಮಗಾರಿ ಇಲಾಖೆ ಎಂದೂ ಸಹ ಕರೆಯುತ್ತೇವೆ. ಇದರ ಹೆಸರು ನೋಡಿದಾಗ ಇದರ ಒಂದು ಮಹತ್ವ ಏನು ಇದೆ ಅನ್ನುವುದು ಅರ್ಥವಾಗುತ್ತದೆ. ಇದು ಇಷ್ಟೊಂದು ಮಹತ್ವಪೂರ್ಣವಾದ ಇಲಾಖೆಯಾಗಿದ್ದರೂ ಕೂಡ ಇತ್ತೀಚಿನ ದಿನಗಳಲ್ಲಿ ಅದು ಸ್ವಲ್ಪ ಕಡೆಗಾಣಿಸಿದೆ ಎನ್ನುವುದನ್ನು ಬಹುಶಃ ನಾವೆಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ತಮಗೆ ಉದಾಹರಣೆ ಹೇಳಬೇಕಾದರೆ ಒಂದು ದೇಹದ ಎಲುಬು ರಕ್ತನಾಳಗಳಿಂದ ಕೂಡಿದ ಚರ್ಮಕ್ಕೆ ಯಾವ ರೀತಿಯಾದಂಥಾ ಒಂದು ಪ್ರಧಾನಪಾತ್ರ ವಹಿಸುತ್ತದೋ ಅದೇರೀತಿಯಲ್ಲಿ ದೇಶದ ಪ್ರಗತಿಯಲ್ಲಿ ಈ ಸಾರಿಗೆ ಸಂಪರ್ಕ ವ್ಯವಸ್ಥೆ ಅಷ್ಟು ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತದೆ. ಎನ್ನುವುದನ್ನು ತಾವೆಲ್ಲರೂ ಒಪ್ಪಿಕೊಳ್ಳುವಂಥಾ ವಿಚಾರ. ಮುಖ್ಯವಾಗಿ ಈ ಸಾರಿಗೆ ಸಂಪರ್ಕ ವ್ಯವಸ್ಥೆಯಲ್ಲಿ ಇತರ ಇಲಾಖೆಯ ಖರ್ಚಿಗಿಂತಲೂ ಇದಕ್ಕೆ ಒಂದು ಮಹತ್ವಪೂರ್ಣವಾದಂಥಾ ಪಾತ್ರವನ್ನು ನಿರ್ವಹಿಸಬೇಕಾಗಿದೆ: ಏತಕ್ಕೆಂದರೆ ನಮ್ಮಲ್ಲಿ ಸರಿಯಾಗಿ ರೈಲ್ವೆ ಸಂಪರ್ಕ ವ್ಯವಸ್ಥೆ ಇಲ್ಲ, ಹಾಗೆ ಜಲಸಾರಿಗೆ ವ್ಯವಸ್ಥೆಯೂ ಕೂಡ ಸಾಕಷ್ಟು ಅಭಿವೃದ್ಧಿ ಹೊಂದಿಲ್ಲ ಅನ್ನುವುದು ಗಮನಾರ್ಹವಾದ ವಿಷಯವಾಗಿದೆ, ಆದುದರಿಂದಲೇನೇ ನಾನು ಹೇಳಿದ್ದು ಈ ರಸ್ತೆಸಾರಿಗೆ ವ್ಯವಸ್ಥೆಗೆ ನಾವು ಬಹಳ ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆ ಎಂದು. ದೇಶದ ಒಂದು ಬೆಳವಣಿಗೆಯ ದೃಷ್ಟಿಯಿಂದ ಮತ್ತು ದೇಶದ ಒಂದು ಅಭಿವೃದ್ಧಿ ದೃಷ್ಟಿಯಿಂದ ಹಾಗೂ ದೇಶದ ಒಂದು ಕೈಗಾರಿಕೆಗಳ ಅಭಿ

ವೃದ್ಧಿ ದೃಷ್ಟಿಯಿಂದ ಈವೊತ್ತು ನಮ್ಮದೇಶ ಪ್ರಗತಿ ಪಥದಲ್ಲಿ ಸಾಗಬೇಕಾದರೆ ಈ ಒಂದು ಸಾರಿಗೆ ಸಂಪರ್ಕ ವ್ಯವಸ್ಥೆ ಸುಸೂತ್ರವಾಗಿ ಒಂದು ಜಾಲದಂತೆ ನಿರ್ಮಿಸಬೇಕಾದ್ದು ಬಹಳ ಅವಶ್ಯಕತೆ ಇದೆ-ಎನ್ನುವುದನ್ನು ತಾವೆಲ್ಲರೂ ಕೂಡ ಒಪ್ಪಿಕೊಳ್ಳುತ್ತೀರಿ ಎಂದು ನಾನು ಭಾವಿಸಿಕೊಂಡಿದ್ದೇನೆ. ಅಧ್ಯಕ್ಷರೇ, ಇಷ್ಟೊಂದು ಮಹತ್ವ ಪೂರ್ಣವಾದಂಥಾ ಈ ಖಾತೆಯನ್ನು ಕಳೆದ ವರ್ಷದಿಂದ ಬಹಳ ಅಸಡ್ಡೆಯಿಂದ ನಮ್ಮ ಸರ್ಕಾರ ಕಡೆಗಾಣಿಸುತ್ತಾ ಬಂದಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಬಹುಶಃ ಆಳುವ ಪಕ್ಷದ ಸದಸ್ಯನಾಗಿ ಕೆಲವೊಂದು ವಿಚಾರಗಳನ್ನು ಹೇಳಿದಾಗ ಬಹುಶಃ ನಮ್ಮ ಸರ್ಕಾರವಾಗಲಿ ಅಥವಾ ನಮ್ಮ ಮಂತ್ರಿಗಳಾಗಲಿ ನನ್ನನ್ನು ತಪ್ಪು ಭಾವಿಸುವುದಿಲ್ಲ ಎಂದು ತಿಳಿದುಕೊಂಡು ಈ ಸಂದರ್ಭದಲ್ಲಿ ಕೆಲವೊಂದು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಈ ಬಗ್ಗೆ ಕೆಲವೊಂದು ಸಲಹೆಗಳನ್ನು ಕೊಡುವ ಮೊದಲು ಕಳೆದ ವರ್ಷದಿಂದ ಈ ಸದನದ ಮುಂದೆ ಪರ್‌ಫಾರ್ಮೆನ್ಸ್ ಬಡ್ಜೆಟ್‌ನ ಪುಸ್ತಕವೊಂದನ್ನು ಕೊಡುವಂಥಾ ವ್ಯವಸ್ಥೆ ಮಾಡಿದ್ದಾರೆ. ಅಡ್ಮಿನಿಸ್ಟ್ರೇಟೀವ್ ರೀಫಾರಂಸ್ ಕಮಿಟಿಯವರು ತಮ್ಮ ವರದಿಯಲ್ಲಿ ಪ್ರತಿವರ್ಷವೂ ಕೂಡ ಲೋಕೋಪಯೋಗಿ ಇಲಾಖೆ ತನ್ನ ಮುಂದಿನ ಯೋಜನೆಗಳನ್ನು ರೂಪಿಸುವಂಥಾ ಒಂದು ಪರ್‌ಫಾರ್ಮೆನ್ಸ್ ಬಡ್ಜೆಟ್‌ನ್ನು ತಯಾರಿಸಬೇಕು ಎಂದು ಸೂಚಿಸಿದ್ದಾರೆ. ಅದೇ ಪ್ರಕಾರ ೧೯೭೭–೭೮ ಪರ್‌ಫಾರೆನ್ಸ್ ಬಡ್ಜೆಟ್ ಮತ್ತು ೧೯೭೮-೭೯ರ ಪರ್‌ಫಾರ್ಮೆನ್ಸ್ ಬಡ್ಜೆಟ್ ನಮ್ಮ ಮುಂದೆ ಇದೆ. ಎರಡೂ ಪರ್‌ಫಾರ್‌ಮೆನ್ಸ್ ಬಡ್ಜೆಟ್‌ಗಳನ್ನು ತಾವು ಅವಲೋಕಿಸಿದರೆ ಇದರಲ್ಲಿ ಒಂದು ಮಹತ್ವಪೂರ್ಣವಾದಂಥಾ ವಿಚಾರ ಗೊತ್ತಾಗುತ್ತದೆ. ಈ ಬಡ್ಜೆಟ್ಟನ್ನು ತಯಾರು ಮಾಡುವಂಥಾ ಉದ್ದೇಶ ಬಹುಶಃ ನಮ್ಮ ಮುಂದಿನ ಯೋಜನೆಗಳನ್ನು ಸರಿಯಾಗಿ ಇದರಲ್ಲಿ ರೂಪಿಸಬೇಕಾದಂಥಾ ಅವಶ್ಯಕತೆ ಇರುವುದರಿಂದ ಇದನ್ನು ತಯಾರು ಮಾಡುತ್ತೇವೆ. ಆದರೆ ಇದನ್ನು ನಾನು ಪರಿಶೀಲಿಸಿದಾಗ ನನಗಂತೂ ಬಹಳ ವ್ಯಸನವಾದಂಥಾ ಅನೇಕ ತಪ್ಪುಗಳನ್ನು ಇದರಲ್ಲಿ ಕಾಣಲಿಕ್ಕೆ ಸಾಧ್ಯವಾಯಿತು. ಬಹುಶಃ ಇದು ಉದ್ದೇಶಪೂರ್ವಕವಾಗಿ ಮಾಡಿದಂಥಾ ಕೆಲವೊಂದು ತಪ್ಪುಗಳೋ ಅಥವಾ ತಿಳುವಳಿಕೆ ಇಲ್ಲದೇ ಮಾಡಿದಂಥಾ ತಪ್ಪುಗಳೋ ನನಗಂತೂ ಅರ್ಥವಾಗುತ್ತಾ ಇಲ್ಲ. ಇದರಲ್ಲಿ ಕೆಲವೊಂದು ಅಂಕಿಅಂಶಗಳನ್ನು ನೋಡಿದರೆ ಬಹುಶಃ ಈ ಸದನದ ಸದಸ್ಯರನ್ನು ಸ್ವಲ್ಪ ದಾರಿ ತಪ್ಪಿಸುವ ರೀತಿಯಲ್ಲಿ ಇದೆ ಎಂದು ನಾನು ತಿಳಿದುಕೊಂಡು ಈ ಬಗ್ಗೆ ಕೆಲವೊಂದು ವಿಚಾರಗಳನ್ನು ಸರ್ಕಾರದ ಗಮನಕ್ಕೆ ಮೊಟ್ಟಮೊದಲನೆಯದಾಗಿ ತರಲಿಕ್ಕೆ ಇಚ್ಛೆಪಡುತ್ತೇನೆ,

ಸ್ವಾಮಿ, ೧೯೭೭–೭೮ರ ಪರ್‌ಫಾರ್ಮೆನ್ ಬಡ್ಜೆಟ್ಟನಲ್ಲಿ ನೋಡಿದರೆ ಸಾಮಾನ್ಯವಾಗಿ ಸ್ವಲ್ಪ ಹೆಚ್ಚು ಕಡಿಮೆ ೧೯೭೮–೭೯ರ ಹಾಗೆ ಒಂದೇ ರೀತಿಯಲ್ಲಿ ಅದನ್ನೇ ಪ್ರತಿ ರೂಪವಾಗಿ ನಮ್ಮ ಮುಂದೆ ಇಟ್ಟಿದ್ದಾರೆ ಎನ್ನುವುದನ್ನೂ ಕೂಡ ನಾವು ಗಮನಿಸಬೇಕಾಗಿದೆ. ಈ ಎರಡು ಪರ್‌ಫಾರ್ಮೆನ್ಸ್ ಬಡ್ಜೆಟ್ಟನ್ನು ತಾವು ಪರಿಶೀಲಿಸಿದರೆ ಗೊತ್ತಾಗುತ್ತದೆ. ಡೀಟೇಲ್ಸ್ ಆಫ್ ಬಿಲ್ಡಿಂಗ್ ವರ್ಕ್ಸ್ ಕನ್ಸ್‌ಸ್ಟ್ರಕ್ಟೆಡ್ ಎನ್ನುವ ಒಂದು ಕಾಲಂನಲ್ಲಿ ನೋಡಿದರೆ

The capital cost of the building of the PWD as on 31-3-1977 is Rs. 87.59 crores and the break-up given is as under:

1977-78 upto March 31.		Rs. 80.70 crores
1978-79	do	Rs. 87.59 crores

ಈ ರೀತಿ ಕೊಟ್ಟಿದ್ದಾರೆ. ಅದಕ್ಕೆ ನಾನು ಕೇಳುವುದು ಏನೆಂದರೆ ೮೦ ಕೋಟಿ ರೂಪಾಯಿ ಇದ್ದದ್ದು ೮೭ ಕೋಟಿ ರೂಪಾಯಿ ಹೇಗೆ ಆಯಿತು ಅನ್ನುವುದನ್ನು ತಾವು ತಿಳಿಸಬೇಕು ಎಂದು. ಇನ್ನು ಇದರಲ್ಲಿ ವಿಮರ್ಶೆ ಮಾಡಿ ನೋಡಿದಾಗ ೧೯೭೬–೭೭ರಲ್ಲಿ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ವರ್ಕ್ಸ್‌ಗೆ ೫೧೫.೩೮ ಲಕ್ಷದಷ್ಟು ಅಪಾರವಾದ ಹಣ ಖರ್ಚು ಮಾಡಿದ್ದೀರಿ. ಈ ರೀತಿಯಾಗಿ ೧೯೭೬ರವರೆಗಿನ ಒಂದು ಫಿಗರ್ಸ್‌ನ್ನು ಕೂಡಿಸಿದರೆ ೮೫.೬೫ ಆಗಬೇಕಾಗಿದೆಯೇ ಹೊರತು ತಾವು ಕೊಟ್ಟಿರತಕ್ಕಂಥಾ ಫಿಗರ್ಸ್ ಏನು ಇದೆ ೮೭.೭ ಕೋಟಿ ರೂಪಾಯಿ ಆಗುವುದಿಲ್ಲ, ಈ ರೀತಿ ತಪ್ಪಾಗಿ ಬಿದ್ದಿರುವುದಕ್ಕೆ ಕಾರಣ ಏನು ಅನ್ನುವುದನ್ನು ತಾವು ದಯವಿಟ್ಟು ತಿಳಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಹಾಗೆಯೇ ಇನ್ನು ಈ ಪುಸ್ತಕದ ಪೇಜ್ ನಂಬರ್ ೪ರಲ್ಲಿ ಕ್ಯಾಪಿಟಲ್ ಕಾಸ್ಟ್ ಆಫ್ ದಿ ಬಿಲ್ಡಿಗ್ ಇನ್‌ಛಾರ್ಜ್ ಆಫ್ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನ ಡಿಟೇಲ್ಸ್ ಕೊಟ್ಟಿದ್ದಾರೆ. ಅದರಲ್ಲಿ ನೋಡಿದರೆ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನದರು ೩೧–೩–೭೭ರವರೆಗೆ ರೆಸಿಡೆನ್ಸಿಯಲ್ ಬಿಲ್ಡಿಂಗ್‌ಗೆನಮೂದಿಸಿರುವುದು ೨೨೪.೧೪ ಲಕ್ಷ ರೂಪಾಯಿ ಅಂತ ಇದೆ. ಅದೇ ೧೯೭೮–೭೯ರ ಪರ್‌ಫಾರ್ಮೆನ್ಸ್ ಬಡ್ಜೆಟ್ಟನಲ್ಲಿ

ಇದನ್ನು ನಮೂದಿಸಿದ್ದೀರಿ. ೧೯೭೭-೭೮ರ ಬಡ್ಜೆಟ್ಟ್ ನೋಡಿದರೆ ಇದು ೪೯೧.೯೯ ಲಕ್ಷ ರೂಪಾಯಿ ಅಂತ ಇದೆ. ಇದು ಹೇಗೆ ಕಡಿಮೆಯಾಯಿತು ಅನ್ನುವುದು ನನಗೆ ಅರ್ಥವಾಗುತ್ತಾ ಇಲ್ಲ. ಇದು ಹೆಚ್ಚಾಗ ಬೇಕೇ ಹೊರತು ಕಡಿಮೆಯಾಗುವುದಕ್ಕೆ ಸಾಧ್ಯವಿಲ್ಲ. ಇದು ಹೇಗಾಗಿದೆ ಏನ್ನುವುದನ್ನು ತಾವು ದಯ ವಿಟ್ಟು ಈ ಸದನಕ್ಕೆ ತಿಳಿಸಬೇಕು. ಇದು ಕ್ಲೆರಿಕಲ್ ಮಿಸ್ಟೇಕ್ ಎಂದು ನಾನು ತಿಳಿದುಕೊಂಡಿಲ್ಲಾ. ಈ ಒಂದು ಅಂಕಿಅಂಶಗಳನ್ನು ಒದಗಿಸುವಂಥಾ ಉದ್ದೇಶ ಏನು ಇದೆ ಇದನ್ನು ನಮ್ಮ ಅಧಿಕಾರಿಗಳು ಮರೆ ತಂತೆ ಕಾಣುತ್ತದೆ. ಅವರು ಈ ಬಗ್ಗೆ ಏನಾದರೂ ಒಂದು ಅಂಕಿ ಅಂಶಗಳನ್ನು ಒದಗಿಸಿದರೆ ಸಾಕು ಈ ಸದನದ ಸದಸ್ಯರು ಅದರ ಬಗ್ಗೆ ಗಮನಹರಿಸುವುದಿಲ್ಲ ಅನ್ನುವ ಒಂದು ರೀತಿಯಲ್ಲಿ ಈ ಒಂದು ಅಂಕಿ ಸಂಖ್ಯೆಯನ್ನು ಒದಗಿಸಿದ ಹಾಗೆ ಕಾಣುತ್ತದೆ. ದಯವಿಟ್ಟು ಮುಂದಿನ ವರ್ಷವಾದರೂ ಕೂಡ ಈ ರೀತಿ ಆಗಬಾರದು ಅನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆ. ಇದರ ಒಂದು ಉದ್ದೇಶ ಮಹತ್ವಪೂರ್ಣ ವಾದಂಥಾ ಉದ್ದೇಶವಾಗಿರುವುದರಿಂದ ನಾವು ಪರ್‌ಫಾರ್ಮೆನ್ಸ್ ಬಡ್ಜೆಟ್ ಒಂದನ್ನು ತಯಾರಿಸುತ್ತೇವೆ. ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ತಾವು ಒದಗಿಸಿರತಕ್ಕಂಥಾ ಈ ಅಂಕಿಸಂಖ್ಯೆಗಳನ್ನು ಪರಿಶೀಲನೆಮಾಡಿ ಸರಿಯಾದಂಥಾ ಅಂಕಿಅಂಶಗಳನ್ನು ಒದಗಿಸಬೇಕು. ತಪ್ಪು ಅಂಕಿಅಂಶಗಳನ್ನು ಇನ್ನು ಮುಂದಾದರೂ ಒದಗಿಸದಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಚೆ ಪಡುತ್ತೇನೆ.

ಇನ್ನು ಈ ಪುಸ್ತಕದಲ್ಲಿ ೬ನೇ ಪೇಜಿನಲ್ಲಿರುವ ಒಂದು ವಿಚಾರವನ್ನು ಹೇಳುವುದಕ್ಕೆ ಬಹಳ ವ್ಯಸನ ವಾಗುತ್ತದೆ. ಇದರಲ್ಲಿ ರೋಡ್ ಲೆಂಗ್ತನ್ನು ೧೦೦ ಕಿಲೋ ಮೀಟರ್ ಅಷ್ಟು ಪ್ರತಿವರ್ಷವೂ ಕೂಡ ಹೊಸ ಹೊಸದಾಗಿ ರಸ್ತೆಗಳನ್ನು ಮಾಡಬೇಕು ಅಂತ ಕಾರ್ಯಕ್ರಮಹಾಕಿಕೊಂಡು, ಹೆಚ್ಚು ಹೆಚ್ಚು ಸಾರಿಗೆ ಸಂಪರ್ಕವನ್ನು ಮಾಡುತ್ತಾ ಬಂದಿದ್ದೀರಿ. ಕಳೆದ ವರ್ಷದ ಅಂದರೆ ೧೯೭೬-೭೭ರ ಬಡ್ಜೆಟ್ ಪರ್ ಫಾರ್ಮೆನ್ಸ್ ನೋಡಿದರೆ ೬೭ ಕಿಲೋ ಮೀಟರ್ ಮಾತ್ರ ಹೆಚ್ಚು ಮಾಡಿದ್ದಾರೆ. ಸರ್ಕಾರದವರು ೧೦೦ ಸ್ಕ್ವೇರ್ ಕಿಲೋ ಮೀಟರ್ಸ್‌ಗೆ ಇಷ್ಟು ಮಾತ್ರ ಮಾಡಿದರೆ ಉಳಿದದ್ದು ಯಾವಾಗ ಆಗುತ್ತದೋ ಗೊತ್ತಿಲ್ಲ. ಈ ರೀತಿ ಮಾಡಿದರೆ ನಮ್ಮ ಸರ್ಕಾರ ಇನ್ನು ಒಂದು ವರ್ಷವಾದರೂ ಕೂಡ ಈ ಸಾರಿಗೆ ಸಂಪರ್ಕ ವ್ಯವಸ್ಥೆ ಯಲ್ಲಿ ಹೆಚ್ಚು ಉತ್ತಮ ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಅನ್ನುವುದನ್ನು ಕೇಳಬೇಕಾಗಿದೆ, ನಾನು ಇನ್ನೊಂದು ವಿಷಯವನ್ನು ಬಹಳ ವ್ಯಸನದಿಂದ ಹೇಳಬೇಕಾದ್ದು ಪೇಜ್ ೬ ರಲ್ಲಿ ನೋಡಿದರೆ ಈ ರೋಡಿನ ಉದ್ದಗಲ ನೋಡಿದರೂ ಕೂಡ ಅದರಲ್ಲೂ ವ್ಯತ್ಯಾಸ ಕಾಣುತ್ತಾ ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್ ೧೯೭೬ರಲ್ಲಿ ೧೨,೯೪೦ ಕಿಲೋಮೀಟರು ಇದ್ದುದು ೧೯೭೮-೭೯ರಲ್ಲಿ ೧೨,೯೨೧ ಕಿಲೋಮೀಟರು ಆಗಿದೆ ಎಂದು ವರದಿಯ ನಾಲ್ಕನೇ ಪುಟದಲ್ಲಿ ಹೇಳಲಾಗಿದೆ. ಈ ಅಂಕಿ-ಅಂಶವನ್ನು ಯಾವ ಕಾರಣಕ್ಕಾಗಿ ಕೊಡಲಾಗಿದೆ ಎಂದು ನನಗೆ ಗೊತ್ತಾಗುತ್ತಿಲ್ಲ. ನನಗೆ ತಿಳಿದ ಮಟ್ಟಿಗೆ, ಇಂತಹ ಅಂಕಿ-ಅಂಶಗಳನ್ನು ಕೊಟ್ಟು ಸದನದ ಸದಸ್ಯರನ್ನು ಅಡ್ಡದಾರಿಗೆಳೆಯುವ ಪ್ರಯತ್ನ ನಡೆದ ಹಾಗೆ ಕಾಣುತ್ತದೆ ಈ ದಿಸೆಯಲ್ಲಿ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಐ.ಸಿ.ಆರ್.ಸಿ. ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕೆಂದು ಬಯಸುತ್ತೇನೆ. ೧೯೭೨ ರಲ್ಲಿ ಕರ್ನಾಟಕದ ಹಳ್ಳಿಗಳಿಗೆಲ್ಲಾ ರಸ್ತೆಗಳನ್ನು ಒದಗಿಸುವ ಯೋಜನೆಯನ್ನು ರೂಪಿಸಿಕೊಂಡು, ಹಿಂದಿನ ಲೋಕೋಪಯೋಗಿ ಸಚಿವರು ಐ.ಸಿ.ಆರ್.ಸಿ. ಯೋಜನೆಯನ್ವಯ ರಸ್ತೆಗಳನ್ನು ಮಾಡಿಸಿದ್ದಾರೆ. ಹಾಗೆ ಮಾಡಿದಂತಹ ರಸ್ತೆಗಳಿಗೆ ಜಲ್ಲಿಯನ್ನು ಹಾಕಿ ಶಾಶ್ವತ ರಸ್ತೆಗಳನ್ನಾಗಿ ಪರಿವರ್ತಿಸುವುದಾಗಿ ಅವರು ವಾಗ್ದಾನ ಮಾಡಿದ್ದರು. ಇಲ್ಲಿಗೆ ಆ ರಸ್ತೆಗಳನ್ನು ಮಾಡಿ ಸುಮಾರು ಐದು ವರ್ಷಗಳಾದವು. ಇಂದು ಹೋಗಿ ಅಲ್ಲಿ ನೋಡಿದಾಗ, ಅಂದು ಇಲ್ಲಿ ರಸ್ತೆಗಳನ್ನು ರಚಿಸಲಾಯಿತೇ ಅಥವಾ ಇಲ್ಲವೇ ಎನ್ನುವ ಅನುಮಾನ ಬರುವಂತೆ ರಸ್ತೆಗಳ ಸ್ಥಿತಿ ಇದೆ. ಮಲೆನಾಡು ಪ್ರದೇಶದಲ್ಲೂ ಈ ರಸ್ತೆಗಳ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಐ.ಸಿ.ಆರ್.ಸಿ. ಯೋಜನೆಯನ್ವಯ ಬರುವ ರಸ್ತೆಗಳಿಗೆ ಸಾಕಷ್ಟು ಹಣ ಒದಗಿಸ ದಿರುವುದೇ ಇದಕ್ಕೆ ಕಾರಣವಾಗಿದೆ. ಆದುದರಿಂದ, ಇನ್ನು ಮುಂದಾದರೂ ಮಂತ್ರಿಗಳು ಈ ರಸ್ತೆಗಳ ನಿರ್ಮಾಣಕ್ಕಾಗಿ ಹೆಚು ಹಣ ಒದಗಿಸಿ, ಅವುಗಳನ್ನು ಊರ್ಜಿತವಾಗಿಡುವುದಕ್ಕೆ ಪ್ರಯತ್ನ ಮಾಡ ಬೇಕೆಂದು ಹೇಳುತ್ತೇನೆ. ರಸ್ತೆಗಳ ನಿರ್ಮಾಣಕ್ಕಾಗಿ ಸುಮಾರು ನಾಲ್ಕೂವರೆ ಕೋಟಿ ರೂಪಾಯಿಗಳು ಸೆಲ್ಲರ್ ಮಾರ್ಕೆಟ್ ಫೀಸ್‌ನಿಂದ ಲೋಕೋಪಯೋಗಿ ಖಾತೆಗೆ ಕೊಡಲಾಗುತ್ತಿದೆ. ಸೆಲ್ಲರ್ ಮಾರ್ಕೆಟ್ ಫೀಸ್‌ನಿಂದ ವಸೂಲಾಗಿರುವ ಹಣವನ್ನು, ಆಯಾ ಭಾಗಕ್ಕೆ ಉಪಯೋಗಿಸುವಂತೆ ಮಾಡಲಾಗಿತ್ತು.

ಆದರೆ, ದುರದೃಷ್ಟವಶಾತ್, ಆ ಹಣ ಸಮಂಜಸವಾದ ರೀತಿಯಲ್ಲಿ ವ್ಯಯವಾಗುತ್ತಿಲ್ಲ. ಈ ದಿಸೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಬಹಳಷ್ಟು ಅನ್ಯಾಯವಾಗಿದೆ ಎಂದು ಹೇಳುತ್ತೇನೆ. ಕಳೆದ ವರ್ಷ ಈ ಬಾಬಿನಲ್ಲಿ ಅರವತ್ತು ಲಕ್ಷ ರೂಪಾಯಿಗಳನ್ನು ರಾಜ್ಯದ ಬೊಕ್ಕಸಕ್ಕೆ ದಕ್ಷಿಣ ಕನ್ನಡ ಜಿಲ್ಲೆ ಕೊಟ್ಟರೂ, ಕೇವಲ ೧೮–೨೦ ಲಕ್ಷ ರೂಪಾಯಿಗಳನ್ನು ಅಂದರೆ ಮೂರನೇ ಒಂದು ಭಾಗದ ಹಣವನ್ನು ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗಾಗಿ ಖರ್ಚು ಮಾಡಲಾಗಿದೆ. ಆದರೆ, ಕೆಲವು ಕಡೆಗಳಲ್ಲಿ ಇನ್ನೂರು–ಮುನ್ನೂರು ಪಟ್ಟು ಹಣವನ್ನು ಹೆಚು ಖರ್ಚು ಮಾಡಲಾಗಿದೆ. ಆದುದರಿಂದ, ಇಂತಹ ತಾರತಮ್ಯವನ್ನು ಹೋಗಲಾಡಿಸಿ, ಯಾವುದಾದರೊಂದು ನಿರ್ದಿಷ್ಟ ಧೋರಣೆಯನ್ನು ಅನುಷ್ಠಾನಕ್ಕೆ ತರಬೇಕೆಂದು ಹೇಳಬಯಸುತ್ತೇನೆ.

ಇನ್ನು ಸೇತುವೆಗಳ ವಿಚಾರವಾಗಿ ನಾನು ಮಾತನಾಡಬೇಕಾಗಿದೆ. ವರ್ಷೇ ವರ್ಷೇ ಕೆಲವು ಸೇತುವೆಗಳನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಿಕೊಂಡಿರುವುದಾಗಿ ಹೇಳಲಾಗಿದೆ. ಈ ಬಗ್ಗೆ ಮಾನ್ಯ ಸಚಿವರು ಅಂಕಿ–ಅಂಶಗಳನ್ನು ಸಭೆಯ ಮುಂದಿಡಬೇಕು ಮತ್ತು ಕಳೆದ ಎರಡು ವರ್ಷಗಳಿಂದ ಸೇತುವೆಗಳನ್ನು ಎಲ್ಲೆಲ್ಲಿ ತೆಗೆದುಕೊಳ್ಳಲಾಗಿದೆ ಎಂಬುದನ್ನು ತಿಳಿಸಬೇಕು. ಕಳೆದ ಎರಡು ವರ್ಷಗಳಿಂದ ಮಲೆನಾಡು ಪ್ರದೇಶದಲ್ಲಿ ಎಲ್ಲೂ ದೊಡ್ಡ ಸೇತುವೆಗಳ ನಿರ್ಮಾಣವನ್ನೇ ಮಾಡಿಲ್ಲ. ಮಲೆನಾಡು ಪ್ರದೇಶ ಹಳ್ಳ ಹೊಳೆಗಳಿಂದ ಕೂಡಿದ ಪ್ರದೇಶವಾದ್ದರಿಂದ ಸಾರಿಗೆ ಸಂಪರ್ಕ ವ್ಯವಸ್ಥೆ ಚೆನ್ನಾಗಿರಬೇಕಾದರೆ ಹೆಚ್ಚು ಹೆಚ್ಚು ಸೇತುವೆಗಳನ್ನು ನಿರ್ಮಿಸಬೇಕೆಂಬ ವಿಚಾರವನ್ನು ನಾನಿಲ್ಲಿ ಅನೇಕ ಬಾರಿ ಹೇಳಿದ್ದೇನೆ. ಆದರೂ, ಮಲೆನಾಡು ಪ್ರದೇಶವನ್ನು ಕಡೆಗಣಿಸಲಾಗಿದೆ. ಆದುದರಿಂದ, ಮಲೆನಾಡು ಪ್ರದೇಶದಲ್ಲಿ, ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಹೆಚ್ಚು ಸೇತುವೆಗಳನ್ನು ನಿರ್ಮಿಸುವುದರ ಕಡೆಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.]

ನನಗೆ ಮಾತನಾಡಲು ಕೊಟ್ಟ ಕಾಲಾವಕಾಶವನ್ನು ನೋಡಿದರೆ, ನಾನು ಪೀಠಿಕೆಯನ್ನೇ ಮಾಡಬಾರದಿತ್ತು ಎಂದೆನಿಸುತ್ತಿದೆ. ಇನ್ನು ಹೇಳಬೇಕಾದ ವಿಚಾರಗಳು ಹಲವಾರು ಇದ್ದರೂ ಇಲ್ಲಿಗೆ ನನ್ನ ಭಾಷಣವನ್ನು ಮುಗಿಸಲೇಬೇಕಾದ ಪರಿಸ್ಥಿತಿ ಇರುವುದರಿಂದ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್.ಎಂ. ಲಿಂಗಪ್ಪ (ಕೃಷ್ಣರಾಜಪೇಟೆ)—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಮಂಡಿಸಿರುವ ಲೋಕೋಪಯೋಗಿ ಇಲಾಖಾ ಬೇಡಿಕೆ ಕುರಿತು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಲೋಕೋಪಯೋಗಿ ಇಲಾಖೆ ರಾಜ್ಯದ ಅಭಿವೃದ್ಧಿ ದಿಕ್ಕಿನಲ್ಲಿ ಹೆಚ್ಚು ಜವಾಬ್ದಾರಿಯನ್ನು ಹೊರುವಂಥ ಇಲಾಖೆಯಾಗಿದೆ. ಈ ಇಲಾಖೆ ದೊಡ್ಡ ಪ್ರಮಾಣದಲ್ಲಿ ಜನತೆಯ ಕಲ್ಯಾಣಕ್ಕಾಗಿ ಕೆಲಸವನ್ನು ಮಾಡಬೇಕಾದ ಹೊಣೆ ಹೊತ್ತಿದೆ. ಈ ಇಲಾಖೆಯ ಹೊಣೆ, ಜವಾಬ್ದಾರಿ ಮತ್ತು ಕೆಲಸದ ಪ್ರಮಾಣ ಅಗಾಧವಾದುದೆಂದು ಎಲ್ಲರೂ ಒಪ್ಪುವ ವಿಚಾರ. ಅದಕ್ಕನುಗುಣವಾಗಿ ಹಣವನ್ನು ಒದಗಿಸಬೇಕಾದುದೂ ಬಹಳ ಅಗತ್ಯವೆಂದು ಎಲ್ಲರೂ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಆದರೆ, ಕೆಲಸದ ಪ್ರಮಾಣ, ಆಗಬೇಕಾದ ಅಭಿವೃದ್ಧಿಕಾರ್ಯದ ಗಾತ್ರಕ್ಕನುಗುಣವಾಗಿ ಹಣವನ್ನೊದಗಿಸದೇ ಇರುವುದು ವಿಷಾದನೀಯ. ದೊಡ್ಡ ಪ್ರಮಾಣದಲ್ಲಿ ರಾಜ್ಯದ ಹಣವನ್ನು ಖರ್ಚು ಮಾಡತಕ್ಕ ಇಲಾಖೆಗಳಲ್ಲಿ ಇದು ಅಗ್ರಸ್ಥಾನ ಪಡೆದಿದೆ, ಒದಗಿಸಿರತಕ್ಕ ಹಣ ಸರಿಯಾದ ರೀತಿಯಲ್ಲಿ ಜನತೆಯ ಕಲ್ಯಾಣ ಸಾಧನೆಗೆ ಸದ್ವಿನಿಯೋಗವಾಗುವಂತೆ ನೋಡಿಕೊಳ್ಳಬೇಕಾದರೂ ಅಷ್ಟೇ ಪ್ರಾಮುಖ್ಯ ವಿಚಾರ. ಈ ದಿಕ್ಕಿನಲ್ಲಿ ನಿಸ್ಪೃಹತೆ ಪ್ರಾಮಾಣಿಕತೆ, ದಕ್ಷತೆ ಮತ್ತು ಸೇವಾ ಆಕಾಂಕ್ಷೆಯಿಂದ ಕೆಲಸ ಮಾಡತಕ್ಕ ಅಧಿಕಾರ ವರ್ಗವೆಂದು ಹಿಂದೆ ಏನು ಹೆಸರು ಪಡೆದಿತ್ತು, ಅದು ಇವತ್ತು ಇಲ್ಲ ಎನ್ನುವ ವಿಚಾರವನ್ನು ನಾನು ಅಲ್ಲಲ್ಲೇ ಕೇಳುತ್ತಿದ್ದೇನೆ. ಈ ಖಾತೆಯ ಜವಾಬ್ದಾರಿಯನ್ನು ಹೊತ್ತಿರುವ ಯುವಕ ಹಾಗೂ ಉತ್ಸಾಹಿ ಸಮಾಜವಾದಿ ಮಂತ್ರಿಗಳು ಈ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಹೇಳಬಯಸುತ್ತೇನೆ. ಈ ಇಲಾಖೆಯ ಮೇಲೆ ಅನೇಕ ಆರೋಪಗಳಿವೆ. ಈ ವರ್ಷದ ಆಯವ್ಯಯದಲ್ಲಿ ಈ ಇಲಾಖೆಗೆ ಸುಮಾರು ೮೩ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಇದರಲ್ಲಿ ಶೇಕಡ ನಲವತ್ತರಷ್ಟು ಹಣ ಸಿಬ್ಬಂದಿ ವೆಚ್ಚಕ್ಕಾಗಿ ವಿನಿಯೋಗವಾಗುತ್ತದೆ ಎಂದು ಎಲ್ಲರೂ ತಿಳಿದುಕೊಂಡಿರುವ ವಿಚಾರ. ಇನ್ನು ಉಳಿದ ಹಣ ಜನತೆಯ ಆಶೋತ್ತರಗಳನ್ನು ಪೂರೈಸುವುದಕ್ಕೆ ಸಾಕಾಗುವುದಿಲ್ಲ, ಒದಗಿಸಿರುವ ಹಣ ಬಹಳ ಕಡಮೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅಷ್ಟೇ ಅಲ್ಲದೆ, ಯಾರು ಲೋಕೋಪಯೋಗಿ ಇಲಾಖೆಯಲ್ಲಿ ನಿಸ್ಪೃಹತೆ, ದಕ್ಷತೆ, ಪ್ರಾಮಾಣಿಕತೆ ಹಾಗೂ ಶಿಸ್ತಿನಿಂದ ಸೇವೆ ಮಾಡುತ್ತಾರೆ ಅಂತಹ ಅಧಿಕಾರಿಗಳಿಗೆ ರಕ್ಷಣೆ ದೊರೆಯುತ್ತಿಲ್ಲವೆನ್ನುವ ಅಪಾದನೆ ಇದೆ. ಆದುದರಿಂದ, ಯಾರು ತಪ್ಪಿತಸ್ಥರಿದ್ದಾರೆ ಯಾರೂ ಅದಕ್ಷರಿದ್ದಾರೆ ಮತ್ತು ಯಾರು ದೇಶಪ್ರೇಮದಿಂದ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುವುದಿಲ್ಲ ಅಂತಹವರನ್ನು ಶಿಕ್ಷೆ ಮಾಡಬೇಕಾದ್ದು ಸರ್ಕಾರದ ಪ್ರಥಮ ಕರ್ತವ್ಯ.

ಇನ್ನು ಈ ಇಲಾಖೆಯ ಮೇಲೆ ಇರತಕ್ಕ ಆರೋಪಗಳು ಅನೇಕ ಇವೆ ಅಲ್ಲಿ ಭಾರಿ ಪ್ರಮಾಣದ ಹೆಗ್ಗಣಗಳು ಇವೆ. ಎನ್ನುವುದನ್ನು ನಾನು ಕೇಳಿದ್ದೇನೆ. ಭಾರಿ ಪ್ರಮಾಣದ ದೊಡ್ಡ ದೊಡ್ಡ ತಿಮಿಂಗಿಲ ಗಳು ಇವೆಯೆಂದು ಕೇಳಿದ್ದೇನೆ. ಭಾರಿ ಪ್ರಮಾಣದ ಮೊಸಳೆಗಳು ಇವೆಯೆಂದ ಕೇಳಿದ್ದೇನೆ. ಈ ಇಲಾಖೆಯಲ್ಲಿ ಸಿಮೆಂಟ್ ಅನ್ನು ನುಂಗತಕ್ಕ ಹೆಗ್ಗಣಗಳು ಇವೆಯೆಂದು ಕೇಳಿದ್ದೇನೆ. ಕಬ್ಬಿಣವನ್ನು ನುಂಗತಕ್ಕ ತಿಮಿಂಗಲಗಳು ಇವೆ ಇಟ್ಟಿಗೆ, ಕಲ್ಲು, ಮತ್ತು ಜೆಲ್ಲಿಯನ್ನು ತಿಂದು ಜೀರ್ಣ ಮಾಡಿಕೊಳ್ಳತಕ್ಕ ಮೊಸಳೆಗಳಿವೆ, ಏನುತಿಂದರು ಜೀರ್ಣಸಿಕೊಳ್ಳುವಶಕ್ತಿ ಈ ಇಲಾಖಾಧಿಕಾರಿಗಳಿಗೆ ಇದೆ. ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕವರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿ ಕೆಲಸ ಮಾಡತಕ್ಕ ಅನೇಕ ಪ್ರಕರಣ ಗಳು ಇವೆ. ಅಷ್ಟೇ ಅಲ್ಲ. ವಿಧಿ ನಿಯಮಗಳನ್ನು ಉಲ್ಲಂಘನೆ ಮಾಡಿ ಕಂಟ್ರಾಕ್ಟರಿಗೆ ಸಹಾಯ ಮಾಡ ತಕ್ಕ ಅಧಿಕಾರಿಗಳೂ ಸಹ ಈ ರಾಜ್ಯದಲ್ಲಿ ಇದ್ದಾರೆ. ಆದ್ದರಿಂದ ಇದು ಪರಿಶೀಲನೆ ಮಾಡಬೇಕಾದಂತಹ ವಿಚಾರ ಇದು. ಕೆಲಸ ಮಾಡದೆ ಸುಳ್ಳು ಬಿಲ್ಲನ್ನು ಮಾಡಿ ಹಣವನ್ನು ಪಡೆಯತಕ್ಕದ್ದನ್ನು ನಾನು ಅಲ್ಲಲ್ಲಿ ನೋಡುತ್ತಿದ್ದೇವೆ. ಕೆಲಸ ಮಾಡತಕ್ಕ ಕಂಟ್ರಾಕ್ಟರು ಕಂಟ್ರಾಕ್ಟರುಗಳಲ್ಲೇ ಪಕ್ಷಪಾತ ಮಾಡತಕ್ಕದ್ದನ್ನು ನಾವು ನೋಡುತ್ತಿದ್ದೇವೆ. ಜೊತೆಗೆ ಅವರಿಗೆ ಎಲ್ಲಿ ಇಷ್ಟ ಬರುವುದಿಲ್ಲ ಅಲ್ಲಿ ಮಾಡತಕ್ಕ ಕೆಲಸವನ್ನು ಉಪೇಕ್ಷೆ ಮಾಡಿ ನಿಧಾನ ಮಾಡತಕ್ಕ ಅಧಿಕಾರಿಗಳನ್ನು ನಾವು ನೋಡುತ್ತಿದ್ದೇವೆ. ಈ ದಿಕ್ಕಿನಲ್ಲಿ ಮಾನ್ಯ ಮಂತ್ರಿಗಳು ತಮ್ಮ ಗಮನವನ್ನು ಹರಿಸಬೇಕು.

ಇನ್ನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಒಂದೆರಡು ವಿಷಯಗಳನ್ನು ಹೇಳಬೇಕೆಂದು ನಾನು ಇಚ್ಛಿಸುತ್ತೇನೆ. ಈ ರಾಜ್ಯದಲ್ಲಿ ಎಲ್ಲರಿಗೂ ಗೊತ್ತಿರುವ ಹಾಗೆ ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇಕಡಾ ೯೮ ರಷ್ಟು ಭಾಗ ಹಳ್ಳಿಗಳ ಪ್ರದೇಶ ಎನ್ನತಕ್ಕ ವಿಚಾರ ಮಾನ್ಯ ಮಂತ್ರಿಗಳಿಗೆ ಗೊತ್ತಿರುವ ವಿಚಾರ. ಹಳ್ಳಿಗಾಡಿನ ಜನತೆಯ ಅನುಕೂಲಕ್ಕೆ ನೀರಾವರಿ ಕಾಮಗಾರಿಗಳು, ಸಂಚಾರ ಸೌಲಭ್ಯಕ್ಕಾಗಿ ರಸ್ತೆಗಳು ಅತಿ ಮುಖ್ಯವಾದ ವಿಚಾರ. ಈ ದಿಕ್ಕಿನಲ್ಲಿ ನಡೆದು ಬಂದಿರತಕ್ಕ ಕಾಮಗಾರಿಗಳ ಕೆಲಸದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ವಾರ್ಷಿಕ ವರದಿಯಲ್ಲಿ ಹೇಳಿದ್ದಾರೆ ಕಳೆದ ೨೧ ವರ್ಷಗಳಿಂದ ಈ ರಾಜ್ಯದಲ್ಲಿ ೩೦ ಸಾವಿರಕ್ಕೂ ಹೆಚ್ಚು ಮೈಲಿಗಳಷ್ಟು ರಸ್ತೆಯನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಯ ಮೇಂಟ್‌ನೆನ್ಸ್‌ಗೆ ವಹಿಸಿಕೊಂಡಿದ್ದೆವೆ ಎಂದು ಹೇಳಿದ್ದಾರೆ. ನಿಜ ಅವರು ವಹಿಸಿಕೊಂಡಿದ್ದಾರೆ. ಸ್ಟೇಟ್‌ಫಂಡ್ ರಸ್ತೆಗಳನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ ವಹಿಸಿಕೊಂಡು ಪಿ.ಡಬ್ಲ್ಯುಡಿ ರಸ್ತೆಗಳಾಗಿ ಪರಿವರ್ತನೆಯಾಗಿರುವ ರಸ್ತೆಗಳ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಬಹಳ ಶೋಚನೀಯವಾಗಿವೆ ಎಂದು ನಾನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ನನ್ನ ಜಿಲ್ಲೆಯಾದ ಮಂಡ್ಯ ಜಿಲ್ಲೆ ಮುಂದುವರಿದ ಜಿಲ್ಲೆ ಎನ್ನುವ ಭಾವನೆ ಇದೆ ಎಂದು ನನ್ನ ಗೆಳೆಯರು ಹೇಳಿದರು. ಕೃಷ್ಣರಾಜಸಾಗರದ ಆಯಕಟ್ಟಿನ ಪ್ರದೇಶದಲ್ಲಿ ೩ ಸಾವಿರ ಕಿಲೋ ಮೀಟರ್ ರಸ್ತೆ ಇದೆ. ಕೃಷ್ಣರಾಜ ಸಾಗರ ಜಲಾಶಯದ ಸೌಲಭ್ಯವನ್ನು ಪಡೆದಿರತಕ್ಕ ಮಂಡ್ಯಾ ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ೩/೧ ಭಾಗ ಮಾತ್ರ. ಉಳಿದಂತಹ ೩/೨ ಭಾಗ ಯಾವ ನೀರಾವರಿಯ ಸೌಲಭ್ಯವೂ ಇಲ್ಲ. ಅದು ಅನಭಿವೃದ್ಧಿ ಹಿಂದುಳಿದ ಪ್ರದೇಶವಾಗಿದೆ. ಈ ಪ್ರದೇಶಕ್ಕೆ ಸೇರಿದ ನನ್ನ ಕ್ಷೇತ್ರದ ಕೆಲವು ಕುಂದುಕೊರತೆಗಳನ್ನು ಮಾನ್ಯ ಸಚಿವರ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ೧೦೦ ಚದುರ ಕಿಲೋಮೀಟರಿಗೆ ೪೭ ಕಿಲೋಮೀಟರ್ ರಸ್ತೆ ಇದೆ ಎಂದು ಹೇಳಿದ್ದಾರೆ. ಸರಾಸರಿ ಇದು ನಮ್ಮ ಕ್ಷೇತ್ರದಲ್ಲಿ ಆ ಪ್ರಮಾಣದಲ್ಲಿ ರಸ್ತೆ ಏನೂ ಆಗಿಲ್ಲ ಎಂದು ನಾನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ನಮ್ಮ ಕ್ಷೇತ್ರವನ್ನು ಉಪೇಕ್ಷೆ ಮಾಡಿದ್ದಾರೆ. ನಿರ್ಲಕ್ಷ್ಯ ಮಾಡಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಹಿಂದುಳಿದ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ನಾನು ವಿನಯದಿಂದ ಮನವಿಮಾಡಿಕೊಳ್ಳುತ್ತೇನೆ. ಈಗ ಪರಿಸ್ಥಿತಿ ಏನಾಗಿದೆ ಎಂದರೆ ಎಲ್ಲಿ ಪ್ರೆಜರ್ ಪುಲ್ಸ್ ಬರುತ್ತದೆಯೋ ಅಲ್ಲಿ ಕಾಮಗಾರಿಗಳನ್ನು ಮಾಡತಕ್ಕದ್ದು ಒಂದು ವೈಶಿಷ್ಟ್ಯವಾಗಿದೆ. ಎಲ್ಲಿ ಒತ್ತಡ ಪ್ರಭಾವ ಬರುತ್ತದೆಯೊ ಅಂಥಾಕಡೆ ಮಾತ್ರ ಕಾಮಗಾರಿಗಳನ್ನು ಮಾಡಿಸುತ್ತಾರೆ. ಈ ರೀತಿ ಪಕ್ಷಪಾತವನ್ನು ತೋರಿಸಿ ಕೆಲಸ ಮಾಡತಕ್ಕದ್ದು ಸರ್ಕಾರಕ್ಕೆ ಯೋಗ್ಯವಲ್ಲ. ಎಲ್ಲಾ ಭಾಗಗಳ ಅಭಿವೃದ್ಧಿಯನ್ನೂ ಕೂಡ ಸಮಾನ ದೃಷ್ಟಿ ಯಿಂದ ನೋಡಿ ಕೆಲಸ ಮಾಡಿಸಬೇಕೆನ್ನುವ ಮನೋಭಾವನೆ ಇರಬೇಕು. ಇವೊತ್ತು ನಮ್ಮ ಕ್ಷೇತ್ರದಲ್ಲಿ ರಸ್ತೆಗಳ ಸ್ಥಿತಿಯನ್ನು ಹೇಳುವುದಾದರೆ ಅವು ಬಹಳ ಚಿಂತಾಜನಕ ಸ್ಥಿತಿಯಲ್ಲಿ ಇವೆ. ಪಬ್ಲಿರ್ಕ್ಸ್ ಡಿಪಾರ್ಟ್‌ಮೆಂಟ್ ಮೇಂಟೆನೆನ್ಸ್‌ಗೆ ವಹಿಸಿಕೊಂಡಿದ್ದರೂ ಕೂಡ ಅವುಗಳ ಸ್ಥಿತಿ ಬಹಳ ಚಿಂತಾಜನಕವಾಗಿದೆ ೨೧ ವರ್ಷಗಳ ಹಿಂದೆ ವಹಿಸಿಕೊಂಡಾಗ ಯಾವರೀತಿ ಇದ್ದವೋ ಅದೇರೀತಿ ಇವೊತ್ತೂ ಸಹ ಇವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಡಿ.ಒ. ಲೆಟರ್‌ನಲ್ಲಿ ಬರೆದಿದ್ದಾರೆ. ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟಿನವರು

ವಹಿಸಿಕೊಂಡ ರಸ್ತೆಗಳು ಬಂಡಿಜಾಡಿನ ರಸ್ತೆಗಳಂತೆ ಇದ್ದು ಅವುಗಳಲ್ಲಿ ಲ್ಯಾಂಟಾನ ಗಿಡಗಳು ಬೆಳೆದು ಕೊಂಡಿವೆ. ಆ ರಸ್ತೆಗೆ ಜೆಲ್ಲಿ ಹಾಕುವುದು ಬೇಡ. ಮಣ್ಣು ಹಾಕಿದ್ದರೆ ಎಷ್ಟೋ ಜನಗಳು ಸಂತೋಷ ಪಡುತ್ತಿದ್ದರು. ನಮ್ಮ ಭಾಗದಲ್ಲಿ ರಾಷ್ಟ್ರೀಕರಣ ರಸ್ತೆ ಸಾರಿಗೆ ಸೌಲಭ್ಯ ಇದೆ. ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯವರು ಬಸ್ಸುಗಳನ್ನು ಓಡಿಸಲು ಸರಿಯಾದ ರಸ್ತೆಗಳಿಲ್ಲವೆಂದು ನಿರಾಕರಿಸುತ್ತಾರೆ ಜನತೆಯ ಸಂಚಾರ ಸೌಲಭ್ಯಕ್ಕೆ ಬಸ್ಸುಗಳನ್ನು ಓಡಿಸಬೇಕು ಎಂದು ಅವರು ಬೇಡಿಕೆಯನ್ನು ಸಲ್ಲಿಸುವಂತಹ ಕಾಲ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ರಸ್ತೆಗಳು ಸರಿಯಾಗಿಲ್ಲ. ಬಸ್ಸುಗಳನ್ನು ಓಡಿಸುವುದಕ್ಕೆ ಆಗುವುದಿಲ್ಲ ಎನ್ನುವ ವಿಚಾರವನ್ನು ಹೇಳುತ್ತಾರೆ. ಆದ್ದರಿಂದ ಸರ್ಕಾರದವರು ಜನರಿಗೆ ಇರತಕ್ಕ ಕುಂದುಕೊರತೆಗಳನ್ನು ನಿವಾರಣೆ ಮಾಡಿ ಅನುಕೂಲ ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಿಗೆ ಕೇಳುತ್ತೇನೆ. ಅನೇಕ ರಸ್ತೆಗಳ ಗುರುತು ಇಲ್ಲ; ಕುರುಹೂ ಇಲ್ಲ. ಅಂಥಾ ರಸ್ತೆಗಳು ಇವೆ. ಸ್ಟೇಟ್‌ಫಂಡ್ ರಸ್ತೆಗಳ ಕುರುಹೂ ಇಲ್ಲ ಎಂದು ನಾನು ಬಹಳ ವಿಶಾದದಿಂದ ಹೇಳಬೇಕಾಗಿದೆ. ಸ್ಟೇಟ್ ಫಂಡ್ ರಸ್ತೆಯಲ್ಲಿ ಎರಡು ರಸ್ತೆಗಳು ಬಹಳ ಪ್ರಾಮುಖ್ಯವಾದ ರಸ್ತೆಗಳು ಇವೆ. ಒಂದು ಕೃಷ್ಣರಾಜ ಪೇಟೆ ತಾಲ್ಲೂಕು ಕೇಂದ್ರದಿಂದ ಹೇಮಗಿರಿಗೆ ಹೋಗುವ ರಸ್ತೆ. ಇದು ಪುಣ್ಯ ಕ್ಷೇತ್ರ. ಯಾತ್ರಾರ್ಥಿಗಳು ಹೋಗತಕ್ಕಂಥಾ ಸ್ಥಳ. ಈ ರಸ್ತೆಗೆ ೧೫ ವರ್ಷಗಳ ಹಿಂದೆ ಟಾರ್ ಹಾಕಿತ್ತು ಇವೊತ್ತಿನ ದಿವಸ ಆ ಟಾರಿನ ಗುರುತೇ ಇಲ್ಲ. ಆದ್ದರಿಂದ ಆ ರಸ್ತೆಯನ್ನು ರಿಪೇರಿ ಮಾಡಿಸಬೇಕು. ಕೆಲವು ದಿವಸಗಳ ಹಿಂದೆ ನಾವು ಸರ್ಕಾರಕ್ಕೆ ಈ ಬಗ್ಗೆ ಮನವಿಯನ್ನು ಸಲ್ಲಿಸಿದರೂ ಕೂಡ ಈ ರಸ್ತೆಯ ದುರಸ್ತಿ ಆಗಿಲ್ಲ. ಇದನ್ನು ಅತಿ ಶೀಘ್ರವಾಗಿ ಮಾಡಿಸಿಕೊಡುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು. ಹಾಗೆಯೇ ಮಂದಗೆರೆಯಿಂದ ರೈಲ್ವೆಸ್ಟೇಷನಿಂದ ಕಿಕ್ಕೇರಿಗೆ ಬರತಕ್ಕ ರಸ್ತೆಗಳು ೧೫ ವರ್ಷಗಳ ಹಿಂದೆ ಟಾರ್ ಹಾಕಿಲ್ಲ. ಇವೊತ್ತಿನವರೆಗೂ ಅದನ್ನು ರೀಕಂಡೀಷನ್ ಮಾಡಿಲ್ಲ. ಆದ್ದರಿಂದ ಈ ಎರಡು ರಸ್ತೆಗಳನ್ನೂ ಅತಿ ಶೀಘ್ರವಾಗಿ ಮಾನ್ಯ ಸಚಿವರು ಗಮನಕ್ಕೆ ತೆಗೆದುಕೊಂಡು ದುರಸ್ತಿ ಕೆಲಸವನ್ನು ಸಮರ್ಪಕವಾಗಿ ಮಾಡಿಸಿ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ೧೯೭೧ನೇ ಇಸವಿಯಲ್ಲಿ ಕೃಷ್ಣರಾಜಸಾಗರ ಜಲಾಶಯದಿಂದ ಹಿಂಬದಿಯಲ್ಲಿ ಅಂದರೆ ಕಟ್ಟೆಕ್ಯಾತನಹಳ್ಳಿ ಬಳಿ ಒಂದು ಸೇತುವೆ ನಿರ್ಮಾಣಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಮಂಜೂರಾತಿಯಾಗಿ ೭ ವರ್ಷಗಳಾಗಿವೆ. ಒಬ್ಬರು ಕಂಟ್ರಾಕ್ಟರು ಆ ಕೆಲಸದ ಕಂಟ್ರಾಕ್ಟ್ ಕೆಲಸವನ್ನು ತೆಗೆದುಕೊಂಡು ೫ ವರ್ಷಗಳು ಏನೂ ಕೆಲಸ ಮಾಡಲಿಲ್ಲ. ಅನಂತರ ಅವರ ಕಂಟ್ರಾಕ್ಟನ್ನು ರದ್ದು ಮಾಡಿದರು. ಮತ್ತೆ ಈ ಕೆಲಸವನ್ನು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿಗೆ ಕೊಟ್ಟು ಎರಡೂ ಚಿಲ್ಲರೆ ವರ್ಷ ಆಯಿತು. ಅವರೂ ಸಹ ಆ ಕೆಲಸವನ್ನು ಇನ್ನೂ ಪ್ರಾರಂಭ ಮಾಡಿಯೇ ಇಲ್ಲ. ಮಾನ್ಯ ಸಚಿವರು ಆ ಕಡೆ ತಮ್ಮ ಗಮನವನ್ನು ಹರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಹೇಮಾವತಿನದಿಗೆ ಅಡ್ಡಲಾಗಿ ಗೊಂಡಿಹಳ್ಳಿ ಬಳಿ ಸೇತುವೆ ನಿರ್ಮಾಣಕ್ಕಾಗಿ ಅಂದಾಜನ್ನು ಕಳೆದ ಮೂರು ವರ್ಷಗಳಿಂದಲೂ ಬಡ್ಜೆಟ್ಟಿನಲ್ಲಿ ಸೇರಿಸಿದ್ಧರೂ ಕೂಡ ಆ ಕೆಲಸಗಳನ್ನು ತೆಗೆದುಕೊಂಡಿಲ್ಲ. ಈ ವರ್ಷದ ಬಡ್ಜೆಟ್ಟಿನಲ್ಲಿ ಟಿ. ಬಿ. ಸ್ಯಾಂಕ್ಷನ್ ಎಂದು ತಿಳಿಸಿದ್ದಾರೆ, ಇದನ್ನು ಆದಷ್ಟು ಜಾಗ್ರತೆ ಮಂಜೂರು ಮಾಡಿಸಿಕೊಡಬೇಕು. ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಸಂಪರ್ಕವನ್ನು ಕಲ್ಪಿಸುವಂತಹ ಆಯಕಟ್ಟಿನ ಜಾಗದಲ್ಲಿ ಇರುವಂತಹ ಸೇತುವೆ ಕೆಲಸವನ್ನು ಆದಷ್ಟು ಶೀಘ್ರವಾಗಿ ಮಾಡಿಸಿಕೊಡಬೇಕು. ಗೊಂಡಿಹಳ್ಳಿ ಸೇತುವೆ ಅಂದಾಜನ್ನು ಮಂಜೂರು ಮಾಡಿಕೊಡ ಬೇಕೆಂದು ನಾನು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಇನ್ನು ಕಟ್ಟಡಗಳ ವಿಚಾರವಾಗಿ ಒಂದು ಮಾತು ಹೇಳುವುದಾದರೆ, ಕೃಷ್ಣರಾಜಪೇಟೆ ಯಲ್ಲಿ ನೂರಾರು ವರ್ಷಗಳ ಹಿಂದಿನ ಒಂದು ಪ್ರವಾಸಿ ಮಂದಿರ ಇದೆ ಇದು ಬಹಳ ಹಳೆಯದಾಗಿದೆ. ಇಲ್ಲಿ ಬೇರೊಂದು ಹೊಸ ಕಟ್ಟಡವನ್ನು ಕಟ್ಟಬೇಕೆಂದು ಸರ್ಕಾರ ಮಂಜೂರಾತಿಯನ್ನು ಕೊಟ್ಟಿತ್ತು. ಆದರೆ ತುರ್ತು ಪರಿಸ್ಥಿತಿ ಕಾಲದಲ್ಲಿ ಏಕಾನಮಿ ಮೆಷರ್ಸ್ ಇದ್ದುದರಿಂದ ಈ ಕಟ್ಟಡದ ಕೆಲಸವನ್ನು ನಿಲ್ಲಿಸಲಾಯಿತು. ಇವತ್ತು ಈ ತಾಲ್ಲೂಕು ಕೇಂದ್ರಕ್ಕೆ ಬರತಕ್ಕ ಅಧಿಕಾರಿಗಳು ಮತ್ತು ಖಾಸಗಿಯವರಿಗೆ ಒಂದು ಸರಿಯಾದ ಪ್ರವಾಸಿ ಮಂದಿರವಿಲ್ಲದೆ ಬಹಳ ತೊಂದರೆಯಾಗಿರುವುದರಿಂದ ತಕ್ಷಣ ಇದರ ಬಗ್ಗೆ ಕ್ರಮ ಕೈಗೊಂಡು ಕೆಲಸ ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ.

೧೧-೩೦ ಎ.ಎಂ.

ಸ್ವಾಮಿ, ಈ ಸಂದರ್ಭದಲ್ಲಿ ತಮಗೆ ಒಂದು ಮಾತು ಹೇಳುವುದಾದರೆ ದೊಡ್ಡ ದೊಡ್ಡ ಕಟ್ಟಡಗಳನು ದೊಡ್ಡ ದೊಡ್ಡ ನಗರಗಳಲ್ಲಿ ಮತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನಿರ್ಮಾಣ ಮಾಡುತ್ತಿದ್ದೀರೇ ಹೊರತು ಹಳ್ಳಿಗಳಲ್ಲಿ ನಿರ್ಮಾಣ ಮಾಡುತ್ತಿಲ್ಲ. ಅದೇರೀತಿಯಲ್ಲಿ ಶಾಲಾ ಕಟ್ಟಡಗಳ ವಿಷಯದಲ್ಲೂ ಅಷ್ಟೆ. ಇವತ್ತು ನೀರಾವರಿ ಇಲ್ಲದ ಪ್ರದೇಶದಲ್ಲಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಹಳ್ಳಿಗಳಲ್ಲಿ ಈ ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ಹೇಳಬಹುದಾಗಿದೆ. ಏಕೆಂದರೆ ಮಳೆರಾಯನ ಕೃಪಾಕಟಾಕ್ಷದಲ್ಲಿರುವ ಭಾಗಗಳಲ್ಲಿನ ಜನರು ತಮ್ಮ ಭಾಗದ ಚಂದಾ ಹಣವನ್ನು ಕೊಡುವುದಕ್ಕಾಗುತ್ತಿಲ್ಲ. ಮತ್ತು ಸರ್ಕಾರವೂ ಕೂಡ ಇದನ್ನು ತಿಳಿದ ಮೇಲೆ ಅವರನ್ನು ಕೇಳುವುದೂ ಸರಿಯಲ್ಲ. ಸರ್ಕಾರ ಇವತ್ತು ಸುಮಾರು ೮೭ ಕೋಟಿ ರೂಪಾಯಿಗಳ ಮೌಲ್ಯದ ಕಟ್ಟಡಗಳನ್ನು ಹೊಂದಿದೆ. ಇದರಲ್ಲಿ ಸುಮಾರು ೯೦ ಭಾಗ ಕಟ್ಟಡಗಳು ಬರೀ ಪಟ್ಟಣಗಳಲ್ಲೇ ಇವೆ. ತಮಗೆ ಒಂದು ಮಾತು ಹೇಳುವುದಾದರೆ ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿರತಕ್ಕ ಕೆಲವು ಪ್ರೌಢ ಶಾಲೆಗಳು ದನದ ಕೊಟ್ಟಿಗೆಗಳಲ್ಲಿ ಕೆಲಸ ಮಾಡುತ್ತಿವೆ. ನನ್ನ ಒಂದು ಕಳಕಳಿಯ ಮನವಿ ಏನೆಂದರೆ, ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳೇನಿವೆ ಅಲ್ಲಿ ಶಾಲಾ ಕಟ್ಟಡಗಳಿಗೋಸ್ಕರ ತಾವು ಅಲ್ಲಿನ ಜನಗಳಿಂದ ಚಂದಾ ಹಣವನ್ನು ಕೇಳುವುದು ಸರಿಯಲ್ಲ. ಏಕೆಂದರೆ ಆ ಜನಗಳಿಗೆ ತಮ್ಮ ಜೀವನವನ್ನೇ ನಡೆಸುವುದು ಕಷ್ಟವಾಗಿರುತ್ತದೆ. ಆದ್ದರಿಂದ ಚಂದಾ ವಸೂಲಿ ನೀತಿಯನ್ನು ಸರ್ಕಾರ ಬದಲಾಯಿಸಿಕೊಂಡು ಆರ್ಥಿಕವಾಗಿ ಹಿಂದುಳಿದ ಹಾಗೂ ದುರ್ಬಲ ಪ್ರದೇಶಗಳಲ್ಲಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಸರ್ಕಾರವೇ ನಿರ್ಮಿಸಿಕೊಡಬೇಕೆಂದು ಕೇಳಿಕೊಂಡು, ಮಾನ್ಯ ಅಧ್ಯಕ್ಷರು ಗಂಟೆ ಬಾರಿಸುತ್ತಿರುವುದರಿಂದ ಅವರ ಆಣತಿಗೆ ಮಣಿದು, ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

ಶ್ರೀ ಟಿ. ಸೋಮಪ್ಪ (ಕೂಡ್ಲಿಗಿ).—ಸನ್ಮಾನ್ಯ ಸಭಾಧ್ಯಕ್ಷರೆ, ಈ ದಿವಸ ಲೋಕೋಪಯೋಗಿ ಶಾಖೆಯ ಈ ಬಡ್ಜೆಟನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಸರ್ಕಾರಕ್ಕೆ ಕೆಲವುಸೂಚನೆಗಳನ್ನು ಕೊಡಬಯಸುತ್ತೇನೆ. ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರತಕ್ಕ ವಿಷಯ ಎಂದರೆ ಒಂದಾನೊಂದು ಕಾಲದಲ್ಲಿ ಪಿ.ಡಬ್ಲ್ಯು.ಡಿ. ಎಂದರೆ it was the first enemy to the State ಎನ್ನತಕ್ಕಂಥ ಒಂದು ಉಕ್ತಿ ಇತ್ತು, ನಂತರ ಇದನ್ನು Public Waste ಮಾಡತಕ್ಕ ಇಲಾಖೆ ಎಂದೂ ಕರೆದರು. ಆದರೆ ನಮ್ಮ ಸುದೈವದಿಂದ ಇವತ್ತು ಈ ಇಲಾಖೆಯನ್ನು ಒಂದು ಒಳ್ಳೆಯ ವ್ಯವಸ್ಥಿತವಾದ, ಪ್ರಯೋಜನಕಾರಿಯಾದ ಇಲಾಖೆಯನ್ನಾಗಿ ಮಾಡತಕ್ಕ ಸಂದರ್ಭ ನಮ್ಮ ಸರ್ಕಾರಕ್ಕೆ ಸಿಕ್ಕಿದೆ. ಅದು ಹೇಗೆಂದರೆ ಇದು ಪಬ್ಲಿಕ್‌ವೇಸ್ಟ್ ಆಗುವ ಇಲಾಖೆಯಲ್ಲ. ಇದು ಬಂಗಾರದಂಥ ಇಲಾಖೆ, ಇಂಥ ಇಲಾಖೆಗೆ ಬಂಗಾರದಂಥ ಶ್ರೀ ಬಂಗಾರಪ್ಪನವರೇ ಮಂತ್ರಿಗಳಾಗಿ ಬಂದಿದ್ದಾರೆ. ಇವತ್ತು ಬಂಗಾರಕ್ಕೆ ಎಷ್ಟು ಕಿಮ್ಮತ್ತು ಇದೆಯೋ ಅದೇ ಕಿಮ್ಮತ್ತು ಈ ಇಲಾಖೆಗೂ ಇದೆ ಎಂದು ಹೇಳಬಯಸುತ್ತೇನೆ. ಕೆಲವು ಮಾನ್ಯ ಸದಸ್ಯರು ಈ ಇಲಾಖೆಗೆ ಸಾಕಷ್ಟು ಹಣವನ್ನು ಕೊಟ್ಟಿಲ್ಲವೆಂದು ತಿಳಿಸಿದ್ದಾರೆ, ಆದರೆ ಆ ರೀತಿ ಹೇಳುವುದು ಸರಿಯಲ್ಲ. ಸರ್ಕಾರ ಈ ಇಲಾಖೆಗೆ ಸಾಕಷ್ಟು ಹಣವನ್ನು ಕೊಟ್ಟಿದೆ. ಆದರೆ ಸರ್ಕಾರದವರು ಕೊಟ್ಟಿರತಕ್ಕ ಹಣವನ್ನು ಸರಿಯಾಗಿ ಸದುಪಯೋಗ ಮಾಡಿದ್ದೇ ಆದರೆ ಜನೋಪಯುಕ್ತ ಕಾರ್ಯಕ್ರಮಗಳು ಸುಗಮವಾಗಿ ಸಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಕೊಟ್ಟಿರತಕ್ಕ ಹಣವನ್ನು ಈ ಇಲಾಖೆಯ ಅಧಿಕಾರಿಗಳು ರಸ್ತೆಗಳಿಗೆ, ಕಟ್ಟಡಗಳಿಗೆ, ಸೇತುವೆಗಳಿಗೆ ಕ್ರಮವಾಗಿ ಖರ್ಚುಮಾಡಿದರೆ ಇಲಾಖೆಯ ಮೇಲಿರುವ ಅಪಾದನೆಗಳನ್ನು ದೂರ ಮಾಡುವುದಕ್ಕೆ ಅನುಕೂಲವಾಗುವುದಲ್ಲದೆ, ಇದು ಒಂದು ಉತ್ಕೃಷ್ಟ ಖಾತೆ ಎಂದು ಎನಿಸಿಕೊಳ್ಳುತ್ತದೆಂದು ಹೇಳಬಯಸುತ್ತೇನೆ. ಈ ಕೆಲಸಗಳನ್ನು ಸಮರ್ಪಕವಾಗಿ ಮಾಡುವುದಕ್ಕೆ ಜಿಲ್ಲಾ ಮಟ್ಟದಲ್ಲಿ ಅಸಿಸ್ಟೆಂಟ್ ಇಂಜಿನಿಯರ್‌ಗಳು, ಸೂಪರಿಂಟೆಂಡೆಂಟ್‌ಗಳೂ ಇರುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಯಾವುದಾದರೂ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಬೇಕಾದರೆ ಲೋಕಲ್ ಕಮಿಟಿಗಳಿಲ್ಲ. ಆದ್ದರಿಂದ ಶಾಸಕರು ಮತ್ತು ಮುನಿಸಿಪಲ್ ಅಧ್ಯಕ್ಷರನ್ನು ಸೇರಿಸಿ ಒಂದು ಲೋಕಲ್ ಕಮಿಟಿ ಮಾಡಿ ರಸ್ತೆಗಳು, ಸೇತುವೆಗಳು ಮತ್ತಿತರ ಕೆಲಸ ಕಾರ್ಯಗಳನ್ನು ಅವರ ಸಲಹೆ ಮೇರೆಗೆ ಮಾಡಿದರೆ ಪ್ರಗತಿಯಾಗುವುದರಲ್ಲಿ ಸಂದೇಹವೇ ಇಲ್ಲ. ಇವತ್ತು ಕೆಲವು ತಾಲ್ಲೂಕುಗಳಲ್ಲಿ ಸ್ಟೇಟ್ ಹೈವೇ ಇದೆ, ಆದರೆ ಇನ್ನು ಕೆಲವು ತಾಲ್ಲೂಕುಗಳಲ್ಲಿ ಈ ಸ್ಟೇಟ್ ಹೈವೇ ಇಲ್ಲದಿರುವುದರಿಂದ ಅಲ್ಲೂ ಕೂಡ ಸ್ಟೇಟ್ ಹೈವೇ ಮಾಡಬೇಕೆಂದು ಹೇಳಬಯಸುತ್ತೇನೆ. ಉದಾಹರಣೆಗೆ ಹಡಗಲಿ ತಾಲ್ಲೂಕಿನಿಂದ ನೇರವಾಗಿ ಬೆಂಗಳೂರಿಗೆ

ಆಗಲಿ ಅಥವಾ ಬೇರೆ ಕಡೆಗೆ ಆಗಲಿ ಸ್ಟೇಟ್ ಹೈವೇ ಇಲ್ಲ, ಮತ್ತು ಅಲ್ಲಿಂದ ಬೆಂಗಳೂರಿಗೆ ಒಂದು ಡೈರೆಕ್ಟ್ ಬಸ್ ಕೂಡ ಇಲ್ಲ. ಆದ್ದರಿಂದ ನಮ್ಮ ಹಡಗಲಿ ತಾಲ್ಲೂಕಿಗೆ ಹೆಚ್ಚು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಹಿಂದುಳಿದ ಪ್ರದೇಶಗಳು, ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ಗಳಿಗೂ ಈ ಸ್ಟೇಟ್ ಹೈವೇ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟೇ ಅಲ್ಲದೆ ಯಾವ ತಾಲ್ಲೂಕುಗಳಲ್ಲಿ ಸರ್ಕಾರಿ ಕಟ್ಟಡಗಳ ವ್ಯವಸ್ಥೆ ಸರಿಯಿಲ್ಲದೆ ಅನಾನುಕೂಲಗಳಾಗಿವೆ ಅವುಗಳ ಬಗ್ಗೆ ಮಾಹಿತಿ ತರಿಸಿಕೊಂಡು ಅಂಥ ಕಡೆಗಳಲ್ಲಿ ಸೂಕ್ತ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಮಾನ್ಯ ಸಭಾಧ್ಯಕ್ಷರ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಇತ್ತೀಚೆಗೆ ರಚಿತವಾದ ತಾಲ್ಲೂಕುಗಳಲ್ಲಿ, ಉದಾಹರಣೆಗೆ ಹಗರಿ ಬೊಮ್ಮನಹಳ್ಳಿ ಇನ್ನೂ ಮುಂತಾದ ತಾಲ್ಲೂಕುಗಳಲ್ಲಿ ಒಂದು ಉತ್ತಮವಾದ ತಾಲ್ಲೂಕು ಕಚೇರಿ ಕಟ್ಟಡಗಳಾಗಲಿ, ಅಥವಾ ಪ್ರವಾಸಿ ಮಂದಿರಗಳಾಗಲಿ ಇಲ್ಲ. ಆದ್ದರಿಂದ ಸರ್ಕಾರ ಇದರ ಬಗ್ಗೆ ತೀವ್ರ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ ಈಗಾಗಲೇ ನಮ್ಮ ಹಗರಿ ಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ ತಾಲ್ಲೂಕು ಕಚೇರಿಯ ಕಟ್ಟಡಕ್ಕಾಗಿ ಅಂದಾಜು ತಯಾರಿಸಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿರುವುದರಿಂದ ಈ ತಾಲ್ಲೂಕಿಗೆ ಹೆಚ್ಚಿನ ಲಕ್ಷ್ಯವನ್ನೂ ಮತ್ತು ಪ್ರಾಶಸ್ತ್ಯವನ್ನೂ ಕೊಟ್ಟು ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಲಿಫ್ಟ್ ಇರಿಗೇಷನ್ ವಿಷಯದ ಬಗ್ಗೆ ಹೇಳುವುದಾದರೆ, ಇದು ಕೆಲವು ಅಸಿಸ್ಟೆಂಟ್ ಇಂಜಿನಿಯರ್‌ಗಳಿಗೆ ಸಂಬಂಧಪಟ್ಟಿದ್ದು, ಉದಾಹರಣೆಗೆ ಹೊಸಪೇಟೆಯಲ್ಲಿನ ಮರಿಮನಹಳ್ಳಿ ಲಿಫ್ಟ್ ಇರಿಗೇಷನ್ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್‌ಗೆ ಸೇರಿದೆ. ಈ ಅಸಿಸ್ಟೆಂಟ್ ಇಂಜಿನಿಯರ್ಸ್ ಎಂಥವರು ಎಂದರೆ ಇವರಿಗೆ ಮೆಕ್ಯಾನಿಕಲ್ ನಾಲೆಡ್ಜ್ ಇರುವುದಿಲ್ಲ. ೪೦-೮೦ ಹೆಚ್.ಪಿ. ಲಿಫ್ಟ್ ಇರಿಗೇಷನ್‌ಗೆ ೩೦-೪೦ ಹಾಕಿರುತ್ತಾರೆ. ಇನ್ನು ಕೆಲವು ಕಡೆ ೮೦-೧೦೦ ಹೆಚ್.ಪಿ. ಹಾಕಿರುತ್ತಾರೆ. ಇದರಿಂದಾಗಿ ಪೈಪ್‌ಗಳು ಒಡೆದುಹೋಗಿವೆ. ಈ ಲಿಫ್ಟ್ ಇರಿಗೇಷನ್ ಕೆಲಸ ಹೋದವರ್ಷವೇ ಆಗಬೇಕಾಗಿದ್ದುದು ಆಗದೆ ಅದು ಹಾಗೆಯೇ ನಿಂತು ಹೋಗಿದೆ. ಈ ಅಸಿಸ್ಟೆಂಟ್ ಇಂಜಿನಿಯರ್‌ಗಳಿಗೆ ಒಳ್ಳೆಯ ಪರಿಜ್ಞಾನ ಇಲ್ಲದಿರುವುದರಿಂದ ಅಲ್ಲಿಗೆ ಒಳ್ಳೆಯ ಮೆಕ್ಯಾನಿಕಲ್ ನಾಲೆಡ್ಜ್ ಇರುವವರನ್ನು ಹಾಕಬೇಕೆಂದು ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

ನನ್ನ ಕ್ಷೇತ್ರದಲ್ಲಿ ಕೆಲವು ಕೆಲಸಗಳಿಗೆ ಎಸ್ಟಿಮೇಟ್ ಆಗಿದ್ದುವು. ಉದಾಹರಣೆಗೆ ಅಪ್ಪರ್ ತುಂಗಭದ್ರ ಸ್ಕೀಂ ಇದೆ. ಹಡಗಲಿ, ಹಿರೇಹಳ್ಳಿ ಸ್ಕೀಂ ಇದೆ, ಈ ಎರಡಕ್ಕೂ ಹಿಂದೆ ಎಸ್ಟಿಮೇಟ್ ಆಗಿದ್ದು ನಮಗೆ ಗೊತ್ತಿದೆ. ಅದೇ ಪ್ರಕಾರ ಸಿಂಗಟಾಣ ಹಡಗಲಿ ತುಂಗಭದ್ರ ಕ್ರಾಸ್‌ಗೆ ಸೇತುವೆ ಆಗಬೇಕು ಎಂದು ಎಸ್ಟಿಮೇಟ್ ಆಗಿತ್ತು. ಈ ಬ್ರಿಡ್ಜ್ ಆದರೆ ಬಳ್ಳಾರಿ ಮತ್ತು ಸೊಲ್ಲಾಪುರಕ್ಕೆ ಹೋಗಲಿಕ್ಕೆ ಅನುಕೂಲವಾಗುತ್ತದೆ ಇದರ ಕಡೆ ಸರ್ಕಾರದವರು ಹೆಚ್ಚಾಗಿ ಗಮನಕೊಡುತ್ತಿಲ್ಲ. ಈ ಮೂರು ಯೋಜನೆಗಳ ಬಗ್ಗೆ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಅನುಕೂಲ ಮಾಡಿಕೊಟ್ಟರೆ ಈ ಹಿಂದುಳಿದ ಪ್ರದೇಶದ ಹಳ್ಳಿಗಳಿಗೆ ರೋಡುಗಳ ಹಾಗೂ ಸಂಪರ್ಕದ ಅನುಕೂಲ ಸಿಕ್ಕುತ್ತದೆ, ಎಂದು ನಾನು ಸೂಚನೆ ಮಾಡುವುದಕ್ಕೆ ಇಷ್ಟಪಡುತ್ತೇನೆ,

ಫ್ಯಾಮಿನ್ ರಿಲೀಫ್ ವರ್ಕ್ಸ್‌ನಲ್ಲಿ ಪ್ರತಿಯೊಂದು ರೋಡುಗಳನ್ನು ಮಾಡಿದ್ದಾರೆ. ಆದರೆ ಇವು ಕಾಮಗಾರಿ ಇಲಾಖೆಗೆ ಸೇರಬೇಕೇ ಅಥವಾ ಯಾವ ಇಲಾಖೆಗೆ ಸೇರಿದಂಥ ರೋಡುಗಳು ಎಂದು ಹೇಳುವಂಥ ಸಂದರ್ಭ ಇಲ್ಲವಾಗಿದೆ. ಫ್ಯಾಮಿನ್ ರಿಲೀಫ್‌ನಲ್ಲಿ ಮಾಡಿದಂಥ ರೋಡುಗಳಿಗೆ ಈ ದುರಸ್ತಿ ನಡೆಯಬೇಕಾಗಿದೆ. ಇವುಗಳನ್ನು ಕಾಮಗಾರಿ ಇಲಾಖೆಯವರು ತೆಗೆದುಕೊಂಡರೆ ಸರಿಯಾದ ರೀತಿಯಲ್ಲಿ ಕೆಲಸಗಳು ನಡೆಯಬಹುದು, ಈ ರೋಡುಗಳು ಸರಿಯಾಗಿಲ್ಲದೆ ಇರುವುದರಿಂದ ಅನೇಕ ಹಳ್ಳಿಗಳಿಗೆ ಬಸ್ಸುಗಳೇ ಹೋಗುವಂತಿಲ್ಲ. ಈ ಎಲ್ಲಾ ರೋಡುಗಳನ್ನು ಇಲಾಖೆಯವರು ತೆಗೆದುಕೊಂಡು ರಿಪೇರಿ ಮಾಡಿದರೆ ಸಾಕಷ್ಟು ಸಂಖ್ಯೆಯಲ್ಲಿ ಬಸ್ಸುಗಳು ಓಡಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಇನ್ನೊಮ್ಮೆ ಈ ಎಲ್ಲಾ ಅನುಕೂಲತೆಗಳ ಕಡೆ ಸರ್ಕಾರದವರು ಗಮನಕೊಟ್ಟು ಹಳ್ಳಿಯವರಿಗೆ ಸಹಾಯ ಮಾಡಬೇಕು ಎಂದು ಹೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri C. M. Arumugham (K.G.F.). Mr. Speaker, Sir, this is a very important demand. The Public Works Department was to clear lot of tension and agitation in those days. Since 1957, every year we used to raise the question about Sharavathi Hydro Electricity demand for an enquiry. But it is not there now. Because, they have now bifurcated this electricity department and therefore we are not able to raise any points on that, Sir, the Public Works Department has to deal with several subjects. To begin with I will say it would be proper to avoid establishment expenditure in the P.W.D. and Minor Irrigation. Sir, at present there are two Chief Engineers looking after this. One for communication and the other for minor irrigation. In this connection, I would suggest that right from the Assistant Engineers, Executive Engineers and Superintending Engineers they should be asked to look after this minor irrigation as well as P.W.D. This minor irrigation was with the P.W.D when Srikantaiah was incharge of this Department. So, if these two departments are put together I think it would help both the departments whenever machineries and other things required for their work. I hope Government would accept this small suggestion.

Now, Sir, the Public Works Department provides funds to take up the work of construction of buildings for offices, hospitals, schools and for other purposes. I would say the building construction by the P.W.D. does not complete in one year There are instances wherein Government has taken 5 years to complete the buildings. Thus, we are not able to find out the assessment and performance of the Public Works Department in a particular year. Secondly, there will be delay in sanctioning the amount. If you go through the statement you will see some of the works sanctioned were not able to be taken up for several reasons. One reason is sanction of estimate for this there are so many procedures. First, the sanction of estimate and secondly it requires administrative and technical sanction which takes lot of time. I think persons looking after this should be asked to expedite the work and there should be follow up action whenever estimates are prepared for a particular work.

Sir, in the State of Karnataka there is a lot of need for residential quarters for variours departments and in fact as per the survey conducted so far the Government of Karnataka requires a lot of residential buildings for various departments. Even today several Government Offices are being located in rented buildings by paying huge rents. Therefore, we need lot of buildings not only for Government Offices but also for schools. When we discussed education demand it is said that so many Government school buildings are in a very bad condition and some schools are situated in temples, some

schools have no buildings at all etc. If this is the conditi^n prevailing in our State, I think it would certainly reflect on the State, and civilisation of our people. But I wonder how the Public Works Department has accorded sanction to construct what is called I.A.S. Officers Club Building at Bangalore. Sir, the Government of Karnataka has spent Rs. 14 lakhs for I.A.S. Officers Club. These I.A.S. Officers-they want club for themselves ; they want shopping centre; they want schools and colleges; they want a marriage hall for themselves; and then they want a co-operative society for themselves. Sir, they have taken direct loan from the Government of Karnataka to the tune of Rs. 63 lakhs. Where is the need ? I say it is a wasteful expenditure. Sir, in villages there are so many poor people who do not have shelter, there are no school buildings. Whereas in Bangalore we have got so many clubs including night clubs which I have not visited so far. To become a me ber of the Bowring Institute they have to stand in queue; ordinarily it is not possible to become a member of that Institute. Inspite of there being several clubs in Bangalore, is it necessary to construct an IAS club exclusively for these officers at a cost of Rs. 14 lakhs? Now we are realising that the caste system which was prevalent must go. When that is so, why are Govt. creating a new class of society called the IAS class or IPS class or IFS class or doctor's class or engineers class. The Government must discourage this tendency I know the Hon. Minister Sri Bangarappa is a very bold man and I would ask him to stop this construction of the IAS Club immediately. Otherwise, people will revolt against the Government. It is a sheer waste and it is not necessary to have it only for one section of the people. There is no need for it; on the contrary we want more Janatha Houses when we see people living in slums in Bangalore. The Corporation has constructed a multystoreyed building consisting of 26 floores and I am told that it is the tallest building in the country. Alongside of it we see slums. When this is the condition, when we are not able to provide them houses. where is the need to constrruct a club for IAS Officers spending Rs. 14 lakhs. I request the Hon Minister to stop the construction immediately.

Now, I come to roads. We see from the report that there are about 90,567 kilo meters of roads spread over 1,91,778 sq. kilo meters. This works out to 47 kilo meters per 100 sq. kilo meters. But what is the condition of the roads in the State ? The figures may show that we are high up in the all-India list but the roads are very bad in our State. We have got various categories of roads *viz.* National High ways State Highways. Major District Roads, other District Roads and Village Roads. This classification has been done in the good old days by the Chief Engineers sitting in Bangalore. In those days the Chief Engineers was not available to the people. Now a days have

changed and we must have more State Highways, National Highways Major District Roads, other District Roads and Village Roads. Now, the Maintenance grants per K.M. per year as follows :

		Rs.
State Highways	...	4,500
Major District Roads	...	2,500
Other District Roads	...	2,000
Village Roads	...	1,000
Rural Roads	...	1,000

It is highly impossible to maintain these roads. We have got 26,448 kms of T.D.B. roads. How is it possible to maintain these roads ? So, we must have more funds and we must try to get more funds from the Government of India. Also the Rural Communication Roads must be upgraded as District Major Roads, District Major Roads into State Highways and State Highways into National Highways. So far as National Highways are concerned, the position is as follows :—

State		k.ms.
Andhra Pradesh	...	277
Karnataka	...	192
Kerala	...	39
Maharashtra	...	308
Tamilnadu	...	130

Then, the position of length of highways is as follows :—

Andhra Pradesh	...	2,299
Karnataka	...	1,968
Kerala	...	1838
Maharashtra	...	2,866
Tamilnadu	...	1,739

So, I would appeal to the Hon. Minister for Public Works to press the Government of India to take over some of the State Highways as National Highway so that he will get more money for the maintenance of these roads. Roads are considered to be a symbol of our civilisation of our country, but some of our villages are not approachable. There are no approach roads. There are 2,000 villages in Karnataka which are either within 5 miles of the main roads. or which are 5 miles away from the main roads. I want a definite answer from the Minister how long they will take to provide approach roads to these villages. In the rural parts most of the roads are unusable and most of them are not motorable. He must have come to know about this during his electioneering campaign. I would therefore request the Hon. Minister to provide better roads,

Sometimes roads have bad curves and sometimes they are narrow and as a result a number of accidents take place. Due to breakdown of vehicles, human failure and narrow roads and bad curves, the accidents have increased from 4,666 in 1968-69 to 8,258 in 1976-77 and 1456 persons were killed. In order to avoid these accidents I appeal to the Minister that he must widen the roads, straighten the curves and provide more illumination.

Now, I come to the 11,401 gang mazdoors who are working in the P.W.D. They have been working for the last 5 to 15 years and they are also getting only Rs. 4 to 5 per day Some are on daily wages and some on monthly wages. They do not have gratuity, provident fund, medical facilities, canteen facilities, clothing allowance or anything of that sort.

11-00 A.M.

Even if they work on holidays, they get their usual pay Therefore, I urge upon the Government to regularise them and absorb them in the Department and entitle them for all service previleges. There is another category of people in the department called as Work Charged Establishment. There are 13,000 persons and out of them 6700 are working under Communications and Buildings Department and 7000 are working under the Irrigation Department for the last 10 to 20 years. They have been paid as class III officials. They get their salary and they are also entitled for gratuity but they are not permanent employees. They are not entitled for pension. Some of the persons belonging to work aharged establishment are deputed to work in Karnataka Electricity Board and Water Supply and Sewerage Board I want to bring to the notice of the Government that in Tamilnadu and Kerala they have regularised their appointments. It is high time that you regularise the services of these people and make them permanent and not allow them to be casual labourers for 15 to 20 years. I appeal to the Hon. Minister to regularise the services of these people. Under irrigation, according to the statement of our Chief Minister we have brought 18% of land under irrigation. I was told that there is potential to raise it to 40%. The Work Charged Establishment could be very usefully employed here. I may suggest that it may not be impossible for them to absorb these 24,000 persons as permanent employees. They must have a plan to see that at least in another three or four years all these workers are made permanent in the Department and give them suitable salary so that they can maintain themselves and their families.

One more point that I wish to make is, when you regularise the services of 24,000 persons, you must also see that adequate reservation is made for for Scheduled Castes and Scheduled Tribes. Today there

is not adequate representation for these SC and ST castes. When those persons were appointed as either gangmen or to work on the work charged establishment, they have not followed any rule. Therefore, you must make special recruitment of SC and ST candidates when you regularise their appointments. Late Sri Rajaji, our great leader, said that Public Works Department is enemy No. 1 to the general public. I do not know under what circumstances he said it. He said it about Madras. But I am constrained to say that the Public Works Department is enemy No. 1 to the Scheduled Castes and Scheduled Tribes so far as service conditions are concerned. We have inadequate representation in the P.W.D. I know the Hon. Minister will look into the matter. There are 1,500 Assistant Executive Engineers in the department and we have only 13 Assistant Executive Engineers belonging to the SC and ST caste. So, where is adequate representation ? I want to give a little information which I have. Take the Bangalore Development Authority. The total number of Draftsmen is 20 out of whom only 1 belonging to SC and ST. Among Junior Engineers out of 27 only two belong to SC and ST. Assistant Engineers out of 37 only 4 belong to SC and ST. Assistant Executive Engincers, out of 13 only one is SC. Executive Engineers out of 5 only 1 belongs to SC and ST.

	Total No.	SC/ST
Karnataka Housing Board :		
Junior Engineers	29	Nil
Asst. Engineers	13	5
Asst. Executive Engrs.	7	2
Executive Engineers	3	1
Bangalore City Corporation :		
Junior Engineers	38	1
Asst. Engineers	38	2
Asst. Executive Engrs.	19	...
Executive Engineers	5	1

I want to bring to the notice of the Hon. Minister there are 29 Chief Engineers, and one Chief Engineer is going to retire shortly. You appoint some Chief Engineers from amongst the Superintending Engineers. There are qualified and competent persons in the P.W.D. I appeal to the Ministers to look into this. Last year the Government of Karnataka decided to promote 160 Assistant Executive Engineers and only 6 posts were given to SC and ST. There are 60 engineers who have put in service of 15 years. and you kindly promote them so that we will have the quota for SC and ST.

With these words I thank the Chair for giving me a chance to speak on this Demand.

† ಶ್ರೀ ಜಿ. ಎಫ್. ಉಪ್ನಾಳ್ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಈ ಲೋಕೋಪಯೋಗಿ ಇಲಾಖೆಯ ಬೇಡಿಕೆಯ ಮಂಡನೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನಮ್ಮ ಹಿರಿಯರೆಲ್ಲರೂ ಹೇಳಿದಂತೆ ಈ ಲೋಕೋಪಯೋಗಿ ಇಲಾಖೆ ಬಹಳ ದೊಡ್ಡ ಇಲಾಖೆ. ಈ ಇಲಾಖೆಗೆ ಬಜೆಟ್ಟನಲ್ಲಿ ಏನು ಕೊಟ್ಟಿದ್ದಾರೆ ಇದು ಬಹಳ ಕಡಿಮೆಯಾಗಿದೆ, ದಯಮಾಡಿ ನಮ್ಮ ಮುಖ್ಯ ಮಂತ್ರಿಗಳು ಈ ಇಲಾಖೆಗೆ ಇನ್ನಷ್ಟು ಹೆಚ್ಚಿಗೆ ಹಣವನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಧಾರವಾಡ ಜಿಲ್ಲೆಯಲ್ಲಿ ಬಳ್ಳಾರಿ, ರಾಯಚೂರು ಗದಗ–ಹುಬ್ಬಳ್ಳಿ, ಪೂನಾ–ಬಾಂಬೆಗೆ ಹೋಗತಕ್ಕ ಹೈವೇನಲ್ಲಿ ನಾಲ್ಕು ವರ್ಷದಿಂದ ಒಂದು ಸರಿಯಾದ ಪೂಲ್ ಇಲ್ಲದೆ, ಅದರಿಂದ ಬಹಳ ತೊಂದರೆಯಾಗಿದೆ. ಅದೇ ಪ್ರಕಾರ ಬಾಗಲಕೋಟೆ–ಗದಗ, ಹಾವೇರಿ–ಬೆಂಗಳೂರು ಈ ಕಡೆ ಬರಬೇಕಾದರೆ ವಾಹನಗಳು ಹರಿಜನರ ಓಣಿಯಲ್ಲಿ ಹೋಗುತ್ತದೆ. ಇದರಿಂದ ಹರಿಜನರಿಗೆ ಬಹಳ ತೊಂದರೆಯಾಗುತ್ತಿದೆ. ಹಿಂದಿನ ಲೋಕೋಪಯೋಗಿ ಮಂತ್ರಿಗಳಾದ ಶ್ರೀಕಂಠಯ್ಯನವರು ಸಮಕ್ಷಮ ಬಂದು ನೋಡಿ ನಾಲ್ಕು ತಿಂಗಳಲ್ಲಿ ನಾವು ಸರಿಯಾದ ರಸ್ತೆ ಮಾಡಿಕೊಡುತ್ತೇವೆ ಎಂದು ಹೇಳಿದ್ದರು. ಇದುವರೆಗೂ ಮಾಡಿಕೊಟ್ಟಿಲ್ಲ. ಆದ್ದರಿಂದ ಅದನ್ನು ತಕ್ಷಣ ಮಾಡಬೇಕೆಂದು ನಾನು ಸಲಹೆ ಕೊಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಹೋಗಬೇಕಾದರೆ ೨ ಮೈಲಿ, ಮೂರು ಮೈಲಿ, ೪ ಮೈಲಿ ಹೋಗಬೇಕು. ಆ ಭಾಗಗಳಲ್ಲಿ ತಕ್ಷಣ ಸರಿಯಾದ ರಸ್ತೆಗಳನ್ನು ಮಾಡಿಕೊಟ್ಟರೆ ಅದರಿಂದ ಗ್ರಾಮೀಣ ಹಳ್ಳಿಯವರಿಗೆ ಅನುಕೂಲವಾಗುತ್ತದೆ. ಅದರ ಪ್ರಕಾರ ತಾವು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಭಾರತೀಯ ಸಂಸ್ಕೃತಿಯ ಪ್ರಕಾರ ಧರ್ಮಗುಡಿಗಳಾದ ದೇವಸ್ಥಾನಕ್ಕೆ ಹೋಗುವಂಥ ಪ್ರದೇಶಗಳಲ್ಲಿ ರಸ್ತೆಗಳನ್ನು ತಕ್ಷಣ ಮಾಡಬೇಕು. ನಮ್ಮ ಕರ್ನಾಟಕದಲ್ಲಿ ಲೋಕೋಪಯೋಗಿ ಇಲಾಖೆ ಎಲ್ಲಾ ರಾಜ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬೆಳವಣಿಗೆಯನ್ನು ಮಾಡಿಕೊಂಡು ಬಂದಿದೆ ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಬಿ. ವಿ. ರಾಮ ಚಂದ್ರ ರೆಡ್ಡಿ (ವರ್ತೂರು).—ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಮೇಲೆ ಈಗಾಗಲೇ ಹಲವಾರು ಜನ ಮಾನ್ಯ ಮಿತ್ರರು ರಸ್ತೆ ಇಲ್ಲ, ಕಟ್ಟಡ ಇಲ್ಲ, ಸೇತುವೆ ಇಲ್ಲ ಎಂದು ಹೇಳಿದ್ದಾರೆ. ನಾನು ಆ ಟಾಪಿಕ್‌ಗೆ ಹೋಗುವುದಿಲ್ಲ. ಆದರೆ ನಾನು ಒಂದು ವಿಷಯವನ್ನು ಹೇಳುತ್ತೇನೆ. ಏನೆಂದರೆ, ಈ ಇಲಾಖೆಯಲ್ಲಿ ರೂಲ್ಸ್ ಇಲ್ಲ, ಡಿಸಿಪ್ಲೀನ್ ಇಲ್ಲ. ಇಷ್ಟು ಕೋಟಿ ರೂಪಾಯಿಗಳನ್ನು ನಾವು ಮಂಜೂರು ಮಾಡಿದ್ದರೂ ಸಹ ಒಳ್ಳೆಯ ರೀತಿಯಲ್ಲಿ ಖರ್ಚಾಗುವ ಒಂದು ವ್ಯವಸ್ಥೆ ಈ ಇಲಾಖೆಯಲ್ಲಿ ಇಲ್ಲ. ಲೋಕೋಪಯೋಗಿ ಇಲಾಖೆಯಲ್ಲಿ ೨ ಪ್ರಮುಖ ಹಂತಗಳು ಎಂದರೆ ಎಸ್ಟಿಮೇಷನ್ ಮತ್ತು ಎಕ್ಸಿಕ್ಯೂಷನ್ : ಎಸ್ಟಿಮೇಷನ್ ಬಹಳ ಮಹತ್ತರವಾದ ವಿಚಾರ. ಷೆಡ್ಯೂಲ್ ಆಫ್ ರೇಟ್ಸ್. ಈ ಷೆಡ್ಯೂಲ್ ಆಫ್ ರೇಟ್ಸ್‌ನಿಂದ ಎಸ್ಟಿಮೇಷನ್ ಮೌಲ್ಯವಾಗುತ್ತದೆ. ಇದರಲ್ಲ ಬಹಳ ತಪ್ಪುಗಳಿವೆ. ಬೆಂಗಳೂರು ಸರ್ಕಲ್ಲಿನ ೧೯೭೮–೭೯ರ ಷೆಡ್ಯೂಲ್ ಆಫ್ ರೇಟ್ಸ್ ಇದೆ, ಇದರಲ್ಲಿರುವ ದೋಷಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. Schedule of Rates for 1978–79. The Rates are for supply at site including cost and conveyance of materials, lead and lift, taxes. incidental charges, labour and hire charges of machinery etc., complete ಎಂದು ಕೊಟ್ಟಿದ್ದಾರೆ. ಮೊದಲನೇ ಐಟಂ ಜೆಲ್ಲಿ. ೭ನೇ ಐಟಂ ಗ್ರಾನೈಟ್ ಸ್ಲ್ಯಾಬ್ಸ್. ಕಳೆದ ೩ ವರ್ಷಗಳಲ್ಲಿ ಟ್ರಾನ್ಸ್‌ಪೋರ್ಟ್ ಬೆಲೆ ಜಾಸ್ತಿಯಾಗಿದೆ, ಲೇಬರ್ ಬೆಲೆ ಜಾಸ್ತಿಯಾಗಿದೆ, ಬ್ಲಾಸ್ಟಿಂಗ್ ಮೆಟೀರಿಯಲ್ ಬೆಲೆ ಜಾಸ್ತಿಯಾಗಿದೆ. ಷೆಡ್ಯೂಲ್ ಆಫ್ ರೇಟ್ಸ್ ೧೯೭೬-೭೭, ೧೯೭೭-೭೮ ಮತ್ತು ೧೯೭೮-೭೯ ಈ ೩ ವರ್ಷಗಳಲ್ಲಿ ಏನೂ ಮಾರ್ಪಾಟು ಮಾಡಿಲ್ಲ. ಟೇಬಲ್ ಮೌಲ್ಡೆಡ್ ಮಾಡ್ಯುಲರ್ ಇಟ್ಟಿಗೆಗಳು ೧೯೭೬-೭೭ರಲ್ಲಿ ಒಂದು ಸಾವಿರ ರೂಪಾಯಿ ಇತ್ತು, ೧೯೭೭–೭೮ ರಲ್ಲಿ ೨೫೦–೦೦ ರೂಪಾಯಿ ಆಯಿತು, ೧೯೭೮–೭೯ ರಲ್ಲಿ ೨೦೫–೦೦ ಇಟ್ಟಿಗೆಗೆ ೨೪೦ ರೂಪಾಯಿ ಮಾಡಿದ್ದಾರೆ ಮೊನ್ನೆ ವಸತಿ ಸಚಿವರನ್ನು ಪ್ರಶ್ನೆ ಕೇಳಿದಾಗ ಬಿಲ್ಡಿಂಗ್ ಮೆಟೀರಿಯಲ್ಸ್ ಬೆಲೆ ಜಾಸ್ತಿಯಾಗಿದೆ ಆದುದರಿಂದ ೨೫,೦೦೦ ರೂಪಾಯಿ ಇದ್ದ ಬಿಲ್ಡಿಂಗನ್ನು ಬೆಲೆ ೪೨,೦೦೦ ಆಗಿದೆ ಎಂದು ಹೇಳಿದರು. ಪಿ. ಡಬ್ಲ್ಯು. ಡಿ. ನವರೇ ಇಟ್ಟಿಗೆಗಳನ್ನು ಮಾರುತ್ತಾರೆ. ಬೆಂಗಳೂರಿಗೆ ೧೦ ಮೈಲಿ ದೂರದಲ್ಲಿರುವ ಪಿ. ಡಬ್ಲ್ಯು. ಡಿ. ಬ್ರಿಕ್ ಪ್ಲಾಂಟ್‌ನಲ್ಲಿ ಒಂದು ಸಾವಿರ ಇಟ್ಟಿಗೆಗೆ ೨೦೦

ರೂಪಾಯಿಗಳು. ಅಲ್ಲಿಂದ ತರಬೇಕಾದರೆ ೬೦ ರೂಪಾಯಿ ಎಕ್ಸ್‌ಟ್ರಾ ಬೀಳುತ್ತದೆ. ಒಟ್ಟು ೨೬೦ ರೂಪಾಯಿ ಆಗುತ್ತದೆ. ಬೆಂಗಳೂರಿನಲ್ಲಿ ೧೦೦೦೦ ಇಟ್ಟಿಗೆಗೆ ೨೦೫ ರೂಪಾಯಿಗಳು ಎಂದು ಹೇಳಿದ್ದೀರಿ. ಲೋಕೋಪಯೋಗಿ ಇಲಾಖೆಯ ವತಿಯಿಂದ ಮಾರುವ ೧೦೦೦೦ ಇಟ್ಟಿಗೆಗಳನ್ನು ೨೦೫ ರೂಪಾಯಿಗಳಿಗೆ ಕೊಡುವುದಕ್ಕೆ ಸಿದ್ಧರಿದ್ದೀರಾ ಎಂದು ನಾನು ಕೇಳುತ್ತೇನೆ.

ಇನ್ನು ಪೇಜ್ ನಂಬರ್ ೩ ಲೇಬರ್ ಇದೆ. ಇದರಲ್ಲಿ ಫಸ್ಟ್ ಕ್ಲಾಸ್ ಮೇಸನ್‌ಗೆ ಬೆಲೆ ಜಾಸ್ತಿ ಮಾಡಿದ್ದೀರಿ, ಸೆಕೆಂಡ್ ಕ್ಲಾಸ್ ಮೇಜನ್‌ಗೆ ಅಷ್ಟೇ ಇದೆ. ಜೀವನಮಟ್ಟ ಇಬ್ಬರಿಗೂ ಒಂದೇ ಇರು ತ್ತದೆ. ಕೂಲಿ ಹೆಚ್ಚು ಮಾಡಿರುವುದು ಫಸ್ಟ್ ಕ್ಲಾಸ್ ಮೇಸನ್‌ಗೆ. ಬಡವರನ್ನು ಉದ್ಧಾರ ಮಾಡು ತ್ತೇವೆ ಎಂದು ಹೇಳುತ್ತೀರಿ. ಆದರೆ ಮೇಲ್ಮಟ್ಟದ ಕೆಲಸಗಾರರಾದ ಫಸ್ಟ್ ಕ್ಲಾಸ್ ಮೇಸನ್‌ಗೆ ಜಾಸ್ತಿ ಮಾಡಿದ್ದೀರಿ. ಫಸ್ಟ್ ಕ್ಲಾಸ್ ಕಾರ್ಪೆಂಟರ್‌ಗೆ ಮಾತ್ರ ದರ ಹೆಚ್ಚು ಮಾಡಿದ್ದೀರಿ. ಸೆಕೆಂಡ್ ಕ್ಲಾಸ್ ಕಾರ್ಪೆಂಟರಿಗೆ ಅಷ್ಟೇ ಇದೆ. ಉಳಿದವರಿಗೆ ದರ ಹೆಚ್ಚು ಮಾಡಿಲ್ಲ. ಈಗ ಅಗತ್ಯ ವಸ್ತುಗಳ ಬೆಲೆ ಏರಿದೆ. ತಾವು ಮೇಲ್ಮಟ್ಟದ ಕೂಲಿಗಳ ದರವನ್ನು ಮಾತ್ರ ಹೆಚ್ಚಿಸಿದ್ದೀರಿ, ಕೆಳಮಟ್ಟದ ಕೂಲಿಗಳ ದರವನ್ನು ಹೆಚ್ಚಿಸಿಲ್ಲ. ಆದುದರಿಂದ ಇದನ್ನು ಪರಿಶೀಲಿಸಬೇಕು ಮಾನ್ಯ ಮಂತ್ರಿಗಳಿಗೆ ಸೂಚಿಸಬಯಸು ತ್ತೇನೆ.

ಇನ್ನು ಪೇಜ್—೯ ಎಕ್ಸಕವೇಷನ್ : ಇದರ ಬಗ್ಗೆ ಕೆಲವು ವಿಷಯಗಳನ್ನು ಮಾತ್ರ ಹೇಳು ತ್ತೇನೆ. ಯಾವ ಕಾಮಗಾರಿಯನ್ನು ಶುರು ಮಾಡಿದರೂ ಮೊದಲು ಅರ್ತ್ ವರ್ಕ್‌ನಿಂದ ಶುರುಮಾಡ ಬೇಕು. ಒಂದು ಕ್ಯೂಬಿಕ್ ಮೀಟರ್‌ಗೆ ೩-೩೦ ಪೈಸೆ ಇಟ್ಟಿದ್ದೀರಿ. ಒಂದು ಕ್ಯೂಬಿಕ್ ಮೀಟರ್ ಮಣ್ಣು ತೂಕ ಸುಮಾರು ೨ ಟನ್ನುಗಳು. ಇದನ್ನು ಅಗೆದು ಎತ್ತಿ ಸುಮಾರು ೬೫ ಅಡಿಗಳವರೆಗೆ ತೆಗೆದರೆ ರೂ ೩-೩೦ ಕೊಡುತ್ತಾರೆ, ಇದು ಸಾಧ್ಯವೇ ಎಂದು ಕೇಳುತ್ತೇನೆ. ಇಲಾಖೆಯವರು ಒಂದು ಟನ್ ಸ್ಟೀಲ್ ಎತ್ತಿ ಇಡುವುದಕ್ಕೆ ೧೦ ರೂಪಾಯಿ ಕೊಡುತ್ತಾರೆ. ಇವತ್ತು ಸಾಧಾರಣವಾಗಿ ಬೆಂಗಳೂರಿ ನಲ್ಲಿರುವ ಮಣ್ಣು ಕೆಲಸದ ರೇಟ್ ಒಂದು ಅಡಿಗೆ ೧೫ ರಿಂದ ೨೦ ಪೈಸೆ ಇದೆ. ಇದರ ಪ್ರಕಾರ ಲೆಕ್ ಹಾಕಿದರೆ ಒಂದು ಮೀಟರಿಗೆ ೮ ರೂಪಾಯಿ ಆಗುತ್ತದೆ. ಹೋದ ವರ್ಷಕ್ಕಿಂತ ೧೦ ಪರ್ಸೆಂಟ್ ಇನ್ ಕ್ರೀಸ್ ಎಂದರೆ ೩-೩೦ ಪೈಸೆ ಆಗುತ್ತದೆ. ಯಾರಾದರೂ ಒಬ್ಬ ಕೂಲಿಗಾರನನ್ನು ಕೇಳಿದರೆ ಸರಿಯಾಗಿ ಹೇಳುತ್ತಾನೆ. ಒಂದು ಅಡಿಗೆ ೧೫-೨೦ ಪೈಸೆ ಬರೀ ಕೂಲಿ ಕೊಡಬೇಕು ಎಂದು ಹೇಳುತ್ತಾನೆ. ನೀವು ಬಹರ ಕಡಿಮೆ ದರವನ್ನು ಫಿಕ್ಸ್ ಮಾಡಿದ್ದೀರಿ. ಆರಂಭದಲ್ಲೇ ಅಪಶಕುನ ಎಂದಹಾಗೆ ಇದನ್ನು ಪರಿ ಷ್ಕರಿಸಬೇಕು. ಇಲಾಖೆಯಲ್ಲಿ ಯಾರಿಗೂ ಇದರ ಪ್ರಾಕ್ಟಿಕಲ್ ಅನುಭವ ಇಲ್ಲದೇ ಈ ರೀತಿಯಾಗಿದೆ. ಮಾನ್ಯ ಕೆ. ಎಚ್. ಹನುಮೇಗೌಡರು ಐ.ಎ.ಎಸ್. ಆಫೀಸರುಗಳಿಗೆ ಹಾಲು ಕರೆಯುವುದಕ್ಕೆ ಟ್ರೈನಿಂಗ್ ಕೊಡಬೇಕು ಎಂದು ಹೇಳಿದರು, ನಾನು ಅಷ್ಟು ಹೊಲಸಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಇಲಾಖೆಯವರೇ ಹೋಗಿ ಟೇಪ್ ಹಿಡಿದುಕೊಂಡು ಲೆಕ್ಕ ಹಾಕಲಿ. ಟೇಪ್ ಹಿಡಿದುಕೊಂಡು ಲೆಕ್ಕಹಾಕಿ ಅಲ್ಲೇ ಎಸ್ಟಿಮೇಟನ್ನು ತಯಾರುಮಾಡಲಿ. ಪ್ರಾಕ್ಟಿಕಲ್ ಅನುಭವ ಇರುವವರು ಯಾರೂ ಈರೀತಿ ತಪ್ಪು ಮಾಡುವುದಿಲ್ಲ. ಇದರ ಬಗ್ಗೆ ತಾವು ಪರಿಶೀಲನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ೬ನೇ ಐಟಂ ಕಾಂಕ್ರಿಟ್ : ಇವತ್ತು ಕೂಲಿ ಬೆಲೆ ಜಾಸ್ತಿಯಾಗಿದೆ, ಸಿಮೆಂಟ್ ಬೆಲೆ ಜಾಸ್ತಿ ಯಾಗಿದೆ. ಆರ್.ಸಿ.ಸಿ. ಚೆಜ್ಜ ಮಾಡುವುದು ಬಹಳ ಕಷ್ಟ. ಹೋದ ವರ್ಷ ಪ್ಲೈನ್ ಚೆಜ್ಜಾಗೆ ೩೫ ರೂಪಾಯಿ ಇತ್ತು, ಈ ವರ್ಷವೂ ೩೫ ರೂಪಾಯಿ ಇದೆ. ಏನೂ ಬದಲಾವಣೆಯಾಗಿಲ್ಲ. ಕೂಲಿ, ಸಿಮೆಂಟ್ ಬೆಲೆ ಜಾಸ್ತಿಯಾದರೂ ಕೂಡ ಈ ದರ ಏನೂ ಬದಲಾವಣೆಯಾಗಿಲ್ಲ. ಆದುದರಿಂದ ಇದರ ರೇಟ್ಸನ್ನು ಹೆಚ್ಚು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಐಟಂ ನಂಬರ್ ೧೪ ಅಟ್ಟ. ಅಡಿಗೆ ಮನೆಯಲ್ಲಿ ಅಟ್ಟ ಮಾಡುತ್ತಾರೆ. ಅದು ಸರಿಯಾಗಿ ಲ್ಲದೇ ಹೋದರೆ ಚಿಮಣಿ ಬಿದ್ದು ಹೋಗುತ್ತಿರುತ್ತದೆ, ಹೋದವರ್ಷ ೫೦ ರೂಪಾಯಿತ್ತು, ೧೦ ರೂಪಾಯಿ ಸ್ಟೀಲ್ ಬೀಳುತ್ತದೆ. ಈ ವರ್ಷ ೩೪ ರೂಪಾಯಿ ಇಟ್ಟದ್ದೀರಿ. ಅಟ್ಟ ಬಿದ್ದು ಹೋದರೆ ತುಂಬಾ ತೊಂದರೆಯಾಗುತ್ತದೆ. ಆದುದರಿಂದ ಮಂತ್ರಿಗಳು ಇದರ ಬಗ್ಗೆ ಆಲೋಚನೆಮಾಡಿ ಸರಿಪಡಿಸಿ ಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಸ್ಟೋನ್ ವರ್ಕ್ : ಇದರಲ್ಲಿ ಕೂಲಿ ಬೆಲೆ ಜಾಸ್ತಿಯಾಗಿದೆ, ಕಲ್ಲು ಬೆಲೆ ಜಾಸ್ತಿಯಾಗಿದೆ. ಇದನ್ನು ಪರಿಶೀಲಿಸಬೇಕು.

ಇನ್ನು ಉಡ್ ವರ್ಕ್ : ಒಂದು ಬಾಗಿಲು ೭×೩ ಅಡಿ ಇರುತ್ತದೆ. ಐಟಂ ೨, ಪೇಜ್ ನಂಬರ್ ೨೮. ಎರಡೂ ಕಾಲು C.F.T. Teak wood ಮತ್ತು ೨ ಸ್ಕ್ವೇರ್ ಮೀಟರ್ ಪ್ಲಷ್ ಡೋರ್. ಇದಕ್ಕೆ ಕೂಲಿ ಲೆಕ್ಕಹಾಕಿ, ಪ್ಲಷ್ ಷಟರ್ ೨ sq meters ೨೦೦ ರೂಪಾಯಿ, ಲೇಬರ್ ೬೩ ರೂಪಾಯಿ, ಫ್ರೇಂಗೆ ೧೯೨ ರೂಪಾಯಿ (೭೫×೧೫೦)–ಒಟ್ಟು ೪೫೫ ರೂಪಾಯಿಗಳಾಗುತ್ತದೆ. ಸ್ಕ್ವೇರ್ ಮೀಟರ್‌ಗೆ ರೇಟ್ ೨೩೦ ರೂಪಾಯಿ ಬೀಳುತ್ತದೆ. ಇವರು ಕೊಟ್ಟಿರುವುದು ೧೬೫ ರೂಪಾಯಿ. ಇದನ್ನು ಪರಿಶೀಲಿಸಬೇಕು ಎಂದು ಹೇಳುತ್ತೇನೆ.

ಇನು ಸುಣ್ಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಮನೆಗಳಿಗೆ ವರ್ಷೇ ವರ್ಷೇ ಸುಣ್ಣ ಬಳಿಸುವುದಿಲ್ಲ. ಯಾರ ಮನೆಗೆ ಹೋದರೂ ಸುಣ್ಣ ಸರಿಯಾಗಿ ಬಳಿದಿರುವುದಿಲ್ಲ. ತಾವು ಸುಣ್ಣಕ್ಕೆ ಏನು ೩೫ ಪೈಸೆ ಮಾಡಿದ್ದೀರಿ, ಈ ೩೫ ಪೈಸೆ ಕೂಲಿ ಆಗುವುದಿಲ್ಲ, ಸುಣ್ಣದ ಬೆಲೆ ಬರುವುದಿಲ್ಲ. ಲೋಕೋಪಯೋಗಿ ಇಲಾಖೆಯ ಮನೆಗಳಿಗೆ ವರ್ಷೇ ವರ್ಷೇ ಸುಣ್ಣ ಬಳಿಸಲು ಅಮೆಂಡ್‌ಮೆಂಟ್ ಮಾಡಬೇಕು ಎಂದು ಹೇಳುತ್ತೇನೆ. ನೀವು ಕೇವಲ ೩೫ ಪೈಸೆ ಕೊಟ್ಟರೆ ಭ್ರಷ್ಟಾಚಾರ ಶುರುವಾಗುತ್ತದೆ. ಈ ದರ ಕೊಟ್ಟರೆ ಎರಡು ಕೋಟ್ ಹೊಡೆಯುವುದಿಲ್ಲ, ಒಂದೇ ಕೋಟ್ ಹೊಡೆಯುತ್ತಾರೆ. ವರ್ಷಕ್ಕೊಂದು ಸಲ ಸುಣ್ಣ ಹೊಡೆಯುವಂತೆ ಮಾಡಬೇಕು, ಎಸ್.ಆರ್.ಐ. ನಲ್ಲಿ ಹಲವಾರುದೋಷಗಳಿವೆ. ಎಸ್.ಆರ್. ಮಾಡುವಾಗ ಗವರ್ನಮೆಂಟ್ ಇಂಜನಿಯರ್ಸ್ ಜೊತೆಗೆ ಖಾಸಗೀ ಇಂಜನಿಯರ್ಸ್ ಜೊತೆಗೆ ಸಮಾಲೋಚಿಸಬೇಕು.

ಈ ಎಸ್. ಆರ್. ಬಗ್ಗೆ ಹೇಳುವುದಾದರೆ, ಸರ್ಕಾರದವರು ಒಂದು ಸಮಿತಿ ಮಾಡಿ ಅದರಲ್ಲಿ ಖಾಸಗಿ ಕಂಟ್ರಾಕ್ಟರ್‌ರವರನ್ನೂ ಸೇರಿಸಿಕೊಂಡು ಒಂದು ಷೆಡ್ಯೂಲ್ ಆಫ್ ರೇಟ್ ಮಾಡಿದರೆ ಬೆಲೆ ಬರುತ್ತದೆ ಇಲ್ಲದಿದ್ದರೆ ಏನೂ ಬೆಲೆ ಬರುವುದಿಲ್ಲವೆಂದು ಹೇಳುತ್ತೇನೆ. ಇನ್ನು ಎರಡನೆಯದಾಗಿ, ಕಂಟ್ರಾಕ್ಟ್ ಫಾರಂ ನಂ. ೬೫ರಲ್ಲಿ, The Various copies of the specifications, designs, contracts, S.R s and any relevant document required in connection with work shall be open for inspection by the contractors ಎಂದು ಇದೆ. ಸ್ವಾಮಿ ಅವರು ಟೆಂಡರ್ ಹಾಕುವಾಗ ಅವರು ಯಾವ ಡಿಜೈನೂ ಮಾಡಿರುವುದಿಲ್ಲ, ಸಾಯಿಲ್ ಟೆಸ್ಟ್ ಮಾಡದೇ ಇರುವುದರಿಂದ, ಅಲ್ಲಿ ಭ್ರಷ್ಟಾಚಾರ ಪ್ರಾರಂಭವಾಗುತ್ತದೆ. ಡಿಜೈನ್ ಇಲ್ಲದೇ ಟೆಂಡರ ಕಾಲ್‌ಫಾರ್ ಮಾಡುವುದು ಸರಿಯೇ? ಅವನು ಹೋಗಿ ಅಲ್ಲಿ ಸಾಯಿಲ್ ಟೆಸ್ಟ್ ಮಾಡಿದಾಗ ಅಲ್ಲಿ ಲೂಜ್ ಸಾಯಿಲ ಇರುತ್ತದೆ, ಡಿಜೈನ್ ಸಹ ಇಲ್ಲದೇ ಟೆಂಡರ್ ಕಾಲ್‌ಫಾರ್ ಮಾಡಿ ವಾತಾವರಣವನ್ನು ಕಲುಶಿತಗೊಳಿಸುವಂಥ ಪದ್ಧತಿ ಏನಿದೆ ಅದನ್ನು ಮೊದಲು ತೆಗೆದು ಹಾಕಿ. ರೂಲ್ಸ್ ಪ್ರಕಾರ ಟೆಂಡರ್ ಕಾಲ್‌ಫಾರ್ ಮಾಡುವುದಕ್ಕಿಂತ ಮುಂಚೆ ನೀವು ಡಿಜೈನ್ಸ್, ಸಾಯಿಲ್ ಎಲ್ಲಾ ಟೆಸ್ಟ್ ಮಾಡಿಸಿರಬೇಕು ಅದನ್ನು ಮೊದಲು ಕಾರ್ಯಗತದಲ್ಲಿ ತನ್ನಿ ಆಗ ಭ್ರಷ್ಟಾಚಾರ ಕಡಿಮೆಯಾಗುತ್ತದೆ. ಇನ್ನು ಅರ್ನೆಸ್ಟ್ ಮನಿ ಡಿಪಾಜಿಟ್‌ನಲ್ಲಿ ದೊಡ್ಡ ಕಂಟ್ರಾಕ್ಟರ್‌ಗಳಿಗೆ ಕಡಿಮೆ ಮಾಡಿ ಸಣ್ಣ ಕಂಟ್ರಾಕ್ಟರ್‌ಗಳಿಗೆ ಜಾಸ್ತಿ ಇದೆ. For works above Rs. 20 lakhs EMD is one percent, for works upto Rs. 20,000. is EMD $2\frac{1}{2}\%$ ಆದುದರಿಂದಲೇ ದೊಡ್ಡ ಕಂಟ್ರಾಕ್ಟರ್ಸ್‌ಗಳಲ್ಲಿ ಕಾಂಪಿಟೀಷನ್ ಜಾಸ್ತಿಯಾಗುತ್ತಿದೆ. ಪಿಡಬ್ಲ್ಯುಡಿಯವರು ಸೆಕ್ಯೂರಿಟಿ ಡಿಪಾಜಿಟ್ ಹೆಚ್ಚಾಗಿ ಇಟ್ಟುಕೊಳ್ಳಿ, ಇ.ಎಂ.ಡಿ. ಕಡಿಮೆ ಮಾಡಿ ಕಾಂಪಿಟೀಷನ್ ಕ್ರಿಯೇಟ್ ಆಗಿ ಹಣ ಉಳಿತಾಯವಾಗುತ್ತದೆ. ಆದುದರಿಂದ ಈಗ ತಾವೇನು ತಾರತಮ್ಯ ಮಾಡಿದ್ದೀರಿ ಅದನ್ನು ಕಿತ್ತು ಹಾಕಿ. ಆಮೇಲೆ, Time is the essence of the contract ಎಂದು ಹೇಳಿದ್ದೀರಿ. ಆದರೇ ಅದೇ ಇಲ್ಲ. ಆದರೆ ತಾವು ಬೆಂಗಳೂರು ನಗರದಲ್ಲಿ ನೋಡುವುದಾದರೆ ಎಷ್ಟು ಬಿಲ್ಡಿಂಗ್‌ಗಳು ಟೈಮ್‌ಗೆ ಸರಿಯಾಗಿ ಮುಗಿದಿವೆ ಸ್ವಾಮಿ? ೩ ವರ್ಷದ್ದು ೧೦ ವರ್ಷಗಳಾದರೂ ಮುಗಿದಿಲ್ಲ. ಅದೇ ನೀವು ಖಾಸಗಿ ಕಂಟ್ರಾಕ್ಟರ್‌ಗಳು ಕಂಪ್ಲೀಟ್ ಮಾಡಿ ಮುಗಿಸದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ, ಅದೇ ನಿಮ್ಮ ಪಿ.ಡಬ್ಲ್ಯು.ಡಿ. ಇಂಜಿನಿಯರ್ಸ್ ಲೇಟ್ ಮಾಡಿದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈ ತಾರತಮ್ಯ ಏತಕ್ಕೆ? ಡಿಪಾರ್ಟ್‌ಮೆಂಟಿನವರಾದರೆ ಸಿಮೆಂಟ್ ಇಲ್ಲ, ಸ್ಟೀಲ್ ಇಲ್ಲವೆಂದು ಕಾರಣ ಹೇಳುತ್ತಾರೆ. ಆದರೆ ಖಾಸಗಿ ಕಂಟ್ರಾಕ್ಟರವರಾದರೆ ಎಲ್ಲಿಂದ ತಂದು ಅವರು ಟೈಮ್‌ಗೆ ಸರಿಯಾಗಿ ಕಂಪ್ಲೀಟ್ ಮಾಡುತ್ತಾರೆ? ಇದು ಏತಕ್ಕೆ ಹೀಗೆ ಆಗುತ್ತದೆಂದರೆ ಪಿ.ಡಬ್ಲ್ಯು.ಡಿ. ಇಂಜಿನಿಯರ್ಸ್‌ಗೆ ಕೆಲಸವಾಗಲೀ, ಆಗದೇ ಇರಲಿ ನೀವು ಪ್ರತಿ ತಿಂಗಳೂ ಸಂಬಳ ಕೊಟ್ಟು ಬಿಡುತ್ತೀರಿ. ಕೆಲಸವಾಗ

ದಿದ್ದರೆ ಅವರಿಗೇನೂ ಸಂಬಳ ಕಡಿಮೆಯಾಗುವುದಿಲ್ಲ, ಮತ್ತೆ ಅವರಿಗೆ ನೀವು ಸರಿಯಾದ ಜವಾಬ್ದಾರಿ ಹಾಕಿಲ್ಲ. ಇದು ತಪ್ಪಬೇಕು. ಯಾರೇ ಆಗಲೀ ಅಗ್ರಿಮೆಂಟ್ ಪ್ರಕಾರ ಯಾವ ಟೈಂನಲ್ಲಿ ಮುಗಿಯ ಬೇಕಾಗಿತ್ತೋ ಆ ಟೈಂನಲ್ಲಿ ಮುಗಿಯದಿದ್ದರೆ ಅವರಿಗೆ ಪೆನಾಲ್ಟಿ ಹಾಕಿ, ಅದೇ ಖಾಸಗಿಯವರಿಗಾದರೆ ಪೆನಾಲ್ಟಿ ವಸೂಲಿ ಮಾಡುವುದಿಲ್ಲವೇ? ಅದೇ ರೀತಿ ನಿಮ್ಮ ಇಲಾಖೆಯ ಸಿಬ್ಬಂದಿಯವರಿಗೂ ನೀವು ಪೆನಾಲ್ಟಿ ಹಾಕಿದರೆ ಆಗ ಸರ್ಕಾರಿ ಕೆಲಸಕಾರ್ಯಗಳೂ ಕೂಡ ಸರಿಯಾದ ವೇಳೆಗೆ ಮುಗಿಯುತ್ತವೆ. ಇನ್ನು ಎಲ್. ಓ. ಸಿ. ಪದ್ಧತಿ ಜಾರಿಗೆ ಬಂದಿದೆ. ಆದರೆ ಅದು ಟೆಂಡರ್ಸ್ ವರ್ಕ್ಸ್‌ಗೆ ರದ್ದಾಗಬೇಕು ಏತಕ್ಕೆಂದರೆ ಅಗ್ರಿಮೆಂಟ್ ಪ್ರಕಾರ ಪ್ರತಿ ತಿಂಗಳು ಎಗ್ಜಿಕ್ಯುಟಿವ್ ಇಂಜಿನಿಯರ್‌ರವರು ವರ್ಕ್ಸ್ ರಿಪೋರ್ಟ್ ಕೊಡಬೇಕು. ಪ್ರೋಗ್ರೆಸ್ ಕೊಡದಿದ್ದರೆ ದಂಡ ಹಾಕುತ್ತಾರೆ, ಆವಾಗ ಅವರು ಏನು ಮಾಡಬೇಕಾಗುತ್ತದೆ? ಇದರಿಂದ ಅವನಿಗೆ ಬಹಳ ತೊಂದರೆಯಾಗುತ್ತದೆ ಆದುದರಿಂದ ಅದನ್ನು ತೆಗೆದು ಹಾಕಿ. ಆ ಮೇಲೆ ಸೆಕ್ಯೂರಿಟಿ ಡಿಪಾಜಿಟ್ ಬಗ್ಗೆ ಹೇಳುವುದಾದರೆ, ಒಬ್ಬ ಕಂಟ್ರ್ಯಾಕ್ಟರ್ ಸಂಪೂರ್ಣವಾಗಿ ಯಶಸ್ವಿಯಾಗಿ ಕೆಲಸ ಮಾಡಿ ಮುಗಿಸಿದ ೩ ತಿಂಗಳೊಳಗೆ ಅವನಿಗೆ ಆ ಡಿಪಾಜಿಟ್ ಹಣವನ್ನು ವಾಪಸ್ಸು ಕೊಡಬೇಕು. ಆದರೆ ಇವತ್ತು ಏನಾಗಿದೆ ಎಂದರೆ. ಕೆಲಸ ಪೂರ್ತಿ ಮಾಡದೇ ತಪ್ಪಿಸಿಕೊಂಡು ಓಡಿ ಹೋಗಿರತಕ್ಕಂಥವನಿಗೇ ಸೆಕ್ಯೂರಿಟಿ ಡಿಪಾಜಿಟ್ ಹಣ ಸಿಕ್ಕಿದೆ, ನಿಜವಾಗಿಯೂ ಸಂಪೂರ್ಣವಾಗಿ ಕೆಲಸಮಾಡಿ, ಯಶಸ್ವಿಯಾಗಿ ಪೂರ್ತಿ ಕಟ್ಟಿ ೩ ತಿಂಗಳಾದರೂ ಅವನಿಗೆ ಸೆಕ್ಯೂರಿಟಿ ಡಿಪಾಜಿಟ್ ಹಣವನ್ನು ಕೊಡುವುದಿಲ ಮತ್ತೆ ಅಲ್ಲಿ ಭ್ರಷ್ಟಾಚಾರ ಶುರುವಾಗುತ್ತದೆ. ಅದೇ ಓಡಿ ಹೋಗಿದ್ದವನು ಸಿಕ್ಕುವುದಿಲ್ಲವಲ್ಲ, ಆದರೆ ಇವನು ಪೂರ್ತಿ ಕಟ್ಟಿ ನ್ಯಾಯವಾಗಿ ನಡೆದುಕೊಳ್ಳುವುದರಿಂದ ಅವನು ತೊಂದರೆ ಪಡಬೇಕಾಗಿದೆ. ಆದುದರಿಂದ ತಾವು ಇನ್ನು ಮುಂದಾದರೂ ಸೆಕ್ಯೂರಿಟಿ ಡಿಪಾಜಿಟ್ ಹಣವನ್ನು ಯಾವ ಒಬ್ಬ ಕಂಟ್ರ್ಯಾಕ್ಟರ್ ಕಟ್ಟಿ ಪೂರ್ತಿಯಾದ ೩ ತಿಂಗಳ ನಂತರ ಕೂಡಲೇ ಬಿಲ್ ಮಾಡಿ ಅವನಿಗೆ ಆ ಹಣವನ್ನು ವಾಪಸ್ಸು ಕೊಡುವ ಹಾಗೆ ವ್ಯವಸ್ಥೆ ಮಾಡಿ ಎಂದು ಹೇಳಬಯಸುತ್ತೇನೆ. ಹಾಗೆ ಮಾಡದೇ ಹೋದರೆ ಪುನಃ ಅಲ್ಲಿ ಭ್ರಷ್ಟಾಚಾರ ಪ್ರಾರಂಭವಾಗುತ್ತದೆ.

ಇನ್ನು ಕ್ಲಾಜ್ (೯) ಬಗ್ಗೆ ಹೇಳುವುದಾದರೆ, A bill shall generally be prepared in the prescribed form each month. ಅದು ಇಲ್ಲದಿದ ರೆ ಏನಾಗುತ್ತದೆಂದರೆ, ಪ್ರತಿ ತಿಂಗಳೂ ಇಂಜಿನಿಯರ್‌ಗಳು ಬಿಲ್ ಮಾಡದೇ ಇದ್ದರೆ ಅವರ ಸಂಬಳವನ್ನು ಕಟ್ ಮಾಡಿ. You must m ke it a point to close all the financial transactions before the 15th of each month. ಆಗ ಇಲಾಖೆಯಲ್ಲಿನ ಭ್ರಷ್ಟಾಚಾರ ಕಡಿಮೆಯಾಗುತ್ತದೆ. ಏತಕ್ಕೆಂದರೆ ಹಣ ಬರುವುದು ಖಾತರಿಯಾದರೆ ಕಂಟ್ರ್ಯಾಕ್ಟರ್ ಲಂಚ ನೀಡುವುದಿಲ್ಲ. ಇಂಜಿನಿಯರ್‌ಗಳೂ ಸಹ ಗುಣಮಟ್ಟದ ಕಡೆಗೆ ಗಮನ ಹರಿಸುತ್ತಾರೆ. ಕ್ವಾಲಿಟಿ ಆಫ್ ವರ್ಕ್ ಕೂಡ ಇಂಪ್ರೂವ್ ಆಗುತ್ತದೆ ಆಗ ಕಟ್ಟಡಗಳೂ ಸಹ ೬೦ ವರ್ಷ ಬಾಳುವುದು ೧೦೦ ವರ್ಷ ಬಾಳಿಕೆ ಬರುತ್ತದೆ. ಆದುದರಿಂದ ಪ್ರತಿ ತಿಂಗಳೂ ಬಿಲ್ ಕೊಡುವುದನ್ನು ತಾವು ಕಡ್ಡಾಯ ಮಾಡಬೇಕು.

ಇನ್ನು ಕ್ಲಾಜ್ (೯)ಎ, ರಲ್ಲಿ ......"If the rate quoted by the contractor for any item of work is below are above 25%......" ಎಂದು ಇದೆ. ಎಸ್ಟಿಮೇಟ್ ಮೇಲೆ ೨೫ ಪರ್ಸೆಂಟ್ ಕಡಿಮೆ ಕಟ್ ಮಾಡಿದರೂ, ಅವನು ಓಡಿ ಹೋಗಬಹುದೆಂದು ಹಿಡಿದು ಇಟ್ಟುಕೊಳ್ಳುತ್ತಿದ್ದೀರಿ, ಅದನ್ನು ಮಾಡುವುದು ಬೇಡವೆಂದು ನಾನು ಹೇಳುವುದಿಲ್ಲ. ಆದರೆ ಈಗ ಉದಾಹರಣೆಗೆ ಮಣ್ಣು ಕೆಲಸ ೩ ರೂ.ಗೆ ಅವನು ೮ ರೂ ಕೋಟ್ ಮಾಡಿರುತ್ತಾನೆ. ತಾವು ೨೫ ಪರ್ಸೆಂಟ್ ತೆಗೆದುಕೊಂಡರೂ ೪ ರೂ. ಗಳಲ್ಲಿ ಕೆಲಸವಾಗುವುದಿಲ್ಲ. ತಾವು ಕಟ್ ಮಾಡುವುದರಿಂದ ಲಾಸ್ ಆಗುತ್ತದೆ. ಹೆಚ್ಚು ದರವನ್ನು ಕೋಟ್ ಮಾಡಿದರೆ ಸಂಪೂರ್ಣ ಹಣ ಕೊಡಿ. ಕೆಲಸವಾಗುತ್ತದೆ. ಕಡಿಮೆ ದರ ಕೋಟ್ ಮಾಡಿರುವ ಸಂದರ್ಭದಲ್ಲಿ ತಾವು ಬೇಕಾದರೆ ೨೫ ಪರ್ಸೆಂಟ್‌ನಿಂದ ಇನ್ನು ೫ ಪರ್ಸೆಂಟ್ ಜಾಸ್ತಿ ಮಾಡಿ ಅವನ ಹಣದಲ್ಲಿ ಹಿಡಿದಿಟ್ಟುಕೊಂಡು ಕೆಲಸ ಮುಗಿದ ಮೇಲೆ ಬೇಕಾದರೆ ಕೊಡಿ.

ಇನ್ನು, Stores supplied by the Department. The Contractor should see that only the required quanti y of m terial is indented. ಎಷ್ಟು ಬೇಕೋ ಅಷ್ಟನ್ನು ಮಾತ್ರ ಕೊಡಬೇಕು. ಅವನು ಕೇಳಿದಷ್ಟು ಕೊಡಬಾರದು. The Engineer should limit the quantities that are requi ed according to the design. ಡಿಜೈನ್ ಇರುವುದರಿಂದ ಅವರಿಗೆ ಎಷ್ಟು ಕ್ವಾಂಟಿಟಿ ಬೇಕಾಗುತ್ತದೆಂಬುದು

ಇಂಜಿನಿಯರ್‌ಗಳಿಗೆ ಗೊತ್ತಿರುವುದರಿಂದ ಅಷ್ಟಷ್ಟನ್ನೇ ರಿಲೀಜ್ ಮಾಡಬೇಕು. ಇಲ್ಲದಿದ್ದರೆ ಆ ಕಂಟ್ರ್ಯಾಕ್ಟರ್‌ಗಳು ಹೆಚ್ಚಿಗೆ ತೆಗೆದುಕೊಂಡು ಅದನ್ನು ಮಾರ್ಕೆಟ್‌ನಲ್ಲಿ ಮಾರಾಟ ಮಾಡಿಕೊಳ್ಳುತ್ತಾರೆ. ಇದರ ಬಗ್ಗೆ ಒಂದು ವಿಜಿಲೆನ್ಸ್ ರಿಪೋರ್ಟ್ ಕೂಡ ಬಂದಿದೆ, ಮಾನ್ಯ ಶ್ರೀ ಚನ್ನಬಸಪ್ಪನವರ ಕಟ್ಟಡಕ್ಕೆ ಕಂಟ್ರ್ಯಾಕ್ಟರ್‌ರವರು ಸ್ಟೀಲ್, ಸೀಮೆಂಟ್ ಕಳುಹಿಸಿರುವುದರ ಬಗ್ಗೆ ವರದಿ ಬಂದಿದೆ. ಆದರೆ ಇದು ವರೆಗೂ ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಆ ತಪ್ಪಿತಸ್ಥ ಅಧಿಕಾರಿಗಳಿಗೆ ಪ್ರಮೋಷನ್ ಸಿಕ್ಕಿದೆ. ಮತ್ತು ಆ ದೊಡ್ಡದೊಡ್ಡ ಕಂಟ್ರ್ಯಾಕ್ಟರ್‌ಗಳಿಗೆ ಇನ್ನು ದೊಡ್ಡದೊಡ್ಡ ಕಾಮಗಾರಿಗಳನ್ನು ಕೊಟ್ಟಿದ್ದಾರೆ.

ಇನ್ನು ಕ್ಲಾಜ್ ೧೩ ಬಗ್ಗೆ ಹೇಳುವುದಾದರೆ, "The Executive Engineer shall have power to make any alterations .."

ಎಂದು ಹೇಳಿದ್ದೀರಿ. ಆದರೆ ಟೆಕ್ನಿಕಲ್ ಸ್ಯಾಂಕ್ಷನ್ ಮಾಡುವವರು ಚೀಫ್ ಇಂಜಿನಿಯರ್‌ರವರು ಆದರೆ ಅದನ್ನು ಆಲ್ಟ್ರೇಷನ್ ಮಾಡುವುದಕ್ಕೆ ಅಧಿಕಾರವನ್ನು ಎಗ್ಜಿಕ್ಯೂಟಿವ್ ಇಂಜಿನಿಯರ್‌ರವರಿಗೆ ಕೊಟ್ಟಿದ್ದೀರಿ. ಆದರೆ ಚೀಫ್ ಇಂಜಿನಿಯರ್‌ರವರಿಗೇ ಆಲ್ಟ್ರೇಷನ್ ಮಾಡುವ ಪವರ್‌ನ್ನು ತಾವು ಕೊಡಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ಇಲ್ಲದಿದ್ದರೆ ಏನಾಗುತ್ತದೆಂಬುದನ್ನು ನಾನೊಂದು ಉದಾಹರಣೆಯನ್ನು ಕೊಡುತ್ತೇನೆ. ಸಣ್ಣ ಉದಾಹರಣೆ. ಒಬ್ಬ ಕಂಟ್ರ್ಯಾಕ್ಟರ್ ಏನು ಮಾಡಿದ ಒಂದು ಪಾರ್ಟೀಷನ್ ವಾಲ್ ಕಟ್ಟಲು ಎರಡು ರೂ. ಕೋಟ್ ಮಾಡಿದ ಅದಕ್ಕೆ ೩೦ ರೂ. ಗಳು ತಗಲುತ್ತದೆ. ಇಷ್ಟು ಲಾಸ್ ಆಗುತ್ತದಲ್ಲಾ ಎಂದು ಅವನು ಒಂದು ಪ್ಲಾನ್ ಮಾಡಿದ, ಆ ಡಿಪಾರ್ಟ್‌ಮೆಂಟಿನವರಿಗೆ ಈ ರೀತಿ ಹೇಳಿಕೊಟ್ಟ ಆ ಡಿಪಾರ್ಟ್‌ಮೆಂಟಿನ ಹೆಸರು ಹೇಳುವುದಿಲ್ಲ, ಪಾಲಿಶ್ ಟೀಕ್ ಕುಡ್ ಪಾರ್ಟೀಷನ್ ಮಾಡಿಸಿಕೊಳ್ಳಿ ಬಹಳ ಚೆನ್ನಾಗಿರುತ್ತದೆಂದು ಹೇಳಿ ಕೊಟ್ಟ. ಅನಂತರ ಅದೇ ವಾಲ್ ಕಟ್ಟಲು ಆಲ್ಟ್ರೇಷನ್ ಮಾಡಿಸಿಕೊಂಡು ೨೫೦ ರೂ. ಗಳಿಗೆ ಕಟ್ಟಿದ್ದಾನೆ. ಆದುದರಿಂದ ೨ ರೂಪಾಯಿ ಕೋಟ್ ಮಾಡಿದ್ದನ್ನು ೨೫೦ ರೂ. ಗಳಿಗೆ ಆಲ್ಟ್ರೇಷನ್ ಮಾಡತಕ್ಕಂಥ ಪವರ್ ಏನು ಕೊಟ್ಟಿದ್ದೀರಿ ಅದನ್ನು ಸ್ಕ್ರ್ಯಾಪ್ ಮಾಡಿ ಬಿಡಿ. ಒಂದು ಸಾರಿ ಡಿಜೈನ್ ಆದ ಮೇಲೆ ಮತ್ತೆ ಪುನಃ ಆಲ್ಟ್ರೇಷನ್ ಮಾಡಲು ಅಧಿಕಾರ ಕೊಡಬೇಡಿ ಎಂದು ನಾನು ಹೇಳುತ್ತೇನೆ.

ಇನ್ನು ಕ್ಲಾಜ್ ನಂ. ೧೯ರಲ್ಲಿ The contractor shall employ the following staff during the execution of work.

(i) One graduate Engineer when the cost of work executed is more than Rs. 5 lakhs and above;

(ii) One Diploma Engineer when the cost of work executed is more than 2 lakhs, but less than five lakhs.

11-30. A.M.

ಎಂದು ಇದೆ. ಇದರ ಪ್ರಕಾರ ಕಂಟ್ರಾಕ್ಟರುಗಳು ಗ್ರ್ಯಾಜ್ಯುಯೇಟ್ ಇಂಜಿನಿಯರ್‌ಗಳನ್ನು ೧೦೦೦ ರೂಪಾಯಿಗಳಿಗೆ ಮತ್ತು ಡಿಪ್ಲೊಮೋ ಇಂಜಿನಿಯರ್‌ಗಳನ್ನು ೫೦೦ ರೂಪಾಯಿಗಳಿಗೆ ಕೆಲಸಕ್ಕೆ ಇಟ್ಟುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಆದರೆ ಇವತ್ತಿನದಿವಸ ಯಾರೂ ಸಹ ಒಬ್ಬ ಇಂಜಿನಿಯರನ್ನು ಸಹ ಇಟ್ಟುಕೊಂಡಿಲ್ಲ. ಈಗ ನಿರುದ್ಯೋಗ ಸಮಸ್ಯೆ ಬಹಳ ಇದೆ. ಈ ಕ್ಲಾಸನ್ನು ಆಪರೇಟ್ ಮಾಡಿದರೆ ಎಲ್ಲಾ ಸಿವಿಲ್ ಇಂಜಿನಿಯರ್‌ಗಳಿಗೂ ಉದ್ಯೋಗ ಸಿಕ್ಕುತ್ತದೆ; ಈ ನಿರುದ್ಯೋಗ ಸಮಸ್ಯೆಯೂ ಪರಿಹಾರವಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಕೆಲಸವನ್ನು ಆದಷ್ಟು ಜಾಗ್ರತೆ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ಇದನ್ನು ಕೂಡಲೇ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ನನ್ನ ಕ್ಷೇತ್ರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ, ನನ್ನ ಕ್ಷೇತ್ರ ಬೆಂಗಳೂರಿನ ಬಾರ್ಡರ್‌ಗೆ ಅಂಟಿಕೊಂಡಿದೆ. ನನ್ನ ಕ್ಷೇತ್ರದಲ್ಲಿ ಅರ್ಧಭಾಗ ಕಾರ್ಪೋರೇಷನ್‌ಗೆ ಸೇರಿದೆ, ಉಳಿದರ್ಧ ಗ್ರಾಮಾಂತರ. ನಮ್ಮ ಏರಿಯಾದಲ್ಲಿ ಟ್ರಾಫಿಕ್ ಇಂಟೆಂಸಿಟಿ ಜಾಸ್ತಿ ಇದೆ. ಕಾರ್ಪೋರೇಷನ್ ಏರಿಯಾದಲ್ಲಿ ಇರುವಷ್ಟೇ ಇಲ್ಲೇ ಇರುತ್ತದೆ. ಪ್ರತಿಯೊಂದು ಹಳ್ಳಿಯಲ್ಲಿ ೩ ಸಾವಿರ ಜನರು ಇದ್ದಾರೆ. ನಮ್ಮ ಗ್ರಾಮಾಂತರ ಪ್ರದೇಶದ ಕಡೆ ಟ್ರಾಫಿಕ್ ಇಂಟೆನ್‌ಸಿಟಿ ಜಾಸ್ತಿ ಆಗಿರುವಾಗ ಎಲ್ಲಾ ರಸ್ತೆಗಳನ್ನು

Major District Road ಎಂದು ಪರಿಗಣಿಸಬೇಕು. ಆದ್ದರಿಂದ ನಮ್ಮ ಕಡೆ ಪ್ರಮುಖವಾದ ರಸ್ತೆಗಳಿಗೆ ಟಾರ್ ಹಾಕಿಸಿಕೊಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಚಾರವೇನೆಂದರೆ ನಮ್ಮ ಬೆಳ್ಳಂದೂರು ಕೆರೆ ಕಾವೇರಿಯ ವರಪ್ರಸಾದದಿಂದ ವರ್ಷಪೂರ್ತಿ ನೀರಿನಿಂದ ತುಂಬಿ ಕೋಡಿ ಹರಿಯುತ್ತಾ ಇರುತ್ತದೆ. ಈ ಕೆರೆಗೆ ಯಮಲೂರು ಕಡೆ ಸೇತುವೆಯನ್ನು ಕಟ್ಟಿಲ್ಲ. ಇದರಿಂದ ಜನರೆಲ್ಲ ೬ ಮೈಲಿ ದೂರ ಸುತ್ತಿಕೊಂಡು ಊರಿಗೆ ಬರಬೇಕಾಗಿದೆ, ಇದರಿಂದ ಜನಗಳಿಗೆ ತುಂಬಾ ತೊಂದರೆಯುಂಟಾಗಿದೆ. ಆದ್ದರಿಂದ ಕೂಡಲೇ ಅಲ್ಲಿ ಸರ್ಕಾರದವರು ಆ ಕೆರೆಗೆ ಸೇತುವೆಯನ್ನು ಕಟ್ಟಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಮಾನ್ಯ ಮಂತ್ರಿಯವರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಏನೆಂದರೆ ಈ ಜೂನಿಯರ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್‌ಗಳ ಸಂಬಳದಲ್ಲಿ ತಾರತಮ್ಯ ಇದೆ. ಅಸಿಸ್ಟೆಂಟ್ ಇಂಜಿನಿಯರ್‌ಗಳು ಬಹಳ ಅಸಂತುಷ್ಟರಾಗಿದ್ದಾರೆ. ಆದ್ದರಿಂದ ಎಲ್ಲಾ ಇಂಜಿನಿಯರ್‌ಗಳಿಗೂ ೬೦೦—೧೭೫೦ ಸ್ಕೇಲನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ.ಪಿ. ಹೆಗರೆ (ಚಿಕ್ಕೋಡಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಈ ಸದನದ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ನಾನು ಬೆಂಬಲಿಸಿ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಎಲ್ಲಾ ಇಲಾಖೆಗಳಲ್ಲಿ ಈ ಪಿ.ಡಬ್ಲ್ಯು.ಡಿ. ಇಲಾಖೆ ಬಹಳ ಮಹತ್ವವಾದ ಇಲಾಖೆಯಾಗಿದೆ. ಒಂದಾನೊಂದು ಕಾಲದಲ್ಲಿ ಈ ಇಲಾಖೆಯ ಮಹತ್ವ ಪರಹಗಳಲ್ಲಿ ಕಾಣುತ್ತಿತ್ತು. ಷಹರದಿಂದ ಷಹರಕ್ಕೆ ಮತ್ತು ಪಟ್ಟಣದಿಂದ ಪಟ್ಟಣಕ್ಕೆ ಹೋಗತಕ್ಕಂಥ ದಾರಿಗಳನ್ನು ಮಾಡುವುದು, ಅವುಗಳಿಗೆ ಟಾರ್ ಹಾಕಿಸುವುದು. ಅವುಗಳನ್ನು ಅಗಲಗೊಳಿಸುವುದು ಈ ಕಾರ್ಯಗಳಿಂದ ಅದಕ್ಕೆ ಒಂದು ಕಾಲಕ್ಕೆ ಬಹಳ ಮಹತ್ವ ಬಂದಿತ್ತು. ಆದರೆ ಈಗ ಅಷ್ಟು ಮಹತ್ವ ಇಲ್ಲದಿದ್ದರೂ ಈ ಇಲಾಖೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ರೋಡ್‌ಗಳ ಬಗ್ಗೆ ಜಾಗ್ರತೆಯಾಗಿ ಕೆಲಸ ಮಾಡುವುದಕ್ಕೆ ಅವಕಾಶವಾಗಿದೆ. ಈಗಾಗಲೇ ನನ್ನ ಕೆಲವು ಮಾನ್ಯ ಸ್ನೇಹಿತರು ಗ್ರಾಮಾಂತರಪ್ರದೇಶದಲ್ಲಿ ರೋಡ್‌ಗಳ ತೊಂದರೆ ಎಷ್ಟಿದೆ, ಯಾವ ರೀತಿ ಜನರು ಅಲ್ಲಿ ಸಂಕಟದಿಂದ ತಿರುಗಾಡುತ್ತಿದ್ದಾರೆ ಎಂಬುದರ ಬಗ್ಗೆ ಹೇಳಿದ್ದಾರೆ. ಅವರಿಗೆ ಅಲ್ಲಿ ತಿರುಗಾಡುವುದಕ್ಕೆ ಸರಿಯಾದ ಮಾರ್ಗಗಳು ಇಲ್ಲ. ನಮ್ಮ ಸರ್ಕಾರದವರು ಈ ದಾರಿ ವಿಷಯದಲ್ಲಿ ಎಷ್ಟೋ ಕಾರ್ಯಕ್ರಮಗಳನ್ನು ತೆಗೆದುಕೊಂಡರೂ ಕೂಡ ಈವರೆಗೆ ಅವೆಲ್ಲಾ ಅಪೂರ್ಣವಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಪರಿಸ್ಥಿತಿ ಏನಿದೆ ಎಂದರೆ ಈಗ ರೈತರಿಗೆ ಸಾಮಾನ್ಯ ಜನರಿಗೆ ನಮ್ಮ ದೇಶದಲ್ಲಿ ಹೆಚ್ಚು ಆಶೆ, ಆಕಾಂಕ್ಷೆಗಳು ಮೂಡಿವೆ. ಅವರು ಷಹರಗಳಲ್ಲಿ ತಿರುಗಾಡಿಕೊಂಡು ಬಂದು ಷಹರಗಳಲ್ಲಿ ದಾರಿಗಳು ಚೆನ್ನಾಗಿ ಇವೆ, ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ರಸ್ತೆಗಳನ್ನು ಸರ್ಕಾರ ಏತಕ್ಕೆ ದುರ್ಲಕ್ಷ್ಯಮಾಡಿದ್ದಾರೆ ಎಂದು ಹೇಳುತ್ತಾರೆ. ಇದು ದುರ್ಲಕ್ಷ್ಯವಲ್ಲ, ಸರ್ಕಾರದವರು ಗ್ರಾಮಾಂತರಪ್ರದೇಶದಲ್ಲಿರತಕ್ಕಂಥ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು, ಅಲ್ಲಿ ಸರಿಯಾದ ಮಾರ್ಗವನ್ನು ರಚನೆ ಮಾಡಬೇಕು ಎಂದು ಒಂದು ನೀತಿಯನ್ನು ಇಟ್ಟುಕೊಂಡಿದ್ದರೂ ಕೂಡ ಗ್ರಾಮಾಂತರ ಪ್ರದೇಶದ ಜನರಿಗೆ ಸಮಾಧಾನ ಮಾಡುವಷ್ಟು ರಸ್ತೆಗಳ ಕೆಲಸ ಪೂರ್ತಿಯಾಗಿಲ್ಲ. ಮೊದಲು ಗ್ರಾಮಾಂತರ ಪ್ರದೇಶಗಳಲ್ಲಿ ಜನರು ೧೦೦ ಮೈಲಿತನಕ ಕಾಲುನಡಿಗೆಯಲ್ಲೇ ನಡೆದುಕೊಂಡು ಹೋಗುತ್ತಿದ್ದರು. ಅವರಿಗೆ ಬಸ್ಸಿನಲ್ಲಿ, ಕಾರಿನಲ್ಲಿ ಪ್ರಯಾಣ ಮಾಡುವುದು ಅವರಿಗೆ ಗೊತ್ತಿರಲಿಲ್ಲ. ಆಗ ಸಾಧನಗಳೂ ಇರಲಿಲ್ಲ. ಇವತ್ತು ಆ ಸಾಧನಗಳಾಗಿವೆ. ಇವತ್ತು ಗ್ರಾಮದಿಂದ ಪಟ್ಟಣಕ್ಕೆ ಪ್ರವಾಸ ಮಾಡಬೇಕಾದದರೆ ಬಸ್ಸುಗಳ ಸೌಕರ್ಯ ಇದೆ. ನಾನಾ ತರಹ ವಾಹನಗಳ ಸೌಕರ್ಯವಿದೆ. ಈಗ ತೊಂದರೆ ಇರುವುದು ಎಲ್ಲಿ ಎಂದರೆ ಇಲ್ಲಿ ಜನರಿಗೆ ತಿರುಗಾಡಲು ದಾರಿಗಳ ಸೌಕರ್ಯಗಳಿಲ್ಲ ಈ ದಾರಿಗಳ ಸೌಕರ್ಯವನ್ನು ಒದಗಿಸಿಕೊಡುವಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ಕೆಲಸಗಳು ಆಗಬೇಕೋ ಅಷ್ಟು ಕೆಲಸಗಳು ಆಗಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಇವತ್ತು ಜನರು ಬಸ್ ಸರ್ವೀಸ್ ಕೇಳುತ್ತಿದ್ದಾರೆ. ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳಿಗೆ 'ಇಂತಿಂತಹ ಗ್ರಾಮಗಳಲ್ಲಿ ಬಸ್ ಸರ್ವೀಸ್ ಇಲ್ಲ, ಬಸ್ ಸರ್ವೀಸ್ ಕೊಡಿ' ಎಂದು ಕೇಳುತ್ತಿದ್ದಾರೆ. ಅಧಿಕಾರಿಗಳು ಅಲ್ಲಿಗೆ ಹೋಗಿ ದಾರಿಯನ್ನು ನೋಡಿಕೊಂಡು ಬಂದು 'ಆದ ದಾರಿ ಸರಿಯಿಲ್ಲ, ಅಲ್ಲಿ ಬಸ್ ಹಾಕುವುದಕ್ಕೆ ಬರುವುದಿಲ್ಲ' ಎಂದು ಹೇಳುತ್ತಾರೆ. ಇದರಿಂಹ ಗ್ರಾಮಾಂತರ ಪ್ರದೇಶದಲ್ಲಿ ಜನರಿಗೆ ಈ ಎರಡು ಸೌಕರ್ಯಗಳಿಗೂ ತೊಂದರೆಯಿದೆ. ಅಲ್ಲಿ ಒಂದು ಕಡೆ ಜನರಿಗೆ ಬಸ್ ಸರ್ವೀಸ್‌ನ ಆವಶ್ಯಕತೆ ಇದೆ. ಅದನ್ನು ಸರ್ಕಾರದವರು ಅಲ್ಲಗಳೆಯುವಂತಿಲ್ಲ. ಇನ್ನೊಂದು ಕಡೆ ಬಸ್‌ಗಳನ್ನು ಹಾಕುವುದಕ್ಕೆ ದಾರಿ

ಸರಿಯಿಲ್ಲ. ಇದನ್ನು ಸರ್ಕಾರದವರು ಸರಿ ಮಾಡಬೇಕು. ಈ ರಸ್ತೆಗಳನ್ನು ಮಾಡತಕ್ಕಂಥ ಕೆಲಸ ಪಿ.ಡಬ್ಲ್ಯು.ಡಿ. ಇಲಾಖೆಗೆ ಸೇರಿದೆ. ಕೆಲವೊಂದು ಸಲ ಏನಾಗುತ್ತದೆ ಎಂದರೆ ಪಿ.ಡಬ್ಲ್ಯು.ಡಿ. ಇಲಾಖೆಯವರು ಹೇಳುತ್ತಾರೆ ಅಲ್ಲಿ ರಸ್ತೆಗಳನ್ನು ಮಾಡಿದ್ದೇವೆ ಎಂದು, ಆ ರಸ್ತೆಗಳು ಕೆ.ಎಸ್.ಆರ್.ಟಿ.ಸಿ.ಯವರಿಗೆ ಒಪ್ಪಿಗೆಯಾಗುವುದಿಲ್ಲ. ಇದರಿಂದ ಅಲ್ಲಿಗೆ ಬಸ್‌ಗಳನ್ನು ಹಾಕುವುದಕ್ಕೆ ನಿರಾಕರಿಸುತ್ತಾರೆ. ಏಕೆಂದರೆ ಅವರಿಗೆ ಸರಿಯಾದ ಮಾರ್ಗಗಳು ಬೇಕು. ಮಹಾರಾಷ್ಟ್ರದಲ್ಲಿ ಏನಾಗುತ್ತಿದೆ ಎಂದರೆ ಅವರು ದಾರಿ ಹೇಗಿದೆ ಎಂಬುದನ್ನು ನೋಡುವುದೇ ಇಲ್ಲ, ಅದು ಎಂತಹ ದಾರಿಯಾಗಿದ್ದರೂ ಸಹ ಅಲ್ಲಿ ಬಸ್ ಸರ್ವೀಸ್ ಹಾಕುತ್ತಾರೆ. ನಮ್ಮನ್ನು ತುಲನಾತ್ಮಕ ದೃಷ್ಟಿಯಿಂದ ನೋಡಬೇಕೆಂದು ಹೇಳುತ್ತಾರೆ, ಮಹಾರಾಷ್ಟ್ರದಲ್ಲಿ ಯಾವ ಮಾರ್ಗವು ಸರಿಯಾಗಿಲ್ಲದಿದ್ದರೂ ಬಸ್‌ಗಳನ್ನು ಓಡಿಸುತ್ತಾರೆ. ನೀವು ಏಕೆ ಹಾಕುವುದಿಲ್ಲ ಎಂಬುದಾಗಿ ಜನರು ಕೇಳುತ್ತಾರೆ. ನಾವು ಅವರಿಗೆ ಏನು ಉತ್ತರ ಕೊಡಬೇಕು. ಅವರದ್ದು ಮಹಾರಾಷ್ಟ್ರ, ನಮ್ಮದು ಕರ್ನಾಟಕ ಎಂಬುದಾಗಿ ಉತ್ತರ ಕೊಡಬೇಕು ಅಷ್ಟೆ. ನಮ್ಮ ಕೆ.ಎಸ್.ಆರ್.ಟಿ.ಸಿ.ಯವರು ಸರಿಯಾದ ದಾರಿ ಇಲ್ಲದಿದ್ದರೆ ಬಸ್‌ಗಳನ್ನು ಹಾಕುವುದಿಲ್ಲ. ಇದನ್ನು ಮಾನ್ಯ ಮಂತ್ರಿಗಳು ಬಹಳ ಸೂಕ್ಷ್ಮ ರೀತಿಯಲ್ಲಿ ನೋಡಬೇಕು. ಮತ್ತೆ ಬರಗಾಲದ ಪರಿಸ್ಥಿತಿ ಬಂದಿದ್ದಾಗ ಕಾಮಗಾರಿ ಕೆಲಸಗಳು ಬಹಳ ನಡೆದಿವೆ. ಬೇಕಾದಷ್ಟು ಕಡೆ ರಸ್ತೆಗಳು ಆಗಿವೆ. ಆದರೆ, ಬರೀ ಮಣ್ಣಿನ ರಸ್ತೆ ಮಾಡಿದ್ದಾರೆ. ಅವುಗಳು ಮಳೆ ಬಂದಿದ್ದಾಗ ಹೊರಟು ಹೋಗಿವೆ. ಅಂತಹ ರಸ್ತೆಗಳು ಇವತ್ತು ಹಳ್ಳ ಬಿದ್ದು, ಕೊರೆದು ರಸ್ತೇ ಇಲ್ಲವೇನೋ ಅನ್ನುವ ಮಟ್ಟಿಗೆ ಆಗಿಧೆ. ಕೆಲವೊಂದು ಪ್ರದೇಶದಲ್ಲಿ ಕಪ್ಪು ಮಣ್ಣು ಹೆಚ್ಚಿಗೆ ಇರುತ್ತದೆ. ಅಂತಹ ಸ್ಥಳಗಳಲ್ಲಿ ಮಣ್ಣಿನ ರಸ್ತೆ ಮಾಡಿದರೆ ಏನೂ ಉಪಯೋಗವಾಗುವುದಿಲ್ಲ. ಅದಕ್ಕೆ ಬಹಳಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಏಕೆಂದರೆ ಅಲ್ಲಿ ಯಾವ ರೀತಿಯಾದ ದಾರಿಯನ್ನು ಮಾಡಿದರೂ ಕ ಡ ಮಳೆ ಬಂದರೆ ಎಲ್ಲಾ ಕೆಟ್ಟು ಹೋಗಿಬಿಡುತ್ತದೆ. ಅಂತಹ ಪ್ರದೇಶಗಳಲ್ಲಿ ನೋಡಿ ಪ್ರಮುಖವಾಗಿ ಆ ಜನರಿಗೆ ರಸ್ತೆಯ ಸೌಲಭ್ಯಗಳನ್ನು ಒದಗಿಸಿ ಕೊಡತಕ್ಕಂಥಾದ್ದು ಅತ್ಯಂತ ಅವಶ್ಯಕ. ಮತ್ತೊಂದು ವಿಷಯವನ್ನು ಮಾನ್ಯ ಮಂತ್ರಿಗಳಿಗೆ ಸೂಚನೆ ಮಾಡುತ್ತೇನೆ. ಒಂದು ವೇಳೆ ಈ ವರ್ಷ ಒಂದು ಸಾವಿರ ಮೈಲಿಯ ರಸ್ತೆಯನ್ನು ಮಾಡಬೇಕೆಂದು ಯೋಜನೆ ಹಾಕಿಕೊಂಡು ಪ್ರತಿಯೊಂದು ಜಿಲ್ಲೆಗೂ ಸಮಾನವಾಗಿ ಹಂಚುತ್ತಾರೆ. ಆದೇ ರೀತಿ ತಾಲ್ಲೂಕುಗಳಿಗೂ ಕೂಡ ಹಂಚುತ್ತಾರೆ ಆದರೆ ಸಮಾನವಾಗಿ ಹಂಚಬೇಕಾದರೆ ಆಯಾ ತಾಲ್ಲೂಕಿನ ಸ್ಥಿತಿಯನ್ನು ನೋಡಿಕೊಂಡು ರಸ್ತೆ ಕೆಲಸಗಳನ್ನು ಹಂಚಬೇಕು. ಏಕೆಂದರೆ ನಮ್ಮ ರಾಜ್ಯದಲ್ಲಿ ಒಂದೊಂದು ಭಾಗ ಅಭಿವೃದ್ಧಿ ಹೊಂದಿದೆ. ಒಂದೊಂದು ಭಾಗ ಇನ್ನೂ ಅಭಿವೃದ್ಧಿ ಹೊಂದಿಲ್ಲ. ಒಂದೊಂದು ಭಾಗದಲ್ಲಿ ಸಾಕಷ್ಟು ರಸ್ತೆಗಳಾಗಿವೆ. ಇನ್ನೊಂದು ಭಾಗದಲ್ಲಿ ರಸ್ತೆಗಳು ಸಾಕಷ್ಟು ಆಗಿಲ್ಲ. ಇದನ್ನು ಸೂಕ್ಷ್ಮ ರೀತಿಯಿಂದ ಪರೀಕ್ಷೆ ಮಾಡಬೇಕು. ಉದಾಹರಣೆಗೆ ನನ್ನ ಕ್ಷೇತ್ರವಾದ ಚಿಕ್ಕೋಡಿ ಮಟ್ಟಿಗೆ ಹೇಳುವುದಾದರೆ, ನನ್ನ ಕ್ಷೇತ್ರ ಅತ್ಯಂತ ಹಿಂದುಳಿದ ಕ್ಷೇತ್ರ. ಎಲ್ಲ ದೃಷ್ಟಿಯಿಂದ ಅಂದರೆ ಆರ್ಥಿಕ ದೃಷ್ಟಿಯಿಂದ ಹಿಂದುಳಿದಿದೆ. ಶೈಕ್ಷಣಿಕ ದೃಷ್ಟಿಯಿಂದ ಹಿಂದುಳಿದಿದೆ. ಮಳೆಯ ಅಭಾವ ಕೂಡ ನಮ್ಮ ಕ್ಷೇತ್ರದಲ್ಲಿದೆ. ಜನರು ಬಡವರಿದ್ದಾರೆ. ಆ ರೀತಿ ಪ್ರತಿಯೊಂದು ದೃಷ್ಟಿಯಲ್ಲೂ ಹಿಂದುಳಿದಿದ್ದಾರೆ. ಅಲ್ಲಿ ಮೊದಲು ತಾಲ್ಲೂಕು ಬೋರ್ಡಿನವರೂ ರಸ್ತೆಯನ್ನು ಮಾಡಿಲ್ಲ. ಆದ್ದರಿಂದ ಯಾವ ಯಾವ ಭಾಗದಲ್ಲಿ ಸಾಮಾನ್ಯ ಜನರಿದ್ದಾರೆ. ಬಡವರಿದ್ದಾರೆ ಆ ಭಾಗವನ್ನು ನಿರ್ಲಕ್ಷ್ಯ ಮಾಡುವುದು ಸ್ವಾಭಾವಿಕವಾಗಿದೆ. ಮತ್ತೆ ಎಲ್ಲಿ ಒಂದು ವಿಶಿಷ್ಟವಾದ ಜನರಿದ್ದಾರೆ ಅಂತಹ ಪ್ರದೇಶಗಳಲ್ಲಿ ತಾಲ್ಲೂಕು ಬೋರ್ಡಿನವರು ರಸ್ತೆಗಳನ್ನು ಹೆಚ್ಚು ಹೆಚ್ಚಾಗಿ ಮಾಡುತ್ತಾರೆ. ಆ ರೀತಿ ನನ್ನ ಕ್ಷೇತ್ರವಾದ ಚಿಕ್ಕೋಡಿ ತಾಲ್ಲೂಕನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಅಲ್ಲಿ ರಸ್ತೆಗಳಿಲ್ಲ, ಗ್ರಾಮಾಂತರ ಪ್ರದೇಶಕ್ಕೆ ಬಸ್‌ನ ಅನುಕೂಲ ಇಲ್ಲ. ಈಗ ನಾವು ಹೇಳಿದಂತಹ ಎಲ್ಲವನ್ನೂ ಒಂದೇ ಸಾರಿ ಮಾಡುವುದಕ್ಕೆ ಬಹಳ ಕಠಿಣ ಇದೆ. ಆದ್ದರಿಂದ ಸರ್ಕಾರ ಈ ದೃಷ್ಟಿಯಿಂದ ವಿಚಾರ ಮಾಡಿ ನಮ್ಮ ಚಿಕ್ಕೋಡಿ ತಾಲ್ಲೂಕಿನಲ್ಲಿ ಈ ವರ್ಷ ಎಷ್ಟು ಮೈಲಿ ರಸ್ತೆಯನ್ನು ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದಾರೋ ಆ ಯೋಜನೆಯಲ್ಲಿ ನೀವು ಸರಿಯಾಗಿ ಹಂಚಬೇಕು. ಯಾವ ಭಾಗದಲ್ಲಿ ಈವರೆಗೆ ದಾರಿಗಳು ಆಗಿಲ್ಲ. ಯಾವ ಭಾಗದಲ್ಲಿ ಹೆಚ್ಚಿಗೆ ರಸ್ತೆಗಳು ಆಗಿಲ್ಲ. ಆ ಭಾಗಕ್ಕೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಹಿಂದುಳಿದ ಪ್ರದೇಶವೆಂದು ನಮ್ಮ ಕ್ಷೇತ್ರವನ್ನು ತಿಳಿದುಕೊಂಡು ಇಲಾಖೆಯವರು ಹಾಗೆ ಮಾಡಿದರು. ಟಿ.ಡಿ.ಬಿ.ಯವರು ತೆಗೆದುಕೊಂಡಿದ್ದಂತಹ ರಸ್ತೆಗಳ ಕಾರ್ಯಕ್ರಮವನ್ನೂ ಕೂಡ ಅದೇ ರೀತಿ ಮಾಡಿದರು. ನಮ್ಮ ಚಿಕ್ಕೋಡಿ ೩ ಅಸೆಂಬ್ಲಿ ಕ್ಷೇತ್ರವಾಗಿದೆ. ೩ ಭಾಗದಲ್ಲೂ ಸರಿಯಾಗಿ ರಸ್ತೆಗಳನ್ನು ಮಾಡಿಲ್ಲ. ಪ್ರತಿಯೊಂದು ಕ್ಷೇತ್ರದಲ್ಲೂ ಕ್ರಮವಾಗಿ ೨೦ ಕಿಲೋ ಮೀಟರ್ ರಸ್ತೆಗಳ ಕೆಲಸವನ್ನು ತೆಗೆದುಕೊಳ್ಳಬೇಕೆಂದೂ ಮಾಡಿದರೂ ಅದರಲ್ಲೂ ಕೂಡ ಅನ್ಯಾಯ

ವಾಗಿದೆ. ಏಕೆಂದರೆ ಆ ಕಾಲಕ್ಕೆ ನಾನು ಇಲ್ಲದಿಲ್ಲವಾದ್ದರಿಂದ ನನ್ನ ತಾಲ್ಲೂಕನ್ನು ಕಡೆಗಣಿಸಿದ್ದಾರೆ ಎಂಬುದಾಗಿತಿಳಿಸಿದ್ದೇನೆ. ಕಾರಣ ನಾನು ಆಕಾಲಕ್ಕೆ ಕಣ್ಣಿನ ಆಪರೇಷನ್‍ಗಾಗಿ ಆಸ್ಪತ್ರೆಯಲ್ಲಿದ್ದೆನು. ಮತ್ತೆ ಮಾನ್ಯ ಬನ್ನಬಸಪ್ಪನವ ು ಹಿಂದೆ ಅವರು ಲೋಕೋಪಯೋಗಿ ಇಲಾಖೆಯ ಮಂತ್ರಿಯಾಗಿದ್ದಾಗ ನಮ್ಮ ಬೆಳಗಾಂಗೆ ಬಂದು ಎಲ್ಲಾ ಶಾಸಕರನ್ನೂ ಕರೆಸಿ ಯಾವ ಯಾವ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಳ್ಳಬೇಕೆಂದು ಕೇಳಿದ್ದರು. ಆಗಲೂ ನಾನು ಬೇಟಿಯಾಗುವುದಕ್ಕೆ ಸಾಧ್ಯವಾಗದಿದ್ದುದರಿಂದ ನನ್ನ ಭಾಗದಲ್ಲಿ ರಸ್ತೆಯನು ತೆಗೆದುಕೊಂಡಿಲ್ಲ. ಈ ರೀತಿ ನನ್ನ ಕ್ಷೇತ್ರಕ್ಕೆ ಬಹಳ ಅನ್ಯಾಯವಾಗಿದೆ. ಈ ಮೊದಲೂ ರಸ್ತೆಯಾಗಿಲ್ಲ, ಈ ಪ್ರದೇಶದ ಕಡೆಗೆ ಅಧಿಕಾರಿಗಳು ಹೆಚ್ಚಿನ ಲಕ್ಷ್ಯ ಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ೧೯೭೪ನೇ ಇಸವಿಯಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ತೆಗೆದುಕೊಂಡಂತಹ ರಸ್ತೆಗಳ ಕೆಲಸದಲ್ಲಿ ನನ್ನ ಭಾಗದಲ್ಲಿ ಯಾವ ರಸ್ತೆಯ ಕೆಲಸವನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ಈ ಸಲ ಮಾತ್ರ ನನ್ನ ಭಾಗದಲ್ಲಿ ಹೆಚ್ಚಿನ ರಸ್ತೆಗಳ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಕೆಲವು ದಾರಿಗಳಿಗೆ ಬ್ರಿಡ್ಜಸ್ ಆಗಬೇಕಾಗಿದೆ. ಬೇಸಿಗೆ ಕಾಲದಲ್ಲಿ ಆ ರಸ್ತೆಗಳಲ್ಲಿ ಮೋಟಾರ್ ಸರ್ವೀಸ್ ಶುರು ಮಾಡುತ್ತಾರೆ. ಮಳೆಗಾಲ ಪ್ರಾರಂಭವಾದ ಕೂಡಲೇ ಮೋಟಾರ್ ಸರ್ವೀಸನ್ನು ಬಂದ್ ಮಾಡುತ್ತಾರೆ. ಇದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಇದರ ಕಡೆಗೆ ಹೆಚ್ಚಿನ ಲಕ್ಷ್ಯ ಕೊಟ್ಟು ಕೆಲವು ಬ್ರಿಡ್ಜಸ್‍ಗಳನ್ನು ಈ ಸಲ ಮಾಡಬೇಕೆಂದು ವಿನಂತಿ ಮಾಕೊಡಿಳ್ಳುತ್ತೇನೆ.

ಮತ್ತೆ ಗ್ರಾಮಾಂತರ ಪ್ರದೇಶದ ರೈತರು ತನ್ನ ಭೂಮಿಗೆ ಹೋಗಬೇಕಾದರೂ ದಾರಿ ಇರುವುದಿಲ್ಲ. ಆದರಲ್ಲೂ ಮಳೆಗಾಲದಲ್ಲಂತೂ ಎತ್ತಿನ ಗಾಡಿ, ಸೈಕಲ್ಲೂ ಕೂಡ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ರೈತರಿಗೆ ಅನುಕೂಲಗಳನ್ನು ಒದಗಿಸಿಕೊಡುವುದು ಲೋಕೋಪಯೋಗಿ ಇಲಾಖೆಯವರು ತಮ್ಮ ಕರ್ತವ್ಯವೆಂದು ತಿಳಿಯಬೇಕು. ಒಂದು ಗ್ರಾಮದಿಂದ ತನ್ನ ಭೂಮಿಗೆ ಹೋಗಬೇಕಾದರೆ ಸುಮಾರು ಒಂದು ಮೈಲಿ ಇರುತ್ತದೆ. ಜಾಸ್ತಿ ಎಂದರೆ ೧½ ಮೈಲಿ ಇರುತ್ತದೆ. ಇವುಗಳನ್ನು ಲೋಕೋಪಯೋಗಿ ಇಲಾಖೆಯವರು ಮಾಡಿಸಿಕೊಡಬೇಕು. ಈ ಅನುಕೂಲಗಳನ್ನು ರೈತರಿಗೆ ಮಾಡಿಕೊಡದಿದ್ದರೆ ಆತನು ಬಹಳ ಸಂಕಟದಿಂದ ತನ್ನ ಭೂಮಿಗೆ ಹೋಗಬೇಕಾಗುತ್ತದೆ. ಮತ್ತು ಆ ಭೂಮಿಯಲ್ಲಿ ಬೆಳೆದಂತಹ ಮಾಲನ್ನು ತನ್ನ ಮನೆಗೆ ತರುವುದಕ್ಕೂ ಕೂಡ ಆಸ್ಪದವಾಗುವುದಿಲ್ಲ. ಈ ರೀತಿ ಈವರೆಗೂ ಆಗದಿದ್ದರೂ ಕೂಡ ಇನ್ನು ಮುಂದೆ ಲೋಕೋಪಯೋಗಿ ಇಲಾಖೆಯವರು ಇವುಗಳನ್ನು ಪರಿಶೀಲನೆ ಮಾಡಿ ಗ್ರಾಮಾಂತರ ಪ್ರದೇಶದ ರೈತರು ತನ್ನ ಭೂಮಿಗೆ ಹೋಗುವುದಕ್ಕೆ ರಸ್ತೆಯನ್ನು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ರಾಜಗೋಪಾಲ್.—(ಪಾಂಡವಪುರ).—ಅಧ್ಯಕ್ಷ ಮಹಾಶಯರೇ, ಸಮತಾವಾದದಡಿಯಲ್ಲಿ ಸಮತಾವಾದದಿಂದ ರಾಜಕೀಯ ಪವೇಶ ಮಾಡಿದಂತಹ ಇಂದಿನ ನಮ್ಮ ಲೋಕೋಪಯೋಗಿ ಮಂತ್ರಿಗಳು ಈ ಮನೆಯಲ್ಲಿ ಮಂಡಿಸಿರುವ ಬೇಡಿಕೆಗಳ ಮೇಲೆ ಬೆಳಕನ್ನು ಚೆಲ್ಲಲು ನಾನು ಎದ್ದು ನಿಂತಿದ್ದೇನೆ. ಈಗಾಗಲೇ ನನ್ನ ಮಿತ್ರರಾದ ಶ್ರೀಮಾನ್ ರಾಮರೆಡ್ಡಿಯವರು ಬಿಲ್ಡಿಂಗ್ ವಿಚಾರದಲ್ಲಿ ಪ್ಲಾನ್ ವಿಚಾರದಲ್ಲಿ ಸವಿಸ್ತಾರವಾಗಿ ಹೇಳಿದ್ದಾರೆ. ಆವಿಷಯಕ್ಕೆ ನಾನು ಹೋಗದೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಂದ ರಾಜ್ಯದ ಮರಾಮತ್ ಇಲಾಖೆಯವರು ತೆಗೆದುಕೊಂಡಿರತಕ್ಕಂಥ ರಸ್ತೆಗಳ ಬಗ್ಗೆ ಕೆಲವು ಮಾತುಗಳನ್ನು ನಾನು ಹೇಳಬೇಕಾಗುತ್ತದೆ. ಕಳೆದ ೧೫ ವರ್ಷಗಳಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಂದ ತೆಗೆದುಕೊಂಡಿರತಕ್ಕಂಥ ರಸ್ತೆಗಳಲ್ಲಿ ೧೦೦ಕ್ಕೆ ೧೫ ಭಾಗ ಕೂಡ ಸರಿಯಾದ ವ್ಯವಸ್ಥಿತವಾದ ರಸ್ತೆಗಳಿಲ್ಲ ಎಂಬುದನ್ನು ಮಾನ್ಯ ಸಚಿವರ ಗಮನಕ್ಕೆ ನಾನು ತರುತ್ತಿದ್ದೇನೆ. ರೂರಲ್ ಏರಿಯಾಗಳಲ್ಲಿರುವ ರಸ್ತೆಗಳು ಬಹಳ ಅನಾನುಕೂಲ ಪರಿಸ್ಥಿತಿಯಲ್ಲಿವೆ. ಬಸ್ ಸೌಕರ್ಯ ನಿಂತುಹೋಗಿದೆ. ಗಾಡಿಗಳೂ ಕಡ ಹೋಗುವುದಕಾಗುವುದಿಲ್ಲ. ಇವುಗಳನ್ನು ತಾವು ಕೆಲವು ಸಲ ಹಳ್ಳಿಮಟ್ಟದ ಪ್ರವಾಸಕ್ಕೆ ಹೋದಾಗ ನೋಡಬಹುದು. ಇದನ್ನು ತಮ್ಮ ಗಮನಕೆ ತರತ್ತಿದ್ದೇನೆ.

ಮತ್ತು ಹೈವೇ ವಿಚಾರದಲ್ಲಿ ಇವುಗಳಲ್ಲಿ ನ್ಯಾಷನಲ್ ಹೈವೇ ಮತ್ತು ಸ್ಟೇಟ್ ಹೈವೇ ಎಂಬುದಾಗಿ ಇವೆ. ಇವುಗಳಿಗೆ ಅನೇಕ ಕಡೆ ತಿರುವುಗಳಲ್ಲಿ ಮತ್ತೆ ಹಳ್ಳಗಳು ಬರುವ ಕಡೆ ಸೇತುವೆಗಳನ್ನು ಕಟ್ಟಿದಾರೆ. ರಸ್ತೆಗಳು ಅಂದರೆ ಹೈವೇಸ್‍ಗಳು ಸಾಮಾನ್ಯವಾಗಿ ೮೦ ಅಡಿಯಿಂದ ೧೦೦ ಅಡಿಯವರೆಗೂ ಇರುತ್ತದೆ. ಇಂತಹ ರಸ್ತೆಗಳಿಗೆ ಹಾಕುವ ಬ್ರಿಡ್ಜಸ್‍ನ್ನು ೨೪ ಅಡಿಯಿಂದ ೩೦ ಅಡಿಯೊಳಗೆ ಮಾಡಿಬಿಡುತ್ತಾರೆ.

ಇದರಿಂದ ಅಪಘಾತಗಳು ಹೆಚ್ಚಾಗಿ ನಡೆಯುತ್ತಿವೆ. ಆದ್ದರಿಂದ ಅದಕ್ಕಾಗಿ ನನ್ನ ಸಲಹೆಯೇನೆಂದರೆ, ಬಹುಶಃ ೮೦ ಅಡಿ ರಸ್ತೆ ಇದ್ದರೆ ಕೊನೆಯಪಕ್ಷ ಎರಡು ಲಾರಿಗಳು ಏಕ ಸಮಯದಲ್ಲಿ ೩–೪ ಅಡಿ ಅಂತರ ಬಿಟ್ಟು ಒಂದೇ ಸಾರಿ ಎದುರುಬದರು ಕಡೆಯಿಂದ ಬರುವ ವ್ಯವಸ್ಥೆ ಮಾಡಬೇಕು. ಆ ರೀತಿ ಮಾಡಿದ್ದೇ ಆದರೆ ಅಪಘಾತಗಳು ಕಡಿಮೆಯಾಗುತ್ತವೆಂದು ಹೇಳುತ್ತೇನೆ. ಮತ್ತೆ ಈ ರಸ್ತೆಗಳ ಪಕ್ಕದಲ್ಲಿ ಮರಗಳಿವೆ. ರಸ್ತೆಗಳನ್ನು ಅಗಲ ಮಾಡಿದ ಮೇಲೆ ಅವುಗಳನ್ನು ತೆಗೆಸಿಲ್ಲ. ಆದ ಕಾರಣ ಸೆಂಟ್ರಲ್ ಲೈನ್ ನಿಂದ ೪೦ ಅಡಿ ಬಿಟ್ಟು ಅಡ್ಡ ಬರುವ ಮರಗಳನ್ನೆಲ್ಲಾ ತೆಗೆಸಿಹಾಕಬೇಕೆಂದು ಹೇಳುತ್ತೇನೆ.

ಇನ್ನು ಕಟ್ಟಡಗಳಿಗೆ ಸಂಬಂಧಪಟ್ಟಂತೆ ಷೆಡ್ಯೂಲ್ ಆಫ್ ರೇಟ್ಸ್‌ನ್ನು ನಮ್ಮ ಮಿತ್ರರು ಹೇಳಿದರು ನಾನು ರಸ್ತೆಗಳ ಕಾಮಗಾರಿಗಳ ಬಗ್ಗೆ ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಈಗ Gravelly soil, Loose soil, Black Cotton Soil, Soil with mud ಇವುಗಳಿಗೆ ಸಂಬಂಧಪಟ್ಟಂತೆ ಕೊಡುತ್ತಿರುವ ದರ ಬಹಳ ಕಡಿಮೆ ಎಂದು ಹೇಳುತ್ತೇನೆ. ಕಂಟ್ರಾಕ್ಟ್‌ದಾರರು ಲಂಚ ಕೊಟ್ಟು ಹೆಚ್ಚು ದರವನ್ನು ತೆಗೆದುಕೊಳ್ಳುವುದಕ್ಕೆ ನೀವೇ ಅನುವು ಮಾಡಿಕೊಟ್ಟಿದ್ದೀರಿ ಎಂದು ನಾನು ಹೇಳುತ್ತೇನೆ. ನಾನು ಹೇಳುತ್ತೇನೆ. ನಾನೂ ಕೂಡ ಇಂಜನಿಯರಿಂಗ್ ಕಂಟ್ರಾಕ್ಟರ್ ಆಗಿ ಕೆಲಸ ಮಾಡಿದ್ದೇನೆ. ಆ ಒಂದು ಅನುಭವದಿಂದ ಹೇಳಬೇಕೆಂದರೆ, ಇದರಲ್ಲಿ ಅನೇಕ ನ್ಯೂನತೆಗಳಿವೆ. ಈಗ ಅಡಿಗೆ ಒಂದು ರೂಪಾಯಿ ೧೫ ಪೈಸೆಯಂತೆ ಕೊಡಲಾಗುತಿದೆ. ಆದರೆ ಈ ಕೆಲಸ ಮಾಡಿಸಲು ಅಡಿಗೆ ೨ ರೂ. ೩೦ ಪೈಸೆಯಿಂದ ೨ ರೂ. ೩೫ ಪೈಸೆವರೆಗೆ ಖರ್ಚು ಬೀಳುತ್ತದೆ. ಈ ಕಾರಣದಿಂದ ನಷ್ಟವನ್ನು ತುಂಬಿಕೊಳ್ಳಲು ಅರ್ಧ ಅಡಿ ಕೆಲಸ ಮಾಡಿದರೆ ಒಂದು ಅಡಿ ಇಲ್ಲವೇ ಒಂದೂವರೆ ಅಡಿ ಕೆಲಸ ಮಾಡಲಾಗಿದೆ ಎಂದು ಲೆಕ್ಕ ಕೊಡಬೇಕಾಗಿದೆ. ಆದಕಾರಣ ಈಗಿನ ದರವನ್ನು ಬದಲಾವಣೆ ಮಾಡದಿದ್ದರೆ ಕಂಟ್ರಾಕ್ಟರಾಗಳು ಉದ್ಧಾರವಾಗುವುದಿಲ್ಲವೆಂದು ಹೇಳುತ್ತೇನೆ. ಮೊದಲು data workout ಮಾಡಬೇಕೆಂದು ಹೇಳುತ್ತೇನೆ. ಯಾವಯಾವ ಪ್ರದೇಶಗಳಲ್ಲಿ ಮಣ್ಣಿನ ಸ್ಥಗಿತ ಮತು ಬಿಗಿತ ಯಾವಯಾವ ರೀತಿಯಲ್ಲಿದೆ ಎಂಬುದನು ಪರೀಕ್ಷೆ ಮಾಡಿಸಿ ಅದರ ಆಧಾರದ ಮೇಲೆ ದರವನ್ನು ನಿಗದಿ ಮಾಡಬೇಕೆಂದು ಹೇಳುತ್ತೇನೆ. ದರವನ್ನು ಪುನರ್ವಿಮರ್ಷೆ ಮಾಡದಿದ್ದರೆ ಕಂಟ್ರಾಕ್ಟರ್‌ಗಳು ಮತ್ತು ಇಂಜಿನಿಯರಗಳು ಸಮಾಜವಾದದ ಅಡಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಈಗಿನ ಲಂಚದ ವ್ಯವಸ್ಥೆ ಇಲ್ಲದೆ ಕೆಲಸವಾಗಬೇಕಾದರೆ ಮೊದಲು data work out ಮಾಡಿಸಬೇಕೆಂದು ಎಂದು ಹೇಳುತ್ತೇನೆ. ಮುಖ್ಯವಾಗಿ Hard rock and big types of rocks ನ್ನು ೩೦–೪೦ ಅಡಿಗಳಿಂದ ಮೇಲಕ್ಕೆ ಲಿಸ್ಟ್ ಮಾಡಬೇಕಾದರೆ ೨೮ ರಿಂದ ೨೯ ರೂ. ಗಳವರೆಗೆ ಖರ್ಚಾಗುತ್ತದೆ. ಜೊತೆಗೆ ಕಲ್ಲಿನ ಪುಡಿಯನ್ನು ಸಹ ಮೇಲಕ್ಕೆ ಸಾಗಿಸಬೇಕಾಗುತ್ತದೆ. ಇದರಿಂದ ಕಂಟ್ರಾಕ್ಟರ್‌ಗಳಿಗೆ ನಷ್ಟವಾಗುತ್ತದೆ. ಈ ಎಲ್ಲ ನ್ಯೂನತೆಗಳನ್ನು ಹೋಗಲಾಡಿಸಲು ಕಂಟ್ರಾಕ್ಟರ್‌ಗಳು ಮತ್ತು ಕೆಲವು ಖಾಸಗೀ ಇಂಜಿನಿಯರ್‌ಗಳನ್ನು ಸೇರಿಸಿ data workout ಮಾಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಸೇತುವೇಗಳ ಬಗ್ಗೆ ಹೇಳಬೇಕೆಂದರೆ, ಈಗಾಗಲೇ ಹಲವಾರು ಸೇತುವೆಗಳ ಕೆಲಸವನ್ನು ತೆಗೆದುಕೊಂಡಿದ್ದೀರಿ. ನನ್ನ ಸಬ – ಡಿವಿಜನ್ ಬಗ್ಗೆ ಹೇಳಬೇಕೆಂದರೆ. Mahadevapur. bridge across Cauveri river, Sriranagapatna, ಇಲ್ಲಿ ಸೇತುವೆಯ ಕೆಲಸವನ್ನು ಪ್ರಾರಂಭ ಮಾಡಿ ಬಹಳ ಕಾಲವಾಯಿತು. ಇದರ ಬಗ್ಗೆ ತಮ್ಮ ಗಮನ ಇದೆಯೋ ಇಲ್ಲವೋ ಗೊತ್ತಿಲ್ಲ. ಇದನ್ನು ಜಾಗ್ರತೆ ಕಟ್ಟಿ ಮುಗಿಸಬೇಕೆಂದು ಹೇಳುತ್ತೇನೆ. Across Lokapavani river near Sanka–napura, Kalenahalli: ಇದು ಈಗ ೮ ಲಕ್ಷಕ್ಕೆ ಎಸ್ಟಿಮೇಟ್ ಆಗಿದೆ. ಈ ಮೊದಲು ಇದು ೪ ಲಕ್ಷಕ್ಕೆ ಆಗಿತ್ತು, ನಂತರ ೬ ಲಕ್ಷವಾಯಿತು. ಈಗ ೮ ಲಕ್ಷಕ್ಕೆ ಬಂದಿದೆ. ಇನ್ನೂ ನಿಧಾನವಾದರೆ ಅದು ಹತ್ತು ಲಕ್ಷಕ್ಕೆ ಬರಬಹುದು. ಈ ಸೇತುವೆ ಇನ್ನು ಆಗದ ಪ್ರಯುಕ್ತ ಅಲ್ಲಿಯ ಜನರಿಗೆ ಬಹಳ ಅನಾನುಕೂಲವಾಗಿದೆ. ಜನರು ೨೨ ಮೈಲಿಗಳವರೆಗೆ ಸುತ್ತಿಕೊಂಡು ಪಾಂಡಪುರಕ್ಕೆ ಬರಬೇಕಾಗಿದೆ. ಆದ ಕಾರಣ ಮುಂದೆ ಇದಕ್ಕೆ ೧೫ ಲಕ್ಷ ರೂ.ಗಳನ್ನು ಖರ್ಚು ಮಾಡುವುದಕ್ಕೆ ಬದಲು ಈಗಲೇ ೧೦ ಲಕ್ಷದೊಳಗೇ ಮಾಡಿ ಮುಗಿಸಬೇಕೆಂದು ಹೇಳುತ್ತೇನೆ. Bridge across Adhahalli near Sithapura ಇದೂ ಕೂಡ ಜಾಗ್ರತೆ ಆಗಬೇಕಾಗಿದೆ. ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಇದು ಬರುತ್ತದೆ. ಜೊತೆಗೆ ಸಕ್ಕರೆ ಕಂಪನಿಯವರು ಸರ್ಕಾರಕ್ಕೆ ಹತ್ತಾರು ಲಕ್ಷ ರೂ.ಗಳನ್ನು ಸರ್ಕಾರಕ್ಕೆ ಕೊಡುತ್ತಿದ್ದಾರೆ. ಈ ಹಣದಿಂದಲಾದರೂ ಈ ಕೆಲಸವನ್ನು ಮಾಡಿ ಮುಗಿಸಬೇಕೆಂದು ಹೇಳುತ್ತೇನೆ. ಕಳೆದ ಹತ್ತು ವರ್ಷ

ಗಳಿಂದ ಈ ಕೆಲಸದ ಬಗ್ಗೆ ರೆಕಾರ್ಡ್ ನಡೆಯುತ್ತಿದೆ. ಆದರೆ ಯಾವ ಮಂತ್ರಿಗಳೂ ಇದರ ಕಡೆಗೆ ಗಮನ ಕೊಟ್ಟಿಲ್ಲ. ತಾವು ಯುವಕರಾಗಿದ್ದೀರಿ. ಮತ್ತು ಗ್ರಾಮಾಂತರ ಪ್ರದೇಶದಿಂದ ಬಂದಿದ್ದೀರಿ. ಆದ ಕಾರಣ ತಾವಾದರೂ ಈ ಸೇತುವೆಯ ಬಗ್ಗೆ ಗಮನಹರಿಸಿ ಜಾಗ್ರತೆ ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಮೇಜರ್—ಬ್ರಿಡ್ಜ್ ಬಗ್ಗೆ ಹೇಳಬೇಕೆಂದರೆ, Bridge across Kabini river near Nanjangud. ಇದರ ಅವಶ್ಯಕತೆ ಎಷ್ಟಿದೆ ಎಂಬುದು ತಮಗೂ ಗೊತ್ತಿದೆ. ಆದಕಾರಣ ಇದನ್ನು ಜಾಗ್ರತೆ ಕಟ್ಟಿಮುಗಿಸಬೇಕೆಂದು ಕೆಲವು ಮಾನ್ಯ ಸದಸ್ಯರು ಈಗಾಗಲೇ ಹೇಳಿದ್ದಾರೆ. ಕಾಲಕ್ಕೆ ಸರಿಯಾಗಿ ಕೆಲಸ ಮಾಡಿ ಮುಗಿಸದಿದ್ದವರ ಮೇಲೆ ಏನು ಕ್ರಮ ತೆಗೆದು ಕೊಂಡಿದ್ದೀರಿ ಎಂದು ಸಹ ಅವರು ತಮ್ಮನ್ನು ಕೇಳಿದ್ದಾರೆ. ಅದನ್ನೇ ನಾನು ಕೇಳುತ್ತಿದ್ದೇನೆ. Bridge across Kanva river near Channapatna; ಇದರ ಕೆಲಸವನ್ನು ಸಹ ನಿಧಾನ ಮಾಡಿದ್ದೀರಿ. ದಯವಿಟ್ಟು ಇದನ್ನು ಸಹ ಆದಷ್ಟು ತ್ವರಿತವಾಗಿ ಮಾಡಿಸಬೇಕೆಂದು ಹೇಳುತ್ತೇನೆ.

ಇನ್ನು ಸಬ್—ಡಿವಿಜನ್ ಮಟ್ಟದಿಂದ ಡಿವಿಜನ್ ಮಟ್ಟಕ್ಕೆ ಎಸ್ಟಿಮೇಟ್‌ಗಳು ಮಂಜೂರಾತಿಗಾಗಿ ಹೋದಾಗ ನಿಜಕ್ಕೂ ಏನಾಗುತ್ತದೆಂಬುದನ್ನು ಹೇಳುತ್ತೇನೆ. ಇದನ್ನು ತಾವು ಗಮನದಲ್ಲಿಟ್ಟು ಕೊಳ್ಳ ಬೇಕು. ಎಲ್ಲ ಇಂಜಿನಿಯರಗಳ ಮೇಲೂ ನಾನು ಆಪಾದನೆ ಮಾಡುವುದಿಲ್ಲ. ಆದರೆ ಎಕ್ಸಿಕ್ಯುಟಿವ್ ಇಂಜಿನಿಯರ್ ಲೆವಲ್‌ನಲ್ಲಿ ಏನು ನಡೆಯುತ್ತಿದೆ ಎಂದರೆ, ಒಂದು ಸಾವಿರ ಇಲ್ಲವೇ ೨ ಸಾವಿರ ರೂ.ಗಳ ಎಸ್ಟಿಮೇಟ್‌ಗಳನ್ನು ಪಾಸ್ ಮಾಡಬೇಕಾದರೂ ಸಹ ಜೂನಿಯರ್ ಇಂಜಿನಿಯರ್ ಆದವರು ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ಗೌರವಯುತವಾದಂಥ ಸಂಭಾವನೆಯನ್ನು ಕೊಡಬೇಕು. ಇಲ್ಲದಿದ್ದರೆ ಅದು ಪಾಸಾಗುವು ದಿಲ್ಲ. ಇದಾದನಂತರ ಜೂನಿಯರ್ ಇಂಜಿನಿಯರ್ ಕಂಟ್ರಾಕ್ಟರ್ ಬಳಿ ಹಣ ವಸೂಲಿ ಮಾಡುತ್ತಾರೆ. ಈ ರೀತಿ ನಡೆದರೆ ಕೆಲಸಗಳು ಯಾವ ರೀತಿ ನಡೆಯುತ್ತದೆಂಬುದನ್ನು ತಾವೇ ತಿಳಿದುಕೊಳ್ಳಬಹುದು. ಒಂದು ಸಬ್—ಡಿವಿಜನ್‌ಗೆ ೫ ಲಕ್ಷ ರೂ.ಗಳನ್ನು ಕೊಡುತ್ತೀರಿ. ಇದು ಸಾಲದು, ೫೦ ಲಕ್ಷ ರೂ.ಗಳನ್ನಾದರೂ ಕೊಡಬೇಕು. ಆಡಳಿತ ನಡೆಸುವವರ ಸಂಬಳಸಾರಿಗೆಗೇ ೫ಲಕ್ಷ ರೂ.ಗಳಷ್ಟು ಖರ್ಚಾಗುವಾಗ ಕೆಲಸ ಗಳಿಗೂ ೫ಲಕ್ಷ ರೂ.ಗಳನ್ನು ಕೊಡುವುದು ಸರಿಯಲ್ಲ. ಇಷ್ಟು ಅಲ್ಪ ಹಣದಲ್ಲಿ ಯಾವ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಈ ಹಣದಲ್ಲಿ ನಾನು ಮೊದಲೇ ಹೇಳಿದಂತೆ ಮೂರುಮುಕಾಲು ಲಕ್ಷ ರೂ. ಗಳು ಸೋರಿಹೋಗುತ್ತಿದೆ. ಇನ್ನು ಒಂದು ಲಕ್ಷದ ಇಪ್ಪತ್ತೈದು ಸಾವಿರ ರೂ.ಗಳಷ್ಟು ಮಾತ್ರ ಕೆಲಸ ವಾಗುತ್ತದೆ. ಆದಕಾರಣ ಈ ಗ್ರಾಂಟ ಹಣವನ್ನು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ,

ಇನ್ನು ಲೋಕೋಪಯೋಗಿ ಇಲಾಖೆಗೆ ಸೇರಿದಂತೆ ಇನ್ಸ್‌ಪೆಕ್ಷನ್ ಬಂಗಲಾ ಇಲ್ಲವೇ ಟ್ರಾವಲರ್ಸ್ ಬಂಗಲೆ ಎಲ್ಲ ತಾಲ್ಲೂಕ್‌ಗಳಲ್ಲಿ ಇರುವುದಿಲ್ಲ. ಕೆಲವು ಕಡೆ ಮಾತ್ರ ಇವೆ. ನನ್ನ ತಾಲ್ಲೂಕಿನ ಬಗ್ಗೆ ಹೇಳ ಬೇಕೆಂದರೆ, ಮೇಲುಕೋಟೆಯಲ್ಲಿ ಎರಡು ಕೊಠಡಿಗಳಿರುವಂತಹ ಒಂದು ಪ್ರವಾಸಿಬಂಗಲೆ ಇದೆ. ಇಲ್ಲಿ ವರ್ಷದಲ್ಲಿ ಅನೇಕ ಸಲ ಉತ್ಸವಗಳು ನಡೆಯುತ್ತವೆ. ದೊಡ್ಡ ಜಾತ್ರೆ ಸೇರುತ್ತದೆ. ಆಗ ಬೇಕಾದಷ್ಟು ಜನರು ಅಲ್ಲಿಗೆ ಬರುತ್ತಾರೆ. ಅವರು ಅನುಕೂಲಕ್ಕೆ ಕೊಠಡಿಗಳ ಸಂಖ್ಯೆಯನ್ನು ಹತ್ತಕ್ಕಾದರೂ ಹೆಚ್ಚು ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಎಂದು ಏನಿದ್ದಾರೆ, ಅವರಿಗೆಲ್ಲಾ ಟೆಲಿಫೋನ್ ಸೌಲಭ್ಯ ಒದಗಿಸಬೇಕೆಂದು ಹೇಳುತ್ತೇನೆ. ಈಗ ಅಸಿಸ್ಟೆಂಟ್ ಕಮೀಷನರ್, ತಹಶೀಲ್ ದಾರ್ ಮುಂತಾದ ಎಲ್ಲ ಎಲ್ಲ ಅಧಿಕಾರಿಗಳಿಗೂ ಈ ಸೌಲಭ್ಯವಿದೆ. ಆದರೆ ಇವರಿಗೆ ಮಾತ್ರ ಇಲ್ಲ. ಈ ಕಾರಣದಿಂದ ಇವರನ್ನು ಕಾಣಬೇಕಾದರೆ ಅವರ ಕಛೇರಿಗೆ ಹೋಗಬೇಕು, ಇಲ್ಲವೇ ಅವರ ಮನೆಗೆ ಹೋಗಬೇಕು ಇಲ್ಲವೇ ಕೆಲಸ ನಡೆಯುತ್ತಿರುವ ಕಡೆಗೆ ಹೋಗಬೇಕು ಈ ಅಲೆದಾಟವನ್ನು ತಪ್ಪಿಸಬೇಕಾ ದರೆ ಅವರಿಗೆ ಕೂಡಲೇ ಫೋನ್ ಸೌಲಭ್ಯವನ್ನು ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಕುದರೆ ಮುಖದ ರಸ್ತೆಯ ಕೆಲಸವನ್ನು ಮೂರು ತಿಂಗಳಿಗೆ ಬದಲು ೨ ತಿಂಗಳು ೨೯ ದಿವಸಗಳಲ್ಲಿಯೇ ಮಾಡಿ ಮುಗಿಸಲಾಗಿದೆ. ಅದಕ್ಕಾಗಿ ಚಿನ್ನದ ಪದಕವನ್ನು ನಿಮ್ಮ ಇಲಾಖೆಗೆ ಕೊಡ ಬೇಕು. ಈ ಬಗ್ಗೆ ನನ್ನ ಚಕಾರ ಶಬ್ದವಿಲ್ಲ. ಆದರೆ ಕಂಟ್ರಾಕ್ಟ್‌ದಾರರಿಗೆ ಕೊಡತಕ್ಕಂಥ ರೇಟ್ ವಿಚಾರ ದಲ್ಲಿ ನೀವು ಏನು ಪ್ರಾಮಿಸ್ ಮಾಡಿದ್ದಿರಿ, ಅದರಂತೆ ನಡೆದುಕೊಂಡಿಲ್ಲ. ಇದರಿಂದ ಕಂಟ್ರಾಕ್ಟ್‌ದಾರರಿಗೆ ಬಹಳ ಹಿಂಸೆಯಾಗಿದೆ. ಬ್ಯಾಂಕ್‌ನಲ್ಲಿ ಓವರ್‌ಡ್ರಾಫ್ಟ್ ಆಗಿದೆ. ಅವರು ಸಾಲಗಾರರಾಗಿ ಸಾಯುತ್ತಿದ್ದಾರೆ. ಅವರ ಕಷ್ಟವನ್ನು ತಪ್ಪಿಸಲು ಆದಷ್ಟು ಶೀಘ್ರವಾಗಿ ಅವರಿಗೆ ಏನು ಪ್ರಾಮಿಸ್ ಮಾಡಿದ್ದಿರೋ ಅದನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕಡೆಯದಾಗಿ ಹೇಳಬೇಕೆಂದರೆ, ಲೋಕೋಪಯೋಗಿ ಮಂತ್ರಿಗಳ ಆಸಕ್ತಿ ಹೆಚ್ಚಾಗಿ ಬೆಂಗಳೂರು, ಮೈಸೂರು ಮುಂತಾದ ದೊಡ್ಡದೊಡ್ಡ ಪಟ್ಟಣಗಳ ರಸ್ತೆಗಳ ಕಡೆಗೇ ಇದೆ. ಗ್ರಾಮಾಂತರ ಪ್ರದೇಶಗಳ ರಸ್ತೆಗಳ ಕಡೆಗೂ ಅವರ ಆಸಕ್ತಿ ಇರಬೇಕು, ಹೆಚ್ಚುಹೆಚ್ಚು ರಸ್ತೆಗಳನ್ನು ಮಾಡಿಸಿಕೊಡಬೇಕು, ಬಸ್‌ಗಳ ಸಂಚಾರ ಜಾಸ್ತಿಯಾಗಬೇಕೆಂದು ಹೇಳುತ್ತೇನೆ. ಪ್ರತಿ ತಾಲ್ಲೂಕಿನಲ್ಲಿರುವ ರಸ್ತೆಗಳ ವಿಚಾರವನ್ನು ತಿಳಿದುಕೊಳ್ಳಲು ಮಾನ್ಯ ಮಂತ್ರಿಗಳು ಪ್ರತಿ ತಾಲ್ಲೂಕಿಗೂ ಸಹ ಪ್ರತಿ ತಿಂಗಳೂ ಬರಬೇಕೆಂದು ಸಲಹೆ ಮಾಡಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಜೈಹಿಂದ್.

† ಶ್ರೀ ಕಡಿದಾಳ್ ದಿವಾಕರ್ (ತೀರ್ಥಹಳ್ಳಿ)—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಈ ದಿವಸ ಏನು ತಮ್ಮ ಬಡ್ಜೆಟನ್ನು ಮಂಡಿಸಿದ್ದಾರೆ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಜೊತೆಗೆ ಬೆಂಬಲಕೊಟ್ಟು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ನಮ್ಮ ಚೌಡಯ್ಯನವರು ಹೇಳಿದ ಹಾಗೆ ಈ ಬೇಡಿಕೆಗೆ ಏನು ಹಣವನ್ನು ಇಟ್ಟಿದ್ದಾರೆ ಅದು ಬಹಳ ಕಡಿಮೆ ಆದ್ದರಿಂದ ಮೊದಲು ಇದನ್ನು ಜಾಸ್ತಿ ಮಾಡಬೇಕು ಎಂದು ನಾನು ಕೂಡಾ ಹೇಳುತ್ತೇನೆ. ಇನ್ನು ಏನು ಅಂದರೆ ಹಣದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು, ಇನ್ನು ನಮ್ಮ ಮಲೆನಾಡಿನಲ್ಲಿ ರಸ್ತೆಗಳ ಸಂಪರ್ಕ ಬಹಳ ಕಡಮೆ ಆದ್ದರಿಂದ ದಯಮಾಡಿ ನಮ್ಮ ತಾಲ್ಲೂಕಿಗೆ ಹಾಗೂ ನಮ್ಮ ಮಲೆನಾಡು ಭಾಗಕ್ಕೆ ಜಾಸ್ತಿ ರಸ್ತೆಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಯಾವುದೇ ರಸ್ತೆಗಳಲ್ಲಿ ಜನರು ಹಾಗೂ ಗಾಡಿಗಳು ಹೋದರೆ ಆ ಮಣ್ಣಿನಲ್ಲಿ ಹೂತುಹೋಗುತ್ತವೆ ನಮ್ಮ ಮಲೆನಾಡಿನಲ್ಲಿಯ ದುಸ್ಥಿತಿಯನ್ನು ನೋಡಿದರೆ ಬಹಳ ಚಿಂತಾಜನಕವಾಗಿದೆ ಯಾರಾದರೂ ಕಾಯಿಲೆ ಬಿದ್ದರೆ ನಾಲ್ಕು ಐದು ಮೈಲಿಗಳು ಜೋಳಿಗೆ ಕಟ್ಟಿಕೊಂಡು ಹೋಗಬೇಕಾಗಿದೆ. ಅಂತಹ ಪರಿಸ್ಥಿತಿ ನಮ್ಮ ಭಾಗದ ರಸ್ತೆಗಳಲ್ಲಿ ಆಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೆ. ಮಲೆನಾಡಿನ ಭಾಗದ ರಸ್ತೆಗಳನ್ನು ದಯಮಾಡಿ ಅಭಿವೃದ್ಧಿಪಡಿಸಿಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ತಾವು ಕೂಡ ಮಲೆನಾಡಿನಿಂದ ಬಂದವರೇ ಆಗಿರುವುದರಿಂದ ತಮಗೆ ಪರಿಸ್ಥಿತಿ ಚೆನ್ನಾಗಿ ಗೊತ್ತಿರುವುದರಿಂದ ತಾವು ಕೂಡ ಅಲ್ಲಿ ಜಾಸ್ತಿ ರಸ್ತೆಗಳನ್ನು ಮಾಡಬೇಕೆಂದು ಇಚ್ಛೆಪಟ್ಟಿದ್ದೀರೆಂದು ತಿಳಿದಿದ್ದೇನೆ. ದಯಮಾಡಿ ಮಣ್ಣಿನ ರಸ್ತೆಗಳನ್ನು ಅಸ್‌ಫಾಲ್ಟ್ ಮಾಡಬೇಕು ಇಲ್ಲದೆ ಬರೀ ಮಣ್ಣಿನ ರಸ್ತೆಯನ್ನು ಮಾಡಿದರೂ ಏನು ಉಪಯೋಗವಾಗುವುದಿಲ್ಲ ಇನ್ನು ಇಂಟರ್‌ರೋಡ್‌ನ್ನು ನಮ್ಮ ಅಗುಂಬೆ ಮೂಲಕ ಹೆವಿ ವೇಹಿಕಲ್ಸ್ ಹೋಗುವುದಕ್ಕೆ ಆಗುವುದಿಲ್ಲವಾದ್ದರಿಂದ ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅದು ಏನೆಂದರೆ ಡಿಸ್ಟ್ರಿಕ್ಟ್ ಇಂಟರ್ ಲಿಂಕ್ ರೋಡ್ ಏನು ಇರುತ್ತವೆ ಅವುಗಳನ್ನು ಕುಂದಾಪುರ ಮೂಲಕವಾಗಿ ಹೋಗುವದಕ್ಕೆ ಎಲ್ಲೆಲ್ಲಿ ದೊಡ್ಡ ದೊಡ್ಡ ವೆಹಿಕಲ್ಸ್ ಅಂದರೆ ಬಸ್‌ಗಳು ಹಾಗೂ ಲಾರಿಗಳು ಹೋಗುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ತಮ್ಮಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಬರೀ ರಸ್ತೆಗಳನ್ನು ಮಾಡಿದರೆ ಪ್ರಯೋಜನವಾಗವುದಿಲ್ಲ ಅದರ ಜೊತೆಗೆ ಸೇತುವೆಗಳನ್ನು ಕೂಡ ಮಾಡಬೇಕು, ಸೇತುವೆಗಳನ್ನು ಸರಿಯಾದ ರೀತಿಯಲ್ಲಿ ಮಾಡದೆ ಹೋದರೆ ರಸ್ತೆಗಳು ಇದ್ದರೂ ಪ್ರಯೋಜನವಾಗುವುದಿಲ್ಲ. ಏನು ಸೇತುವೆಗಳನ್ನು ಮಾಡುತ್ತೀರಿ ಅವು ಲೋ ಲೆವೆಲ್ ಕ್ರಾಸ್‌ವೆಗಳನ್ನು ಮಾಡಿದರೆ ಪ್ರಯೋಜನವಾಗುವುದಿಲ್ಲ. ದೊಡ್ಡ ದೊಡ್ಡ ಸೇತುವೆಗಳನ್ನು ಮಾಡಬೇಕು. ಇನ್ನು ಕಳೆದ ಜೂನ್ ೧೫ರಲ್ಲಿ ನಮ್ಮ ಸೇತುವೆಗಳು ಬ್ರೀಚ್ ಆಗಿದ್ದನ್ನು ನೋಡಿದರೆ ಅಲ್ಲಿ ಬರೀ ನೀರು ಹರಿಯುವುದಿಲ್ಲ. ದೊಡ್ಡ ದೊಡ್ಡ ಬಂಡೆಗಳು, ಬಿದಿರು ಬಡ್ಡೆಗಳು ಹಾಗೂ ಮರಗಳು ಕೊಚ್ಚಿಕೊಂಡು ಬರುವುದರಿಂದ ಸೇತುವೆಗಳು ಕೊಲ್ಯಾಪ್ಸ್ ಆಗಿವೆ. ಆದ್ದರಿಂದ ದಯಮಾಡಿ ಮಾನ್ಯಮಂತ್ರಿಗಳು ನಮ್ಮ ಮಲೆನಾಡು ಭಾಗದ ಸೇತುವೆಗಳನ್ನು ದೊಡ್ಡ ದೊಡ್ಡ ಸೇತುವೆಗಳನ್ನಾಗಿ ಮಾಡಿಸಿಕೊಡಬೇಕೆಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದರಲ್ಲಿಯೂ ನನ್ನ ಕಾನ್‌ಸ್ಟಿಟ್ಯೂನ್ಸಿಯಲ್ಲಿ ಮುಡುಬಾದಲ್ಲಿ ಒಂದು ಬ್ರಿಡ್ಜ್ ಕಟ್ಟುವುದಕ್ಕೆ ಪ್ರಾರಂಭ ಮಾಡುವಾಗ ನನಗೆ ೮ ವರ್ಷವಾಗಿತ್ತು ಇವತ್ತು ನನಗೆ ೨೮ನೇ ವರ್ಷ ನಡೆಯುತ್ತಾ ಇದೆ ಆದರೂ ಕೂಡ ಆ ಕೆಲಸ ಪೂರ್ಣವಾಗಿಲ್ಲ ಇದನ್ನು ಮುಗಿಸಬೇಕಾದರೆ ಇನ್ನು ಎಷ್ಟು ವರ್ಷಗಳು ಬೇಕಾಗುತ್ತವೆಂದು ಗೊತ್ತಿಲ್ಲ. ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ದಯಮಾಡಿ ಈ ಎರಡು ಮುಖ್ಯ ಸೇತುವೆಗಳನ್ನು ಮಾಡಿಸಿಕೊಡಬೇಕೆಂದು ಹೇಳಿ. ಇನ್ನು ಮಿನಿಮಮ್ ನೀಡ್ ಪ್ರೋಗ್ರಾಂ ಏನು ಇದೆ ಅದರಲ್ಲಿ ಕನಿಷ್ಟ ೧೫೦೦ ಜನ ಸಂಖ್ಯೆ ಇರುವ ಹಳ್ಳಿಗಳಿಗೆ ಅನ್ವಯಿಸುವಂತೆ ಇರುವುದನ್ನು ದಯಮಾಡಿ ನಮ್ಮ ಮಲೆನಾಡು ಭಾಗಕ್ಕೆ ಅನ್ವಯಿಸದಂತೆ ಮಾಡಿ ಆ ಒಂದು ಪ್ರೋಗ್ರಾಂನ್ನು ನಮ್ಮ ಮಲೆನಾಡಿನ ಅಭಿವೃದ್ಧಿಗೆ ಕೊಡ

ಬೇಕೆಂದು ಹೇಳುತ್ತೇನೆ. ಕಾರಣವಾದರೂ ಇಷ್ಟೆ. ನಮ್ಮ ಮಲೆನಾಡಿನಲ್ಲಿ ಸಾಮಾನ್ಯವಾಗಿ ೧,೫೦೦ ಜನಸಂಖ್ಯೆ ಇರುವುದು ಸಾಧ್ಯವಿಲ್ಲ. ಬಹಳ ಚಿಕ್ಕ ಚಿಕ್ಕ ಗ್ರಾಮಗಳು ಇರುತ್ತವೆ. ಅಲ್ಲಿ ಅಷ್ಟು ಜನ ಸಂಖ್ಯೆ ಇರಲಿಕ್ಕೆ ಸಾಧ್ಯವಿಲ್ಲ. ಇನ್ನು ಎಂ.ಪಿ.ಸಿ.ಯುವರು ಏನು ನಮ್ಮ ಜಿಲ್ಲೆಯಲ್ಲಿ ಜಲ ವಿದ್ಯುತ್ ಯೋಜನೆಯನ್ನು ತೆಗೆದುಕೊಂಡಿದ್ದಾರೆ. ಅವರು ರಸ್ತೆಗಳನ್ನು ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಅದರಲ್ಲಿ ಚಕ್ರಾ ಪ್ರಾಜೆಕ್ಟ್‌ಗೆ ಸಾಕಷ್ಟು ಮುಳಗಡೆ ಆಗುವುದರಿಂದ ಅವರು ರಸ್ತೆಗಳನ್ನು ಮಾಡುತ್ತಾ ಇಲ್ಲ. ಇರುವುದು ಇರಲಿಕ್ಕೆ ಆದರಿಂದ ಜನರಿಗೆ ತುಂಬಾ ತೊಂದರೆಯಾಗುತ್ತಿದೆ. ಇನ್ನು ವರಾಹಿ ಯೋಜನೆಯ ಕೆಳಗೆ ಕೂಡ ಇನ್ನು ಸರ್ವೆ ಮಾಡಿಲ್ಲ. ಆದ್ದರಿಂದ ಇದೆಲ್ಲವನ್ನು ತಾವು ಗಮನಕ್ಕೆ ತೆಗೆದುಕೊಂಡು ಆದಷ್ಟು ಜಾಗ್ರತೆ ಮಂಜೂರು ಮಾಡಿಸಿಕೊಡಬೇಕು. ಇನ್ನು ಎಂ.ಪಿ.ಸಿ. ಯುವರಿಂದ ರಸ್ತೆಗಳನ್ನು ಬೇಗ ಮಾಡಿಸುವಂತೆ ವ್ಯವಸ್ಥೆಯನ್ನು ಮಾಡಬೇಕು ನಮ್ಮ ಜಿಲ್ಲೆಯಲ್ಲಿ ನಾಷನಲ್ ಹೈವೇ ಯಾವುದೂ ಇಲ್ಲ ಆದ್ದರಿಂದ ಕುಂದಾಪುರಕ್ಕೆ ನಮ್ಮ ಆಗುಂಬೆ ಶೀರನಹಳ್ಳಿ ಘಾಟ್‌ನಲ್ಲಿ ಒಂದು ಸ್ಟೀಪ್ ರೋಡು ಇರುವುದರಿಂದ ಅದು ಬಹಳ ಸುತ್ತು ಆಗುವುದರಿಂದ ಒಂದು ನ್ಯಾಷನಲ್ ಹೈವೇಯನ್ನು ಹುಲಿಕಲ್ ಮಾರ್ಗವಾಗಿ ತುಮಕೂರು ನ್ಯಾಷನಲ್ ಹೈವೇ ಏನು ಇದೆ ಲಿಂಕ್‌ಮಾಡಿ ಕಳುಹಿಸಿದರೆ ಆ ನ್ಯಾಷನಲ್ ರಸ್ತೆಯಿಂದ ನಮಗೆ ಅನುಕೂಲವಾಗುತ್ತದೆ ಅದನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದು ವಯಾ ಶಿವಮೊಗ್ಗಾ ತುಮಕೂರಿನಿಂದ ಮುಂದಕ್ಕೆ ಹೋಗುವಂತೆ ವ್ಯವಸ್ಥೆಯಾಗಬೇಕು. ಇಷ್ಟು ಹೇಳಿ ಇನ್ನು ಪಿ.ಹೆಚ್.ಇ. ಬಗ್ಗೆ ಹೇಳುವುದಾದರೆ ಅವರು ಒಂದು ಕೊಳವೆ ಬಾವಿಗಳ ಯೋಜನೆಯನ್ನು ಇಟ್ಟುಕೊಂಡಿದ್ದಾರೆ ಅದು ಯಾರ ಸಲಹೆ ಮೇಲೆ ಅಥವಾ ನಿರ್ದೇಶನದ ಮೇಲೆ ಮಾಡುತ್ತಾರೆಂದು ಗೊತ್ತಾಗುತ್ತಿಲ್ಲ. ಜನರಿಗೆ ಯಾವ ಕೊಳವೆ ಭಾವಿಯನ್ನು ಎಲ್ಲಿ ತೆಗೆಯಬೇಕು ಅಲ್ಲಿ ಅವರು ತೆಗೆಯುತ್ತಿಲ್ಲ. ಎಲ್ಲಿ ಓಪನ್ ವೆಲ್ ಇದೆ ಅಲ್ಲೇ ಕೊಳವೆ ಬಾವಿಯನ್ನು ತೆಗೆಯುತ್ತಾರೆ ಇದರಿಂದ ಏನು ಉಪಯೋಗವಾಗುವುದಿಲ್ಲ. ಇನ್ನು ಅವರ ವಾಹನಗಳು ಎಲ್ಲಿ ಸರಾಗವಾಗಿ ಹೋಗುತ್ತವೆ ಅಲ್ಲಿಯೇ ರೋಡುಗಳಲ್ಲಿ ಯಾವುದೇ ಅಡ್ಡಿ ಇರಲಿ ಅಲ್ಲಿ ತೆಗೆದುಬಿಡುತ್ತಾರೆ ಒಂದೊಂದು ಕೊಳವೆ ಬಾವಿಗಳನ್ನು ಅರ್ಧ ಮೈಲಿಗೆ ದೂರದಲ್ಲಿಯಾದರೂ ಮಾಡುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಕೆಲವು ಕಂಪ್ಲೈಂಟ್ಸ್ ಈ ಕೊಳವೆ ಬಾವಿಗಳ ವಿಷಯದಲ್ಲಿದೆ. ಅದು ಏನೇದರೆ ಹ್ಯಾಂಡ್ ಪಂಪ್ ಏನು ಇರುತ್ತವೆ ಅವು ಸರಿಯಾಗಿ ಕೆಲಸ ಮಾಡುತ್ತಿಲ್ಲಾ ಜೊತೆಗೆ ನೀರು ಕೂಡ ಕೆಂಪು ಬಣ್ಣದಲ್ಲಿ ಬರುತ್ತದೆಂದು ಇನ್ನು ಕೆಲವು ಬಾವಿಗಳಲ್ಲಿ ಹುಳುಗಳು ಬರುತ್ತಾ ಇವೆಯೆಂದು. ಇದು ಪೈಪಿನ ದೋಶವೋ ಅಥವಾ ಏನು ಎಂಬುದನ್ನು ಮನಗಂಡು ಈ ಕೊಳವೆ ಬಾವಿಗಳನ್ನು ಹಾಕುವಾಗ ಬಿಡಿಓಗಳ ಸಲಹೆಯನ್ನು ಕೇಳಿ ಇದನ್ನು ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI B. B. SAYANAK (Belgaum).—Mr. Speaker, Sir, I rise to to oppose this Demands moved by the P.W.D. Minister. He is asking for Rs. 83 crores for his Department.

According to me, the Public Works Minister Sri Bangarappa is one-fourth Minister of P.W.D. because the P-W.D. has been bifurcated into two departments viz. the Department of Public Works and Department of Irrigation. In this P.W.D. Sri Bangarappa is dealing with Highways, Buildings, Roads and Bridges. That means, he is one-fourth Minister of P.W.D.

Regarding National Highways, in Belgaum there are two National Highways viz. National Highway No. 4 and National Highway No. 4A The Central Government has constructed a bridge over Ghataprabha. The Karnataka Government is the agent and they are getting 10% for doing supervisory work. They are claiming that the bridge has been completed and that there has been traffic for three

months over it. There was a defect in the bridge and traffic was diverted. In view of this, how has the department stated like this on page 15 of their Annual Report :

> "During the year under review, the bridge across Ghataprabha on National Highway No. 4 near Belgaum including the approaches, has been completed and traffic allowed on the new bridge."

This is totally incorrect statement. I must say that the officer concerned must be sacked for this.

Regarding National Highway No. 4A from Belgaum to Khanapur, for over 10 years this has been the worst road. Though there is traffic from Belgaum to Goa, no care is taken by the P.W.D. There is a bridge across the railway near Khanapur. This is a very dangerous bridge. Every week there are one or two accidents here. Government is not caring for reconstructing this bridge. So, I request that this must be attended to immediately.

This Government has taken over the T.D.B. roads. They have followed some criteria in taking over these roads. The criteria are (*a*) roads connecting the State Highways, (*b*) roads having heavy traffic, and (*c*) roads connecting either a rail head, a market or an existing road. These criteria are not followed in my area. There are some roads in my area which are not taken over by the State viz. the Poona-Bangalore Road to Kadoli, the Poona-Bangalore Road to Mathivade which is 2 miles away and the Poona-Bangalore Road to Sulgaon which is 4 miles away. So, where is the Government following these criteria ? They have totally failed in this respect.

Regarding repair works, I think most of the rural T.D.B. roads. and even national roads are not repaired. Government is only saying that we are going to get some amount for maintenance and repairs. They have totally neglected all these roads.

There is a fund called the Karnataka Roads and Bridges Fund. This is the cess collected from agriculturists by the Agriculture Market Committees for the development of roads. In Belgaum the A.P.M.C. has collected Rs. 14 lakhs but the roads close to the A.P.M.C. are not developed yet and the Government is doing injustice to this area.

There are so many buildings under the P.W.D. but they are in a dilapidated condition. They are not at all repaired and the buildings which they have constructed in the new extension are not properly constructed. There are defects in the buildings. I do not know how the P.W.D. are constructing such types of buildings which are given to Government servants. They are getting this work done through

contractors. The contractors are not paid the amounts due to them even after completing their work. They must go thousand times to the offices of Executive Engineers, Assistant Engineers and Junior Engineers and then only they get their dues. This must be stopped.

Corruption is rampant in this department. Some people call this department Public Waste Department. We see that even Overseers have constructed big bungalows in our area. The Executive Engineers have constructed palatial buildings. An enquiry must be started into the construction of the houses by the Executive Engineers down to the Overseers and Government must put a stop to this corruption. We are talking so much about corruption and about eradicating it. If only they put an end to this corruption our country will be a prosperous one. Now they are also indulging in blackmarket in cement which they are getting for Government work. This must be stopped immediately. My hon. friend Sri C. M. Arumugham referred about the gangmen working for 15 to 20 years in the department, getting low salary. They are working on daily wages of Rs. 3 to 4. Their services must be regularised. Likewise there are also work charged establishmeet. Those people are working for the last 15 to 20 years and their services must be regularised. There are carpenters and bricklayers and they have put in 10 to 15 years service. Their services also must be regularised. You are saying that this Government is for the weaker sections and backward classes. If you regularise the services of these people, then I should say that this Government is done some good work for the downtrodden and backward classes.

With these words I conclude. Thank you.

† ಶ್ರೀ ಭೀಮಣ್ಣ ಖಂಡ್ರೆ (ಬಾಲ್ಕಿ).—ಮಾನ್ಯ ಅಧ್ಯಕ್ಷರೇ, ೧ನೇ ನವಂಬರ್ ೧೯೫೬ರಲ್ಲಿ ಭಾಷಾವಾರು ವಿಭಜನೆಯಾದ ಮೇಲೆ ಅಕ್ಕಪಕ್ಕದ ರಾಜ್ಯಗಳಾದ ಕೆಲವು ಭಾಗಗಳು ಕರ್ನಾಟಕದಲ್ಲಿ ಸೇರಿದವು. ನಾವುಗಳು ಯಾವ ದುರ್ದೈವದಿಂದ ಸೇರಿದ್ದೇವೆಯೋ ಎಂದು ನನಗನಿಸುತ್ತದೆ. ಕಾರಣ ಕಳೆದ ೨೨ ವರ್ಷಗಳಲ್ಲಿ ನಮ್ಮ ಭಾಗದಲ್ಲಿ ಯಾವ ಕೆಲಸಗಳೂ ಕೂಡ ಆಗಿಲ್ಲ. ಇಲ್ಲಿಯೇ ಅಂತ ಅಲ್ಲ; ಹೈದರಬಾದ್ ಭಾಗದಲ್ಲಿ ಮೂರು ಪ್ರದೇಶಗಳು; ಅಂಧ್ರ, ಮಹರಾಷ್ಟ್ರದಿಂದ ಕೆಲವು ಭಾಗಗಳು ಸೇರಿದವು. ಆಂಧ್ರದಲ್ಲಿ ಸ್ವಲ್ಪ ದಿವಸದಲ್ಲಿಯೇ ಆಂಧ್ರದ ಜನರು ದೌರ್ಜನ್ಯವನ್ನು ನೋಡಲಾರದೆ, ತೆಲಾಂಗಾಣ ಪ್ರದೇಶಕ್ಕಾಗಿ ಸ್ಟ್ರಗಲ್ ಶುರು ಮಾಡಿದರು. ಸ್ಟ್ರಗಲ್‌ನಲ್ಲಿ ಎಷ್ಟೋ ಜನ ಸತ್ತು ಹೋದರೊ, ಎಷ್ಟೋ ಜನ ಜೈಲಿಗೆ ಹೋದರು. ಕಡೆಗೆ ಸೆಂಟ್ರಲ್ ಗೌರ್ನವೆಂಟ್‌ನವರು ಒಂದು ಅಥಾರಿಟಿ ಮಾಡುವ ಬಗ್ಗೆ ಒಂದು ಒಪ್ಪಂದಕ್ಕೆ ಬಂದರು. ಇವತ್ತು ಅವರಿಗೆ ತೆಲಾಂಗಣ ರೀಜನಲ್ ಡವಲಪ್‌ಮೆಂಟ್ ಬೋರ್ಡ್ ಎಂದು ಮಾಡಿ, ಅದನ್ನು ಅಟಾನಮಸ್ ಬಾಡಿ ಎಂದು ಮಾಡಿ ಅದಕ್ಕೆ ಪೂರ್ಣ ಅಧಿಕಾರವನ್ನು ಕೊಟ್ಟಿದ್ದಾರೆ. ಅದೇ ದಾರಿಯಲ್ಲಿ ಮಹರಾಷ್ಟ್ರ ರೀಜನಲ್ ಡೆವಲಪ್‌ಮೆಂಟ್ ಬೋರ್ಡು ಎಂದು ಮಾಡಿ, ಅದನ್ನು ಅಟಾನಮಸ್ ಬಾಡಿ ಎಂದು ಮಾಡಿ ಅದಕ್ಕೂ ಕರಾರುವಕ್ಕಾದ ಅಧಿಕಾರಗಳನ್ನು ಕೊಟ್ಟು, ಆ ಮೂಲಕ ಕೆಲಸ ಕಾರ್ಯಗಳನ್ನು ಮಾಡಿಸುತ್ತಿದ್ದಾರೆ. ಇಷತ್ತು ನಾನು ನಮ್ಮ ಸರ್ಕಾರಕ್ಕೆ ಕೇಳುತ್ತೇನೆ, ಕಳೆದ ೨೨ ವರ್ಷಗಳಿಂದ ನಮಗೆ ಯಾವ ರೀತಿಯ ಟ್ರೀಟ್‌ಮೆಂಟ್ ಕೊಡುತ್ತಿದ್ದೀರಿ? ಸರ್ಕಾರವೇ ಆಗಲೀ, ಅಧಿಕಾರಿಗಳೇ ಆಗಲೀ ಯಾವುದೇ ರೀತಿಯ ಕೆಲಸಕಾರ್ಯಗಳನ್ನು ಉತ್ತಮ ರೀತಿಯಲ್ಲಿ ನಮ್ಮ ಭಾಗದಲ್ಲಿ ಮಾಡುತ್ತಿಲ್ಲ. ಇವತ್ತು ನಾವು ಕೂಡ ಸ್ಟ್ರಗಲ್ ಮಾಡತಕ್ಕ ಕಾಲ ಬಂದಿದೆ, ಇವತ್ತು ಹೈದರಬಾದ್

ಕರ್ನಾಟಕದ ಜನರೆಲ್ಲರೂ ಕೂಡ ತೀರ್ಮಾನ ಮಾಡಿದ್ದೇವೆ, ನಾವು ಸುಮ್ಮನೆ ಕೂತರೆ ಯಾವ ಕೆಲಸಗಳೂ ಆಗುವುದಿಲ್ಲ, ರೀಜನಲ್ ಡವಲಪ್‌ಮೆಂಟ್ ಬೋರ್ಡಿಗೋಸ್ಕರ ಎಲ್ಲರೂ ಕಲೆತು ಪ್ರಯತ್ನ ಮಾಡೋಣ, ಇದರ ಬಗ್ಗೆ ಪಾರ್ಟಿ ಪಂಗಡಗಳನ್ನು ಮರೆತು ಕೆಲಸ ಮಾಡೋಣ ಎಂದು ತೀರ್ಮಾನ ಮಾಡಿದ್ದೇವೆ. ನಾನು ಸರ್ಕಾರಕ್ಕೆ ಒಂದು ಮಾತು ಹೇಳುತ್ತೇನೆ, ಇಲ್ಲಿನವರೆಗೆ ನಡೆದಿರತಕ್ಕ ಅನ್ಯಾಯವೇ ಸಾಕು. ನಾವು ಕವರ್ಡ್ ಜನ ಏನು ಮಾಡುವುದಿಲ್ಲವೆಂದು ದಯವಿಟ್ಟು ತಿಳಿದುಕೊಳ್ಳಬೇಡಿ. ನಮ್ಮ ಸರ್ಕಾರವು ಕೂಡ ಹೈದರಬಾದ್ ರೀಜನಲ್ ಡವಲಪ್‌ಮೆಂಟ್ ಬೋರ್ಡ್ ಎಂದು ಮಾಡಿ, ಒಂದು ಅಟಾನಮಸ್ ಬಾಡಿ ಮಾಡಿ. ಅದಕ್ಕೆ ಹೆಚ್ಚು ಅಥಾರಿಟಿಕೊಟ್ಟು ಆ ಮೂಲಕ ಹೆಚ್ಚು ಹೆಚ್ಚು ಕೆಲಸ ಕಾರ್ಯಗಳನ್ನು ಮಾಡುವ ವ್ಯವಸ್ಥೆ ಮಾಡಬೇಕೆಂದು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಇವತ್ತಿನ ದಿವಸ ಕಳೆದ ೨೨ ವರ್ಷದಲ್ಲಿ ನಮ್ಮ ಭಾಗದಲ್ಲಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ. ಈ ಡಿಮ್ಯಾಂಡಿನಲ್ಲಿ ಪಬ್ಲಿಕ್ ಹೆಲ್ತ್ ಇಂಜಿನಿಯರ್ ಇದೆ. ಕುಡಿಯುವ ನೀರು ಸರಬರಾಜು ಬಗ್ಗೆ ಎನ್. ಆರ್. ಡಬ್ಲ್ಯು. ಸ್ಕೀಮು ಇದ್ದರೂ ಕೂಡ ಹೈದರಬಾದ್ ಕರ್ನಾಟಕದಲ್ಲಿ ಯಾವ ಕೆಲಸವನ್ನೂ ತೆಗೆದುಕೊಂಡಿರುವುದಿಲ್ಲ. ಹತ್ತು ಸಾರಿ ಬರಗಾಲ ಬಂದಿದೆ, ೭೨–೭೩ ರಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದ್ದು, ಹೋದ ವರ್ಷ ಮತ್ತೆ ಕುಡಿಯುವ ನೀರಿಗೆ ತೊಂದರೆಯಾಗಿ ಅದಕ್ಕಾಗಿ ಸರ್ಕಾರ ದುಡ್ಡು ಖರ್ಚುಮಾಡಿದೆ, ಇಷ್ಟೆಲ್ಲಾ ಅನುಭವ ಸರ್ಕಾರಕ್ಕೆ ಇದ್ದರೂ ಸರಿಯಾದ ವ್ಯವಸ್ಥೆಯನ್ನು ಕುಡಿಯುವ ನೀರಿನ ಬಗ್ಗೆ ಮಾಡಿಲ್ಲ. ಇದಕ್ಕಾಗಿ ಸರ್ಕಾರ ಟ್ಯಾಕ್ಸ್ ಏನು ಹಾಕಬೇಕಾಗಿಲ್ಲ. ನಮ್ಮ ಭಾಗದ ಜಿಲ್ಲೆಗಳಲ್ಲಿ ಕಳೆದ ನಾಲ್ಕು ವರ್ಷದಿಂದ ಎನ್. ಆರ್. ಡಬ್ಲ್ಯು. ಸ್ಕೀಮಿನಲ್ಲಿ ಕೆಲಸ ತೆಗೆದುಕೊಂಡು ಪೂರ್ಣ ಮಾಡಿಲ್ಲ. ಹತ್ತನೇ ಒಂದು ಭಾಗ ಸರ್ಕಾರ ಯಾವ ಕೆಲಸವನ್ನು ಪೂರ್ಣ ಮಾಡಿಲ್ಲ. ನಮ್ಮ ಭಾಗದಲ್ಲಿ ೨೦೦ ಹಳ್ಳಿಗಳಲ್ಲಿ ನೀರು ಇಲ್ಲದೆ ಇದ್ದಾಗ ತಾವು ಆದೇಶ ಮಾಡಿದ್ದರೂ ಆಶ್ವಾಸನೆ ಕೊಟ್ಟಿದ್ದರೂ ಕೂಡ ಅಲ್ಲಿ ಇನ್ನೂ ನೀರಿನ ವ್ಯವಸ್ಥೆ ಮಾಡಿಲ್ಲ. ೫ ಹಾರ್ಸ್‌ಪವರ್ ಇರತಕ್ಕ ನೀರು ಎತ್ತು ಯಂತ್ರ ಮೂರು ವರ್ಷದಿಂದ ಇದೆ, ಅದು ಸರಿಯಾಗಿ ನೀರು ಎತ್ತುವುದಿಲ್ಲ, ಹತ್ತು ಹಾರ್ಸ್ ಪವರ್ ಯಂತ್ರವನ್ನು ಹಾಕಿ ಎಂದರೆ ಅದನ್ನು ಮಾಡಿಲಿಲ್ಲ. ಸಾವಿರಾರು ಬಂಡಿಗಳ ಮೂಲಕ, ಗಾಡಿಗಳ ಮೂಲಕ, ಮೋಟಾರುಗಳ ಮೂಲಕ ನೀರು ಸಪ್ಲೈ ಮಾಡಲಾಯಿತು. ಐದು ಹಾರ್ಸ್ ಪವರ್ ಇರತಕ್ಕ ಯಂತ್ರವನ್ನು ಬದಲಾಯಿಸಿ ಎಂದರೆ ಬದಲಾವಣೆ ಮಾಡಿಲ್ಲ, ಇಂಥ ಯೂಜ್‌ಲೆಸ್ ಇಂಜಿನಿಯರುಗಳು ನಿಮ್ಮ ಇಲಾಖೆಯಲ್ಲಿದ್ದಾರೆ. ಇಡೀ ಹೈದರಬಾದ್ ಕರ್ನಾಟಕದಲ್ಲಿ ಕುಡಿಯುವ ನೀರಿನ ಪ್ರಶ್ನೆ ಇದೆ. ಇವತ್ತು ನಮ್ಮ ಭಾಗದ ಜನರಿಗೆ ಸ್ವಲ್ಪ ಸೌಲಭ್ಯ ಒದಗಿಸುವ ದೃಷ್ಟಿ ನಮ್ಮ ಸರ್ಕಾರಕ್ಕೆ ಬಂದಿಲ್ಲವೆ ಎಂದು ಕೇಳುತ್ತೇನೆ. ಇವತ್ತು ನಮ್ಮ ಭಾಗದ ಜನಗಳನ್ನು ವೀಕ್‌ನೆಸ್ ಎಂದು ತಿಳಿದುಕೊಳ್ಳಬೇಡಿ, ಇವತ್ತು ಅವರು ಜಾಗೃತರಾಗಿದ್ದಾರೆ. ಸರ್ಕಾರ ನಮ್ಮ ಭಾಗದ ಕಡೆ ಗಮನ ಕೊಡಲಿಲ್ಲ ಅಂದರೆ ದೊಡ್ಡ ಕ್ರಾಂತಿ ಆಗುತ್ತದೆ. ಆ ರೀತಿ ದೊಡ್ಡ ಕ್ರಾಂತಿ ಆದರೆ ಅದಕ್ಕೆ ತಾವೇ ಜವಾಬ್ದಾರರಾಗಬೇಕಾಗುತ್ತದೆ.

ಇವತ್ತು ರೋಡುಗಳು ಏನು ಇವೆ. ಇದರ ಗ್ಗೆ ಸರ್ಕಾರ ಖರ್ಚ ಮಾಡಿರತಕ್ಕ ಹಣ, ಇದರ ಬಗ್ಗೆ ಎಷ್ಟು ಅನ್ಯಾಯವಾಗಿದೆ. ಎಂಬುದನ್ನು ಸತ್ತ ಹೆಣಗಳು ಕೂಡ ಇವತ್ತು ತಿಳಿಸುತ್ತವೆ. ಇವತ್ತು ನಾನು ಹೇಳುತ್ತಿದ್ದೇನೆ, ಯಾವ ಯಾವ ಪ್ರಕಾರ ಟ್ರೀಟ್‌ಮೆಂಟ್ ಮಾಡುತ್ತೀರಿ ಎಂಬುದನ್ನು ಹೇಳುತ್ತೇನೆ. ಇವತ್ತು ಮಾರುಕಟ್ಟೆಗಳ ಮೂಲಕ ರೋಡ್ಸ್ ಮತ್ತು ಬ್ರಿಡ್ಜಸ್ ಫಂಡಿಗೆ ಹಣ ಕಲೆಕ್ಟ ಮಾಡಿದ್ದೀರಿ. ಸುಮಾರು ಐದು ಕೋಟಿ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಆಶ್ವಾನನೆ ಕೂಡ ಮಾಡಿದ್ದೀರಿ, ಆ ಹಣದಿಂದ ಮಾರುಕಟ್ಟೆ ಸುತ್ತಮುತ್ತ ಇರತಕ್ಕ ಊರುಗಳ ರಸ್ತೆ ಅಭಿವೃದ್ಧಿ ಮಾಡಲಾಗುವುದು ಆ ಮೂಲಕ ಜನತೆಗೆ ಅನುಕೂಲವಾಗುವುದೆಂದು, ಇವತ್ತು ನಾನು ತಮ್ಮನ್ನು ಕೇಳುತ್ತೇನೆ, ಎಷ್ಟು ಕೋಟಿ ರೂಪಾಯಿಗಳನ್ನು ಈ ರಸ್ತೆಗಳ ಅಭಿವೃದ್ಧಿಗಾಗಿ ಖರ್ಚು ಮಾಡಿದ್ದೀರಿ? ನೀವು ಖರ್ಚು ಮಾಡಿಲ್ಲ, ಏತಕ್ಕೆ ಖರ್ಚು ಮಾಡಿಲ್ಲ? ಎಲ್ಲಿ ವಾಸ್ತವಿಕವಾಗಿ ಹಣದ ಅವಶ್ಯಕತೆ ಇಲ್ಲವೋ ಅಲ್ಲಿ ಹಣ ತೆಗೆದುಕೊಂಡು ಹೋಗಿ ಸುರಿಯುತ್ತಿದ್ದೀರಿ. ಇದು ಅನ್ಯಾಯ ಅಲ್ಲವೆ? ಇದರ ಜವಾಬ್ದಾರಿ ಸರ್ಕಾರಕ್ಕೆ ಇಲ್ಲವೆ? ಈ ಕೆಲಸವನ್ನು ನೀವು ಏತಕ್ಕೆ ಪಾಲನೆ ಮಾಡಲಿಲ್ಲ. ಐದು ಕೋಟಿ ರೂಪಾಯಿಗಳನ್ನು ಯಾವ ಕೆಲಸಕ್ಕೆ ಉಪಯೋಗ ಮಾಡಿದ್ದೀರಿ. ನಾನು ಕೂಡ ಸಕ್ಕರೆ ಕಾರ್ಖಾನೆ ಛೇರ್ಮನ್ ಆಗಿದ್ದೇನೆ. ಮೊನ್ನೆ ಮುಖ್ಯ ಮಂತ್ರಿಗಳು ಹೇಳಿದರು, ಎರಡು ರೂಪಾಯಿ ನೀವು ಕೊಡಿ, ನಾವು ಎರಡು ರೂಪಾಯಿ ಕೊಡುತ್ತೇವೆಂದು. ಸ್ವಾಮಿ, ಎಷ್ಟೋ ಹಣವನ್ನು ಸಕ್ಕರೆ ಕಾರ್ಖಾನೆಯವರು ಈ ರಸ್ತೆಗಳ ದುರಸ್ತಿಗಾಗಿ ಕೊಡುತ್ತಿದ್ದಾರೆ. ಆದರೆ ಸರ್ಕಾರ ಯಾವ ರೀತಿಯ ಕೆಲಸವನ್ನೂ ಮಾಡುತ್ತಿಲ್ಲ. ಇವರ ವರದಿಯಲ್ಲಿ ಒಂದು ಕಡೆ ಹೇಳಿದ್ದಾರೆ.

In order to ensure development of roads in Sugar Factory areas on a planned and continuous basis. Government have raised the purchase tax on sugarcane by Rs. 2 per tonne and the extra revenue realised on this account is utilised for the development of roads in Sugar Factory areas. During 1975-76, about Rs. 60 lakhs were provided for the development of roads in the Sugar Factory areas and during 1976-77, the amount provided was Rs, 65 lakhs. During 1977-78, an amount of Rs. 43.10 lakhs has been provided for these roads. The outlay earmarked during 1978 79 is Rs. 45.00 lakhs. ಈ ರೀತಿ ಇದೆ. ನಮ್ಮ ಸಕ್ಕರಿ ಕಾರ್ಖಾನೆಯವರಿಗೆ ಎಷ್ಟು ಲಾಭ ಬರುತ್ತೆ. ಮಹರಾಷ್ಟ್ರದಲ್ಲಿ ನಾಲ್ಕು ರೂಪಾಯಿ ಐದು ರೂಪಾಯಿ ಇದೆ. ನಮ್ಮಲ್ಲಿ ೧೭ ರೂಪಾಯಿ ಇದೆ. ಎರಡು ರೂಪಾಯಿ ಡೆವಲಪ್ ಮೆಂಟ್ ಚಾರ್ಜಸ್ ಎಂದು ಇಟ್ಟಿದ್ದಾರೆ. ಇವತ್ತು ಇವರ ಮೇಲೆ ೨.೫೦ ಲಕ್ಷ ಇದೆ, ಈ ಪ್ರಕಾರ ಬಂದರೆ ಖರ್ಚು ಏನು ಮಾಡುತ್ತೀರಿ. ೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಇರುವುದರಲ್ಲಿ ೩ ಲಕ್ಷ ರೂಪಾಯಿಗಳಷ್ಟು ಖರ್ಚುಮಾಡಿಲ್ಲವೆಂದು ಹೇಳಿದರೆ ಇದು ಬಹಳ ಅನ್ಯಾಯವೆಂದು ಹೇಳುತ್ತೇನೆ. ರೋಡ್‌ಗಳಿಗಾಗಿ ಕೊಡತಕ್ಕಂಥ ಹಣ ದುರುಪಯೋಗ ಮಾಡಿಕೊಳ್ಳುತ್ತಿದ್ದರೆ. ಆದ್ದರಿಂದ ಅದು ಸದುಪಯೋಗ ಮಾಡುವ ವಿಚಾರ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈವತ್ತು ಮಿನಿಮಮ್ ನೀಡ್ ಪ್ರೋಗ್ರಾಮ್ ಎಂದು ಹೇಳಿ ಏನು ತೆಗೆದುಕೊಳ್ಳುತ್ತಿದ್ದೀರಿ "Under the Minimum Needs Programme, which is in progress during the 5th Five Year Plan, it is proposed to connect 501 villages having a population of more than 1,500 in thickly populated areas and more 1,000 thinkly population areas with all water roads at an estimated cost of about Rs. 13.20 crores." ಬೀದರ್ ಜಿಲ್ಲೆಯ ಒಂದು ತಾಲ್ಲೂಕು ಹೆಡ್‌ಕ್ವಾರ್ಟಸ್‌ನಿಂದ ಮತ್ತೊಂದು ತಾಲ್ಲೋಕ್ ಹೆಡ್ ಕ್ವಾರ್ಟರ್ಸ್ ಸೇರಿ ಹೋಗುವಂಥ ಒಂದು ರೋಡನ್ನೂ ಕೂಡ ಮಾಡಿಲ್ಲ. ಬಳ್ಳಾರಿಯಿಂದ ಬಸವಕಲ್ಯಾಣಕ್ಕೆ ಹೋಗಲು ರೋಡ್ ಮಾಡಿಲ್ಲ. ಸ್ಕೀಮ್ ಮಾತ್ರ ಬಹಳ ದೊಡ್ಡ ಸ್ಕೀಂನ್ನು ಹಾಕಿಕೊಂಡಿರುತ್ತೇವೆಂದು ಹೇಳುತ್ತಿದ್ದೀರಿ. ಇದು ಒಂದು ಸತ್ಯಕ್ಕೆ ದೂರವಾದಂಥ ಮಾತು ಎಂದು ಹೇಳಬಯಸುತ್ತೇನೆ. ಈ ಮನೆಗೆ ಮಿಸ್‌ಗೈಡ್ ಮಾಡಬೇಡಿ ಎಂದು ಹೇಳುತ್ತಾ ಬೀದರ್ ಜಿಲ್ಲೆಯ ಬಗ್ಗೆ ಮಾಡಿದಂಥ ೧೮೦ ಕೋಟಿ ರೂಪಾಯಿನ ಪ್ಲಾನ್ ಯಾವರೀತಿ ಮಾಡಿದ್ದೀರಿ, ಎಷ್ಟರಮಟ್ಟಿಗೆ ಕಾರ್ಯಗತ ಮಾಡಿದ್ದೀರಿ ಎಂದು ಕೇಳುತ್ತೇನೆ. ನಿಮ್ಮ ಪ್ಲಾನ್ ಪುಸ್ತಕದಲ್ಲಿ ಪ್ರಿಂಟ್ ಆಗಿರುತ್ತದೆಯೋ ಹೊರತು ಕಾರ್ಯಗತ ವಾಗುತ್ತಿಲ್ಲ. ಮಹಾರಾಷ್ಟ್ರದಲ್ಲಿ ಬಾರ್ಡರ್ ಏರಿಯಾದಲ್ಲಿರತಕ್ಕಂಥ ೧೩ ಹಳ್ಳಿಗಳಲ್ಲಿ ಒಂದು ಕಡೆ ಇಂದ ಮತ್ತೊಂದು ಕಡೆಗೆ ಹೋಗುವುದಕ್ಕೆ ಆಗುತ್ತಿಲ್ಲ. ಬ್ರಿಡ್ಜ್ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಮಾತ್ರ ಹೇಳುತ್ತಿರುತ್ತೀರಿ ಆದರೆ ಹಣವನ್ನು ಮಾತ್ರ ಒದಗಿಸಿಲ್ಲ. ಸರ್ಕಾರದವರು ಯಾವುದೇ ಪ್ರೋಗ್ರಾಮ್ ಹಾಕಿಕೊಂಡರೂ ಅದನ್ನು ಪೂರ್ಣವಾಗಿ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ವಿ. ಭಾವಿ (ಮುಂಡರಗಿ).—ಸನ್ಮಾನ್ಯ ಸಭಾಧ್ಯಕ್ಷರೇ ಈವತ್ತಿನ ದಿವಸ ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ನಾನು ಕೆಲವು ಅಂಶಗಳನ್ನು ಹೇಳಲು ಇಚ್ಛೆಪಡುತ್ತೇನೆ. ನಮ್ಮ ಲೋಕೋಪಯೋಗಿ ಸಚಿವರ ಬಗ್ಗೆ ಹೇಳಬೇಕು ಎಂದರೆ ಅವರು ನಿಜವಾಗಿಯೂ ಒಬ್ಬ ಉತ್ಸಾಹಿ ತರುಣರಾಗಿರುತ್ತಾರೆ, ಅಲ್ಲದೆ ಚತರರು, ನಿಪುಣರಾಗಿ ಈ ಖಾತೆಯ ಅನುಭವವನ್ನು ಪಡೆದಿರತಕ್ಕಂಥವರು ಆಗಿರುತ್ತಾರೆ. ನಿಜವಾಗಿಯೂ ಇವರ ಕೈಯಲ್ಲಿ ಈ ಖಾತೆಯನ್ನು ಕೊಟ್ಟಿರುವುದರಿಂದ ಒಂದು ಸಮರ್ಥ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಾರೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ ಎನ್ನುವ ಆಶಯನ್ನು ಇಟ್ಟುಕೊಂಡು ಕೆಲವೊಂದು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಮೊದಲನೆಯದಾಗಿ ರಸ್ತೆಗಳ ವಿಷಯವನ್ನು ಹೇಳಬೇಕಾದರೆ ಪೂರ್ವಕಾಲದಲ್ಲಿ ತಾಲ್ಲೂಕು ಬೋರ್ಡ್‌ಗಳು, ಮತ್ತು ಪಂಚಾಯತಿ ರಾಜ್ಯಗಳು ಕೆಲವೊಂದು ರಸ್ತೆಗಳನ್ನು ತಮ್ಮ ಅಧೀನದಲ್ಲಿ ಇಟ್ಟುಕೊಂಡಿದ್ದರು. ಈ ತಾಲ್ಲೂಕು ಬೋರ್ಡ್ ಮತ್ತು ಪಂಚಾಯತಿಗಳ ವತಿಯಲಿರತಕ್ಕಂಥ ರಸ್ತೆ,

ಬ್ರೀಡ್ಜಸ್ ಕೆಲಸಕಾರ್ಯಗಳು ನಿರ್ವಹಿಸಲು ಕಷ್ಟವಾಗುತ್ತದೆಂದು ಸರ್ಕಾರದವರು ಅಂದರೆ ಪಿ.ಡಬ್ಲ್ಯೂ. ಡಿ. ಇಲಾಖೆಯವರು ತೆಗೆದುಕೊಂಡದ್ದು ನಿಜವಾಗಿಯೂ ಸ್ವಾಗತಾರ್ಹವಾದಂಥ ವಿಚಾರವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ನನ್ನ ಕನ್‌ಸ್ಟಿಯನ್ಸಿಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ ಕರ್ನಾಟಕ ರಾಜ್ಯದಲ್ಲಿ ದಾರವಾಡ ಜಿಲ್ಲೆಯೂ ಸದಾಕಾಲವೂ ಬರಗಾಲ ಪೀಡಿತ ಪ್ರದೇಶವಾಗಿರುತ್ತದೆ. ಇದು ಬಹಳ ಹಿಂದುಳಿದ ಪ್ರದೇಶ ವೆಂದರೆ ತಪ್ಪಾಗಲಾರದು. ನಿಜವಾಗಿಯೂ ನಮ್ಮ ತಾಲ್ಲೂಕು ಕಡೆ ಮಾನ್ಯ ಸಚಿವರುಗಳು ಪ್ರವಾಸ ವನ್ನು ಕೈಗೊಂಡರೆ ಪರಿಸ್ಥಿತಿ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದರೆ ನಮ್ಮ ಕಡೆ ಯಾರು ಪ್ರವಾಸ ಕೈಗೊಳ್ಳುತ್ತಿಲ್ಲ. ನಮ್ಮ ತಾಲ್ಲೂಕು ರಸ್ತೆಗಳು ಯಾವ ರೀತಿ ಇರುತ್ತವೆಂದರೆ ಯಾರಾ ದರೂ ಅಜೀರ್ಣವಾದರೂ ಪ್ರಯಾಣ ಮಾಡಿದರೆ ಅವರಿಗೆ ಜೀರ್ಣವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ನಮ್ಮ ತಾಲ್ಲೂಕು ಯಾವಾಗಲೂ ಬರಗಾಲ ಪೀಡಿತ ಪ್ರದೇಶವಾಗಿರುವುದರಿಂದ ಜನರಿಗೆ ಅಜೀರ್ಣ ವಾಗತಕ್ಕಂಥ ಪ್ರಮೇಯವೇ ಇರುವುದಿಲ್ಲ. ಮುಂಡರಗಿ ತಾಲ್ಲೂಕ್ ೩೦ ಕಿಲೋಮೀಟರ್ಸ್‌ಗಳಷ್ಟು ನಾನ್ ಪಿ.ಡಬ್ಲ್ಯು.ಡಿ. ರಸ್ತೆಯನ್ನು ಪಿಡಬ್ಲ್ಯುಡಿ ಯವರು ತೆಗೆದುಕೊಂಡು ಮಾಡಬೇಕೆಂದು ಒಂದು ಪ್ರಪೋಸಲ್ ಕಳುಹಿಸಿಕೊಟ್ಟಿರುತ್ತೇವೆ. ಈ ಕೆಲಸವನ್ನು ತೆಗೆದುಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳ ಕೆಲಸಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಗದಗ್ ತಾಲ್ಲೂಕು ಚಿಂಚೋಳಿ ಕಲವಾಡೆ ರಸ್ತೆ ಏನು ಇರುತ್ತದೆ. ಅದು ಕೇವಲ ೭ ಕಿಲೋಮೀಟರ್ ಇರುತ್ತದೆ ಈ ರಸ್ತೆಯು ಕೆಲಸವಾಗಬೇಕು. ಇದನ್ನು ಮಾಡಿದರೆ ಹುಬ್ಬಳ್ಳಿಗೆ ಹೋಗಲು ೩೦ ಮೈಲಿಗಳಷ್ಟು ಸಮೀಪವಾಗುತ್ತದೆ. ಇದರ ಬಗ್ಗೆ ಎಸ್ಟಿಮೇಟ್ ಮಾಡಿ ರೆಫರೆನ್ಸ್ ಕಳುಹಿಸಿಕೊಟ್ಟಿರುತ್ತಾರೆ. ದಯುವಿಟ್ಟು ಇದನ್ನು ಗಮನದಲ್ಲಿಟ್ಟು ಕೊಳ್ಳಬೇಕೆಂದು ಹೇಳುತ್ತೇನೆ. ಹಿಂದೆ ಲೋಕೋಪಯೋಗಿ ಮಂತ್ರಿಗಳಾಗಿದ್ದ ಶ್ರೀಮಾನ್ ವೀರೇಂದ್ರಪಾಟೀಲರವರ ಕಾಲದಲ್ಲಿ ಮುಂಡರಗಿ ತಾಲ್ಲೂಕು ಸಿಂಗಟಾಲೂರು ಬ್ರಿಡ್ಜ್ ೨೫ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಇದ್ದುದ್ದು ಈವಾಗ ೧.೫ ಕೋಟಿ ಆಗುತ್ತದೆಂದು ಲೋಕೋಪಯೋಗಿ ಇಲಾಖೆಯುವರು ಎಸ್ಟಿಮೇಟ್ ಮಾಡಿರುತ್ತಾರೆ. ಇದನ್ನು ಅಂದಿನಿಂದಲೂ ಮಾಡುತ್ತೇವೆ, ನೋಡು ತ್ತೇವೆ, ಪರಿಶೀಲಿಸುತ್ತೇವೆಂದು ಹೇಳಿಕೊಂಡು ಬಂದಿರುತ್ತಾರೆ. ತಾವು ತರುಣರು ಲೋಕೋಪಯೋಗಿ ಮಂತ್ರಿಗಳಾಗಿ ಬಂದಿರುತ್ತೀರಿ ಈ ಬ್ರಿಡ್ಜ್ ಕೆಲಸವಾದರೆ ಬಳ್ಳಾರಿ ಜಿಲ್ಲೆ, ಬಿಜಾಪುರ, ದಾರವಾಡ, ದಾವಣಗೆರೆ ಜಿಲ್ಲೆಗಳಿಗೆ ಒಂದು ಸಮೀಪವಾದಂಥ ಬ್ರೀಡ್ಜ್ ಆಗುತ್ತದೆ. ಇದರ ಬಗ್ಗೆ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ನಂ. ೭ ಸಬ್‌ಡಿವಿಜನ್ ಮುಂಡರಗಿ ಯುವರು ಈ ರೀತಿಯಾಗಿ ಒಂದು ನೋಟನ್ನು ಕೂಡ ಕಳುಹಿಸಿ ಕೊಟ್ಟಿರುತ್ತಾರೆ. ಅದು ಹೀಗಿದೆ:

"Short Notes on the construction of bridge near Shingatalur across Tungabhadra river in Mundargi taluka.

1) Probable cost of the bridge-1.5 Crores.

2) General.— The bridge now proposed to be constructed near Singatalur of Mundargi Taluka shall be south west of Mundargi Town. The bridge will be 11 miles from Mundargi and shall be about 2 to 3 furlongs from village Singatalur. The bridge proposed will be between the villages Singatalur and Navali of Dharwar District and Bellary District respectively.

3) Utility of the bridge.— The proposed bridge is a long cherished dream of the people of this part of Dharwar District and some protion of southern part of Bijapur District. The villages and Township whose growth from business points of view and others have been held up for want of communication shall consider this bridge a boon.

Davangere, a business place which is as much important as Hubli perhaps even more in some aspects shall be nearer to places like Mundargi, Bagalkot, Badami, Ron, Gadag, etc.

In addition to the above communication with an important place like Davangere, these interior communicat ion lacking, shall have easy access to the other business places like Harapanahalli, Huvin Hadagali, etc. Moreover places like Bangalore, (hitradurga a .d others on National Highway No. 4 shall be nearer. Hence the bridge is conisd-ered a key to the future development of these interior portions which lacking in all-round developmental activities due to want of mainly this bridge. The people of this part are constantly demanding this bridge since more than 20 years.''

೨೦ ವರ್ಷದಿಂದ ಇರತಕ್ಕಂಥಾ ಕನಸನ್ನು ನನಸಾಗಿ ಇನ್ನೂ ಮಾಡಿಕೊಡುತ್ತಾ ಇಲ್ಲ. ಅವನು ಮಾಡಿಕೊಡಿ ಎಂದು ಕೇಳುತ್ತೇನೆ. ಇದನ್ನು ಮಾಡಿಕೊಟ್ಟರೆ ಬೆಂಗಳೂರಿಗೆ ಬರಬೇಕಾದರೆ ೮೦ ಮೈಲಿ ಸೇವೆ ಮಾಡಬಹುದು. ಇದನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಗದಗಿನ ಲಕ್ಕುಂದಿ ಅನ್ನುವ ಸ್ಥಳ ಒಂದು ಐತಿಹಾಸಿಕ ಸ್ಥಳವಾಗಿದೆ. ಆದುದರಿಂದ ಅಲ್ಲೊಂದು ಟ್ರಾವಲರ್ಸ್ ಬಂಗಲೆಯನ್ನು ಓಪನ್ ಮಾಡಬೇಕು ಎಂದು ಕೇಳಿ ಕೊಳ್ಳುತ್ತೇನೆ.

ಇನ್ನೊಂದು ವಿಷಯ ಪಿ.ಹೆಚ್.ಇ. ಬಗ್ಗೆ ಹೇಳುತ್ತೇನೆ. ನನ್ನ ತಾಲ್ಲೂಕಿನದ ಮುಂದರ್ಗಿ ತಾಲ್ಲೂಕಿನ ಹಳ್ಳಿಕೇರಿ ಅನ್ನುವ ಗ್ರಾಮದಲ್ಲಿ ಆ ಜನರಿಗೆ ಕುಡಿಯುವ ನೀರು ಇಲ್ಲ. ಆ ಜನರು ಕುಡಿಯಲು ನೀರು ಇಲ್ಲದೆ ಬಹಳ ತೊಂದರೆ ಪಡುತ್ತಾ ಇದ್ದಾರೆ. ಈ ವಿಚಾರವನ್ನು ಮಾನ್ಯ ಸಚಿವರು ಗಮನದಲ್ಲಿಟ್ಟು ಕೊಂಡು ಆ ಹಳ್ಳೀಕೇರಿಯ ಜನರಿಗೆ ಕುಡಿಯುವ ನೀರಿನ ಒಂದು ವ್ಯವಸ್ಥೆ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈ ಲೋಕೋಪಯೋಗಿ ಅಧಿಕಾರಿಗಳ ಒಂದು ವರ್ತನೆ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಈ ಒಂದು ಇನ್ಸಿಡೆಂಟ್ ಬಗ್ಗೆ ೮ ದಿವಸದ ಹಿಂದೆ ನಡೆದುದ್ದು. ನಮ್ಮ ಊರಿನ ಒಬ್ಬ ಹುಡುಗ ಈ ಲೋಕೋಪಯೋಗಿ ಇಲಾಖೆಯಲ್ಲಿ ಸೆಕೆಂಡ್ ಡಿವಿಜನ್ ಕ್ಲರ್ಕ್ ಆಗಿದ್ದಾನೆ. ಆತನಿಗೆ ಟ್ರಾನ್ಸ್‌ಫರ್ ಆಯಿತು. ನನ್ನ ಮಟ್ಟಿಗೆ ಹೇಳುವುದಾದರೆ ಆತನಿಗಿಂತ ಕಡು ಬಡವ ಯಾರೂ ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಆತನು ನಾನು ಎರಡು ಕಡೆ ಫ್ಯಾಮಿಲಿ ಮೇಂಟೇನ್ ಮಾಡಬೇಕಾಗುತ್ತದೆ, ನನಗೆ ತುಂಬಾ ಕಷ್ಟ ಇದೆ, ನನಗೆ ಇಲ್ಲೇ ಎಲ್ಲಾದರೂ ವರ್ಗ ಮಾಡಿಸಿಕೊಡಿ ಎಂದು ಬಂದು ಕೇಳಿಕೊಂಡ. ಆತನಿಗೆ ತುಂಬಾ ಕಷ್ಟವೂ ಸಹ ಇದ್ದಿತು. ನಾನು ಅವನು ಕೊಟ್ಟ ಲೆಟರ್ ಅನ್ನು ತೆಗೆದುಕೊಂಡು ಚೀಫ್ ಇಂಜನೀಯರ್ ಹತ್ತಿರ ಹೋದೆ. ಅವರು ಡೆಪ್ಯೂಟಿ ಚೀಫ್ ಇಂಜನಿಯರ್‌ಗೆ ಎಂಡಾರ್ಸ್ ಮಾಡಿಕೊಟ್ಟರು ಅವರು ಏನಂತ ಬರೆದಿದ್ದಾರೆ ಎಂದರೆ ಅಲ್ಲಿ ಎಲ್ಲಾದರೂ ಜಾಗ ಇದ್ದರೆ ಅಲ್ಲಿಗೆ ಪೋಸ್ಟ್ ಮಾಡಿಕೊಡಿ ಎಂದು ಬರೆದರು. ನಾನು ಡೆಪ್ಯೂಟಿ ಚೀಫ್ ಇಂಜನೀಯರ್ ಹತ್ತಿರ ಹೋದೆ. ಅವರು ೧೦ ನಿಮಿಷವಾದರೂ ಕೂಡ ನಮಗೆ ಅಪಾಯಿಂಟ್‌ಮೆಂಟ್ ಕೊಡಲಿಲ್ಲಾ. ನಾವು ೩ ಜನ ಲೆಜಿಸ್ಲೇಚರ್ಸ್ ಹೋಗಿದ್ದೆವು. ಆಮೇಲೆ ಹೋದೆವು. ಅವರು ಏನು ಮಾಡುತ್ತಾ ಇದ್ದರು ಎಂದರೆ ಅಲ್ಲಿ ೪ ಜನರೊಂದಿಗೆ ಹರಟೆ ಹೊಡೆಯುತ್ತಾ ಇದ್ದರು ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ಏತಕ್ಕೆ ತರುತ್ತಿದ್ದೇನೆ ಎಂದರೆ ಲೆಜಿಸ್ಲೇಚರ್ಸ್ ಎಂದರೆ ಎಷ್ಟರಮಟ್ಟಿಗೆ ತಾತ್ಸಾರ ಎನ್ನುವುದು ಗೊತ್ತಾಗುತ್ತದೆ. ಅಲ್ಲದೆ ಅವರು ಏನು ಹೇಳಿದರು ಎಂದರೆ ನೀವು ಈ ರೀತಿಯಾಗಿ ಒತ್ತಾಯ ತರಬೇಡಿ ಎಂದು ಹೇಳಿದರು ಅವರು ನಮ್ಮನ್ನು ನೋಡಿ ಅಂದರೆ ಲೆಜಿಸ್ಲೇಚರ್ ಅಂತ ಗೊತ್ತಿದ್ದರೂ ಸಹ ಯಾವರೀತಿ ನಡೆದುಕೊಂಡಿದ್ದಾರೆ ಅನ್ನುವುದಕ್ಕೆ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದು ಏನೆಂದರೆ ಮುಂದೆ ಲೆಜಿಸ್ಲೇಚರ್ಸ್ ಯಾರಾದರೂ ಹೋದರೆ ಅಧಿಕಾರಿಗಳು ದುರ್ವರ್ತನೆಯಿಂದ ನಡೆದುಕೊಳ್ಳದೆ ಒಳ್ಳೆಯ ಯೋಗ್ಯ ರೀತಿಯಲ್ಲಿ ನಡೆದುಕೊಳ್ಳಬೇಕೆನ್ನುವ ಒಂದು ಆದೇಶ ಕೊಡಬೇಕು ಎಂದು ಹೇಳುತ್ತೇನೆ. ಮುಂದೇನಾದರೂ ಈರೀತಿಯಾಗಿ ಅಧಿಕಾರಿಗಳು ವರ್ತಿಸಿ

ಕೊಂಡಲ್ಲಿ ಯೋಗ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈ ವಿಷಯವನ್ನು ಮಾನ್ಯ ಲೋಕೋಪಯೋಗಿ ಮಂತ್ರಿಗಳು ಗಮನದಲ್ಲಿಟ್ಟು ಕೊಳ್ಳಬೇಕೆಂದು ಮತ್ತೊಮ್ಮೆ ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಮಂಡಿಸಿರತಕ್ಕಂಥಾ ಬೇಡಿಕೆಯನ್ನು ಬೆಂಬಲಿಸುತ್ತಾ ನಾನು ಈ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಸ್ವಾಮಿ, ಈ ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆ ರಿಪೇರಿ ಮಾಡುವ ಗ್ಯಾಂಗ್‌ಮನ್ಸ್ ಕೆಲಸಗಾರರು ಏನು ಇದ್ದಾರೆ ಅವರು ೨೦ ವರ್ಷದಿಂದಲೂ ಕೆಲಸ ಮಾಡುತ್ತಾ ಇದ್ದರೂ ಸಹ ಅವರನ್ನು ಖಾಯಂ ಮಾಡಿಲ್ಲಾ, ೧೮೦ ದಿವಸ ಅವರು ಕೆಲಸ ಮಾಡಿದ್ದರೂ ಕೂಡ ಅವರನ್ನು ಖಾಯಂ ಮಾಡಬೇಕು ಎಂದು ಸರ್ಕಾರ ಆದೇಶ ನೀಡಿದ್ದರೂ ಸಹ ಇನ್ನೂ ಖಾಯಂ ಮಾಡಿಲ್ಲಾ. ಈ ಬಗ್ಗೆ ಅವರುಗಳನ್ನು ಖಾಯಂ ಮಾಡುವ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಇನ್ನೊಂದು ವಿಷಯ ಹೇಳುವುದಾದರೆ ಅವರು ೨೦ ವರ್ಷದಿಂದ ಕೆಲಸ ಮಾಡುತ್ತಿದ್ದರೂ ಕೂಡ ಅವರಿಗೆ ೩-೪ ರೂಪಾಯಿ ಕೂಲಿಯನ್ನೇ ಕೊಡುತ್ತಿರುವುದು ಯಾವ ನ್ಯಾಯ ಹೇಳಿ. ಆ ಕೂಲಿಗಾರರಿಗೆ ಒಂದು ದಿವಸ ಇದೆ ಒಂದು ದಿವಸ ಇಲ್ಲ ಅಂತ ಏನೂ ಇಲ್ಲ. ಅವರು ಸತತವಾಗಿ ಯಾವಾಗಲೂ ಕೂಡ ಈ ರಸ್ತೆ ರಿಪೇರಿಯನ್ನು ಮಾಡುತ್ತಿದ್ದಾರೆ. ಇಂಥಾವರನ್ನು ತಾವು ಖಾಯಂ ಗೊಳಿಸುವುದು ತಮ್ಮ ಕರ್ತವ್ಯವಲ್ಲವೇ ಹೇಳಿ. ದಯುವಿಟ್ಟು ಅವರನ್ನು ಖಾಯಂ ಮಾಡುವ ಹಾಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಅನೇಕ ಸಂದರ್ಭದಲ್ಲಿ ಪ್ರವಾಸ ಹೋಗುವಾಗ ನೋಡುತ್ತಿದ್ದಾರೆ. ಇವರು ಮಳೆ ಬಿಸಿಲುಅನ್ನುವುದನ್ನು ಲೆಕ್ಕಿಸದೆ ಕೆಲಸ ಮಾಡುತ್ತಿದ್ದಾರೆ. ಅನ್ನುವುದನ್ನು ಅವರು ನೋಡಿದ್ದಾರೆ ಹೀಗಿದ್ದರೂ ಕೂಡಅವರನ್ನು ಇನ್ನೂ ಸಹ ಖಾಯಂ ಮಾಡದೇ ಇರುವುದು ಯಾವ ನ್ಯಾಯ. ಮತ್ತು ಸರ್ಕಾರ ಅವರಿಗೆ ಆರು ರೂಪಾಯಿ ಕೂಲಿಕೊಡಬೇಕು ಅಂತ ನಿಗದಿ ಮಾಡಿದ್ದರೂ ಸಹ ಇನ್ನೂ ೪-೪೦, ೪ ರೂಪಾಯಿ ಕೊಟ್ಟು ಅವರ ಕೈಯ್ಯಲಿ ಕೆಲಸ ಮಾಡಿಸುತ್ತಿದ್ದಾರೆ. ಆದುದರಿಂದ ನಾನು ತಮಗೆ ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಸರ್ಕಾರದವರು ೬ರೂಪಾಯಿ ಕೂಲಿ ಕೊಡುವ ಹಾಗೆ ಯಾವ ತಾರಿನಕಿಲ್ಲಿ ನಿಗದಿ ಮಾಡಿದ್ದಾರೋ ಅಂದಿನಿಂದ ಆ ದರದಂತೆ ಕೂಲಿ ಕೊಡಿಸುವ ವ್ಯವಸ್ಥೆ ಮಾಡಬೇಕು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಇರತಕ್ಕಂಥಾ ಕಾರ್ಮಿಕರಿಗೆ ಅನೇಕ ಸವಲತ್ತುಗಳನ್ನು ಕೊಡುವುದಕ್ಕೆ ಈಗಾಗಲೇ ಒಪ್ಪಂದ ಮಾಡಿಕೊಂಡಿದ್ದಾರೆ. ಏತಕ್ಕೆಂದರೆ ಆ ಕಾರ್ಮಿಕರೆಲ್ಲಾ ಒಂದು ಸಂಘಟಿತರಾಗಿ ಕೆಲಸ ಮಾಡಿದ್ದರಿಂದ ಅವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಅದೇರೀತಿ ಇಲ್ಲಿರುವ ಕಾರ್ಮಿಕರೊಂದಿಗೆ ಒಪ್ಪಂದ ಮಾಡಿಕೊಂಡು ಅವರಿಗೆ ಏನು ಸವಲತ್ತುಗಳನ್ನು ಕೊಡಬೇಕೆಂದು ಒಪ್ಪಂದ ಮಾಡಿದ್ದೀರೋ ಅದನ್ನು ಇಲ್ಲಿ ಕಾರ್ಮಿಕರಿಗೂ ಸಹ ಏತಕ್ಕೆ ಜಾರಿಗೆ ತರುವುದಕ್ಕಾಗುವುದಿಲ್ಲ. ಇದಕ್ಕೆ ಏನಾದರೂ ಅಧಿಕಾರಿಗಳೇ ಕಾರಣರೋ ಅಥವಾ ಮತ್ತಾರು ಕಾರಣರೋ ಗೊತ್ತಿಲ್ಲ. ಅಥವಾ ಇಲ್ಲಿ ಕಾರ್ಮಿಕರು ಸಂಘಟಿತರಾಗಿ ಏನೂ ಹಟ ಮಾಡದೇ, ಏನೂ ಮುಷ್ಕರ ಮಾಡದೇ ಯಾವುದೇ ಪ್ರಯತ್ನ ಪಡದೇ ಇರುವುದರಿಂದ ಈ ಕಾರ್ಮಿಕರನ್ನು ಏನಾದರೂ ಅವರು ಶೋಷಣೆ ಮಾಡುತ್ತಿದ್ದಾರೋ ಏನೋ ಗೊತ್ತಿಲ್ಲ. ತಾವು ಅವರೊಂದಿಗೆ ಏನು ಒಪ್ಪಂದ ಮಾಡಿಕೊಂಡಿದ್ದೀರೋ ಅದನ್ನು ಕೊಡಲೇ ಜಾರಿಗೆ ತರಬೇಕು ಎಂದು ಹೇಳುತ್ತೇನೆ ಅಲ್ಲದೇ ಆ ಕಾರ್ಮಿಕರೊಂದಿಗೆ ಏನು ಒಪ್ಪಂದ ಮಾಡಿಕೊಂಡಿದ್ದೀರೋ ಅದೇ ಒಪ್ಪಂದ ಇಲ್ಲಿರುವ ಕಾರ್ಮಿಕರಿಗೂ ಕೂಡ ಅನ್ವಯಿಸುವಂತೆ ಇರಬೇಕು ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ದಾವಣಗೆರೆ ಮತ್ತು ಹರಿಹರ ಇದು ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಇದರ ಬಗ್ಗೆ ಒಂದು ವಿಷಯವನ್ನು ಹೇಳುತ್ತೇನೆ. ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಓಡಾಡತಕ್ಕಂಥಾ ವಾಹನಗಳ ಸಂಖ್ಯೆ ದಿನಕ್ಕೆ ಸಹಸ್ರಾರು ಓಡಾಡುತ್ತವೆ. ಈ ಒಂದು ಹರಿಹರ ಮತ್ತು ದಾವಣಗೆರೆಯ ಹೆದ್ದಾರಿಯಲ್ಲಿ ಬೈಪಾಸ್‌ರೋಡ್ ಮಾಡುವುದಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ತುಂಗಭದ್ರಾ ನದಿಯ ಹತ್ತಿರ ಒಂದು ಸೇತುವೆ ಕಟ್ಟುತ್ತಿದ್ದಾರೆ. ಈ ಕೆಲಸ ೭-೮ ವರ್ಷದಿಂದಲೂ ನಡೆಯುತ್ತಾ ಇದೆ, ಆದರೂ ಸಹ ಆ ಕೆಲಸ ಇನ್ನೂ ಪೂರೈಸಿಲ್ಲಾ, ಇದಕ್ಕೆ ಕಾರಣ ಏನೋ ಗೊತ್ತಿಲ್ಲ. ಅಲ್ಲಿ ಕೆಲಸ ಹೋಗಿ ನೋಡಿದರೆ ಅಧಿಕಾರಿಗಳ ಅಲಕ್ಷ್ಯದಿಂದ ಈ ರೀತಿ ನಿಧಾನವಾಗುತ್ತಿದೆಯೋ ಏನೋ, ಹರಿಹರ ದಾವಣಗೆರೆ ಒಂದು

ಪ್ರಮುಖವಾದ ವ್ಯಾಪಾರ ಕೇಂದ್ರ, ಅಲ್ಲದೆ ಒಂದು ದೊಡ್ಡ ನಗರವಾಗಿ ಬೆಳೆದಿದೆ. ಇಲ್ಲಿ ವಾಹನಗಳ ಸಂಚಾರ ನೋಡಿದರೆ ಅನೇಕ ಜನರು ಪ್ರಾಣ ಕಳೆದುಕೊಂಡಿದ್ದಾರೆ ಪ್ರತಿದಿನ ಏನಾದರೂ ಒಂದು ಅಕ್ಸಿಡೆಂಟ್ ಆಗಿ ಜನ ಸಾಯುತ್ತಾ ಇದ್ದಾರೆ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದುದರಿಂದ ಈ ವಾಹನಗಳು ಊರ ಹೊರ ಭಾಗದಲ್ಲಿ ಹೋಗುವ ಹಾಗೆ ಒಂದು ರಸ್ತೆ ಮಾಡಿದರೆ ಬಹಳ ಉತ್ತಮವಾಗಿರುತ್ತದೆ ಮತ್ತು ಯಾರಿಗೂ ಪ್ರಾಣಾಪಾಯ ಇರುವುದಿಲ್ಲ, ಈ ರಸ್ತೆಯನ್ನು ಮಾಡದೇ ಹೋದರೆ ಇದನ್ನು ಖಂಡಿಸಬೇಕಾಗುತ್ತದೆ. ಆದುದರಿಂದ ಈ ಬೈ ಪಾಸ್ ರೋಡ್ ರಸ್ತೆಯನ್ನು ಆದಷ್ಟು ಜಾಗ್ರತೆ ಪೂರೈಸುವಂತೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಇದಕ್ಕೆ ಸಂಬಂಧಪಟ್ಟಂತೆ ಇನ್ನೊಂದು ವಿಷಯ ಹೇಳಬೇಕಾಗಿದೆ. ಅದೇನೆಂದರೆ ಈ ಹರಿಹರ ಮತ್ತು ದಾವಣಗೆರೆ ಮಧ್ಯದಲ್ಲಿ, ೯ ಮೈಲಿ ದೂರದಲ್ಲಿ ೩ ಲೆವಲ್ ಕ್ರಾಸಿಂಗ್ ಬರುತ್ತದೆ. ಈಗಾಗಲೇ ಅನೇಕ ಕರ್ವ್ ರೋಡ್‌ಗಳನ್ನು ಸರಿಪಡಿಸಿ ನೇರ ರೋಡ್ ಆಗಿ ಮಾಡುತ್ತಿದ್ದೀರಿ, ಯಾವ ಉದ್ದೇಶದಿಂದ ಮಾಡುತ್ತಿದ್ದೀರಿ ಎಂದರೆ ವಾಹನಗಳಿಗೆ ಹೋಗಿ ಹೋಗುವುದಕ್ಕೆ ತಡೆ ಆಗಬಾರದು ಅನ್ನುವ ಒಂದು ಉದ್ದೇಶದಿಂದ ಮಾಡುತ್ತಿದ್ದೀರಿ. ಈ ೯ ಮೈಲಿ ದೂರದಲ್ಲಿ ೩ ಲೆವಲ್ ಕ್ರಾಸಿಂಗ್ ಏನು ಬರುತ್ತದೆ ಅಲ್ಲಿ ಒಂದೊಂದು ಲೆವಲ್ ಕ್ರಾಸಿಂಗ್‌ನಲ್ಲೂ ಕೂಡ ಒಂದೊಂದು ವಾಹನ ೧೦–೧೦ ನಿಮಿಷ ನಿಲ್ಲಿಸಿ ಬರಬೇಕಾಗುತ್ತದೆ. ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಕನಿಷ್ಟಪಕ್ಷ ಒಂದು ದಿವಸಕ್ಕೆ ಆಕಡೆಯಿಂದ ಒಂದು ಸಾವಿರ ವಾಹನಗಳು ಈ ಕಡೆಯಿಂದ ಒಂದು ಸಾವಿರ ವಾಹನಗಳು ಚಲಿಸುತ್ತಾ ಇರುತ್ತವೆ. ಅಲ್ಲಿ ಮಧ್ಯದಲ್ಲಿ ಇರುವ ಗೇಟನ್ನು ದಿನಕ್ಕೆ ೨೦--೨೫ ಸಾರಿ ಮುಚ್ಚಬೇಕಾಗುತ್ತದೆ. ಈ ಮೂರು ಜಾಗಗಳಲ್ಲಿ ಅಂಡರ್ ಬ್ರಿಡ್ಜ್ ಮಾಡುವುದಕ್ಕೆ ಬೇಕಾದಷ್ಟು ಅನೂಕೂಲ ಇದೆ, ನೇರವಾದ ರಸ್ತೆಯ ವ್ಯವಸ್ಥೆ ಇರುವುದರಿಂದ ಅಲ್ಲಿ ಅಂಡರ್ ಬ್ರಿಡ್ಜ್ ಮಾಡುವುದಕ್ಕೆ ತೊಂದರೆ ಏನೂ ಇರುವುದಿಲ್ಲ. ಮತ್ತು ಸರ್ಕಾರದ ವಾಹನಗಳು ಕೂಡ ಅಡ್ಡಿ ಅಡಚಣೆ ಇಲ್ಲದೆ ತಿರುಗಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ನಾನು ತಮಗೆ ಮತ್ತೊಮ್ಮೆ ಸ್ಪಷ್ಟಪಡಿಸುವುದೇನೆಂದರೆ ಈ ಮೂರು ಜಾಗಗಳಲ್ಲಿ ಅಂಡರ್ ಬ್ರಿಡ್ಜ್ ಮಾಡಿಕೊಡುವುದು ಒಂದು ಮತ್ತೊಂದು ಹರಿಹರ–ದಾವಣಗೆರೆ ಊರ ಹೊರಗೆ ರಸ್ತೆ ಮಾಡಿಕೊಡುವುದು ಒಂದು ಕೆಲಸ. ಇಲ್ಲಿಗೆ ಬರುವ ವಾಹನಗಳೆಲ್ಲಾ ಊರ ಹೊರಗಿನ ರಸ್ತೆ ಮೂಲಕ ಹೋದರೆ ಅಲ್ಲಿನ ಜನರಿಗೆ ಆಗತಕ್ಕಂಥಾ ತೊಂದರೆಯೂ ಕೂಡ ತಪ್ಪುತ್ತದೆ. ಇದನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ದಾವಣಗೆರೆ ನಗರದೊಳಗೆ ಒಂದು ಲೋಕೋಪಯೋಗಿ ಇಲಾಖೆ ರಸ್ತೆ ಇದೆ. ಆ ರಸ್ತೆಯ ವ್ಯವಸ್ಥೆ ಸ್ವಲ್ಪವು ಸರಿಯಿಲ್ಲ. ನಗರ ಸಭೆಯವರು ಈ ರಸ್ತೆ ನಮಗೆ ಸೇರಿದ್ದಲ್ಲವೆಂದು ಅದನ್ನು ರಿಪೇರಿ ಮಾಡಲು ನಿರಾಕರಿಸುತ್ತಾರೆ; ಇತ್ತ ಕಡೆ ಲೋಕೋಪಯೋಗಿ ಇಲಾಖೆಯವರು ಈ ರಸ್ತೆ ಕಡೆ ಸರಿಯಾಗಿ ಗಮನ ಹರಿಸುತ್ತಿಲ್ಲ. ಇದರಿಂದಾಗಿ, ಆ ರಸ್ತೆಯಲ್ಲಿ ವಾಹನ ಮತ್ತು ಜನ ಸಂಚಾರಕ್ಕೆ ಬಹಳ ತೊಂದರೆಯಾಗಿದೆ. ಆದುದರಿಂದ, ಮಾನ್ಯ ಮಂತ್ರಿಗಳು ಅಲ್ಲಿನ ಅಧಿಕಾರಿಗಳಿಗೆ ಕೂಡಲೇ ಆದೇಶ ಕೊಟ್ಟು ಆ ರಸ್ತೆಯನ್ನು ದುರಸ್ತು ಪಡಿಸುವುದಕ್ಕೆ ದಾವಣಗೆರೆ ಮಧ್ಯದಲ್ಲಿರುವ ಎಲ್ಲ ರಸ್ತೆಗಳನ್ನೂ ಅಗಲಪಡಿಸಿ ತಾರು ರಸ್ತೆಗಳನ್ನಾಗಿ ಪರಿವರ್ತಿಸಿಕೊಡಬೇಕೆಂದು ಹೇಳುತ್ತೇನೆ. ನಾನು ಹೇಳಿದ ಮೂರು ಬಹು ಮುಖ್ಯವಾದ ಕಾರ್ಯಗಳನ್ನು ಮಾನ್ಯ ಮಂತ್ರಿಗಳು ಆದಷ್ಟು ಬೇಗನೆ ಮಾಡಿಸಿಕೊಡಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಬಿ. ಮಲ್ಲಪ್ಪ.— (ಅರಕಲಗೂಡು) ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿರುವ ಬೇಡಿಕೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಸಾಲಿಗೆ ಸುಮಾರು ೮೩ ಕೋಟಿ ರೂಪಾಯಿಗಳನ್ನು ಈ ಇಲಾಖೆಗೆ ಒದಗಿಸಲಾಗಿದೆ. ಈ ಹಣದಲ್ಲಿ ಸುಮಾರು ಅರ್ಧ ಭಾಗಕ್ಕಿಂತ ಹೆಚ್ಚು ಸಿಬ್ಬಂದಿ ವೆಚ್ಚಕ್ಕೆ ಖರ್ಚಾಗುವುದು ನಾಚಿಕೇಗೇಡಿನ ವಿಚಾರ. ಈ ಇಲಾಖೆಯಲ್ಲಿ ೨೯ ಮುಖ್ಯ ಇಂಜಿನಿಯರುಗಳಿದ್ದಾರೆ ; ಅಲ್ಲದೆ ಸೂಪರಿಂಟೆಂಡೆಂಟ್ ಇಂಜಿನಿಯರ್, ಎಕ್ಸಿಕ್ಯೂಟೀವ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತು ಸಾವಿರಾರು ಜನ ಜೂನಿಯರ್ ಇಂಜಿನಿಯರುಗಳು ಇದ್ದಾರೆ. ಹೀಗಾಗಿ, ಈ ಇಲಾಖೆಗೆ ಒದಗಿಸಿರುವ ಬಹುತೇಕ ಹಣ ಸಿಬ್ಬಂದಿ ವೆಚ್ಚಕ್ಕಾಗಿ ಖರ್ಚಾಗುತ್ತಿದೆ. ಅಲ್ಲದೆ, ಹತ್ತೊಂಬತ್ತು ಜಿಲ್ಲೆಗಳನ್ನು

ಸರ್ಕಲ್ಲುಗಳೆಂದು ಮಾಡಿ, ಅಲ್ಲಿಗೆ ಸೂಪರಿಂಟೆಂಡೆಂಟ್ ಇಂಜಿನಿಯರುಗಳನ್ನು ನೇಮಕ ಮಾಡಿದ್ದಾರೆ. ಇಷ್ಟೆಲ್ಲಾ ಇದ್ದರೂ, ಸಾವಿರಾರು ಮಂದಿ ಜೂನಿಯರ್ ಇಂಜಿನಿಯರುಗಳಿಗೆ ಬಡ್ತಿಯನ್ನೇ ಕೊಟ್ಟಿಲ್ಲ ; ಅವರು ಸುಮಾರು ೧೫-೨೦ ವರ್ಷಗಳಿಂದ ಅದೇ ಕೆಲಸದಲ್ಲಿ ಮುಂದುವರಿದಿದ್ದಾರೆ ; ಅವರ ಕೆಲಸವನ್ನೂ ಖಾಯಂ ಮಾಡಿಲ್ಲ. ಕೆಲವರು ಜೂನಿಯರ್ ಇಂಜಿನಿಯರ್‌ಗಳು ಮತ್ತು ವರ್ಕ್ ಚಾರ್ಜ್‌ನಲ್ಲಿರುವವರು ನಿವೃತ್ತಿಯಾಗುವ ಹೊತ್ತಿಗೆ ಬಂದಿದ್ದರೂ ಅವರನ್ನಿನ್ನೂ ಖಾಯಂಗೊಳಿಸಿಲ್ಲ ಮತ್ತು ಬಡ್ತಿಯನ್ನು ನೀಡಿಲ್ಲ ; ಸರ್ಕಾರಕ್ಕೆ ಇವರಮೇಲೆ ಕನಿಕರವಿಲ್ಲವೇನೊ ಎಂದು ನನಗನ್ನಿಸುತ್ತಿದೆ. ಇನ್ನು ೨೯ ಜನ ಮುಖ್ಯ ಇಂಜಿನಿಯರುಗಳಿಗೆ ವಿಧಿಬದ್ಧವಾಗಿ ವರ್ಕ್‌ಲೋಡ್ ಕೊಟ್ಟಿಲ್ಲ. ಒಬ್ಬರಿಗೆ ಹೆಚ್ಚು ಕೆಲಸ ಕಾರ್ಯಗಳಿದ್ದರೆ, ಇನ್ನೊಬ್ಬರಿಗೆ ಬಹಳ ಕಡಿಮೆ ಕೆಲಸಕಾರ್ಯಗಳಿರುತ್ತವೆ. ಕೆಲವು ಮುಖ್ಯ ಇಂಜಿನಿಯರುಗಳ ಕಛೇರಿಗೆ ಹೋದರೆ, ಅಲ್ಲೇನು ಕೆಲಸ ಮಾಡುತ್ತಾರೋ ಇಲ್ಲವೋ ಎಂದು ಅಳತೆ ಮಾಡುವುದಕ್ಕೇ ಸಾಧ್ಯವಾಗುವುದಿಲ್ಲ. ಆದುದರಿಂದ, ಸರ್ಕಾರದವರು ಈ ಇಲಾಖೆಯನ್ನು ರೀ ವೈಟಲೈಜೇಷನ್ ಮಾಡಿ, ಮುಖ್ಯ ಇಂಜಿನಿಯರುಗಳ ಸಂಖ್ಯೆಯನ್ನು ಕಡಮೆಗೊಳಿಸಿದರೆ ಇಲಾಖೆಯ ಕಾರ್ಯ ದಕ್ಷತೆಯಿಂದ ನಡೆಯುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಇನ್ನು ನನ್ನ ಕ್ಷೇತ್ರದ ಬಗ್ಗೆ ಮತ್ತು ಗ್ರಾಮಾಂತರ ಸಾರಿಗೆ ಸಂಪರ್ಕ ಕುರಿತು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ವ್ಯವಸ್ಥಿತ ಮಾರುಕಟ್ಟೆ ಸಮಿತಿಗಳಲ್ಲಿ ಸೆಲ್ಲರ್ ಫೀಸ್ ಎಂದೂ ನೂರಕ್ಕೆ ಒಂದು ರೂಪಾಯಿಯಂತೆ ವಸೂಲು ಮಾಡಲಾಗುತ್ತಿದೆ. ಈ ಹಣವನ್ನು ರಸ್ತೆಗಳಿಗಾಗಿ ಉಪಯೋಗಿಸಲಾಗುವುದೆಂದು ಸರ್ಕಾರದವರು ಹೇಳಿದ್ದನ್ನು ಹಿಂದೆ ನಾನು ಈ ಸಭೆಯ ಸದಸ್ಯನಾಗಿರದಿದ್ದರೂ ಕೂಡ, ಕೇಳಿ ತಿಳಿದುಕೊಂಡಿದ್ದೆನು. ಗ್ರಾಮಾಂತರ ರಸ್ತೆ ಸಾರಿಗೆ ಸಂಪರ್ಕಕ್ಕಾಗಿ ಈ ಹಣವನ್ನು ಉಪಯೋಗಿಸಲಾಗುವುದೆಂದು ಮಾನ್ಯ ಚನ್ನಬಸಪ್ಪನವರು ಆಶ್ವಾಸನೆ ಕೊಟ್ಟಿದ್ದನ್ನು ನಾನು ಕೇಳಿದ್ದೇನೆ. ಈಗ ಆ ಹಣವನ್ನು ಬೇರೆ ವ್ಯವಹಾರಗಳಿಗೂ ಸಹ ಉಪಯೋಗಿಸಲಾಗುತ್ತಿದೆ ಎಂದು ನಾನು ಕೇಳಿದ್ದೇನೆ. ಇದು ಒಳ್ಳೆಯದಲ್ಲ. ಸರ್ಕಾರದವರು ಯಾವ ಉದ್ದೇಶಕ್ಕಾಗಿ ಹಣವನ್ನು ಸಂಗ್ರಹಮಾಡುತ್ತಾರೆ ಅದಕ್ಕಾಗಿಯೇ ಖರ್ಚು ಮಾಡಬೇಕೆಂದು ಹೇಳಬಯಸುತ್ತೇನೆ. ಗ್ರಾಮಾಂತರ ರಸ್ತೆ ಸಾರಿಗೆ ಸಂಪರ್ಕ ವ್ಯವಸ್ಥೆಗಾಗಿ ವರ್ಷ ವರ್ಷ ೩೦-೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ ಎಂದು ಮಾಹಿತಿ ಕೊಡಲಾಗಿದೆ. ನಮ್ಮ ಮಲೆನಾಡಿನ ಭಾಗದಲ್ಲಿರುವ ರಸ್ತೆಗಳನ್ನು ನೋಡಿದರೆ ಇವುಗಳನ್ನು ದುರಸ್ತು ಮಾಡಲು ಹಣ ಖರ್ಚು ಮಾಡಿದ್ದಾರೆಯೋ ಇಲ್ಲವೇ ಎನ್ನುವ ಅನುಮಾನ ಬರುತ್ತದೆ ; ಆ ರಸ್ತೆಗಳ ಸ್ಥಿತಿಯನ್ನು ನೋಡಿದರೆ ನಮ್ಮ ಮನಸ್ಸಿಗೆ ನೋವಾಗುತ್ತದೆ. ಅಲ್ಲಿ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಲು ಸರಿಯಾದ ರಸ್ತೆ ಸೌಕರ್ಯಗಳಿಲ್ಲ. ರಸ್ತೆಗಳನ್ನು ನಿರ್ಮಿಸಿ ಮೆಟ್ಲಿಂಗ್ ಮಾಡದಿದ್ದರೆ, ಪುನಃ ಎರಡು ಮೂರು ವರ್ಷ ಬಿಟ್ಟು ಹೊಸ ರಸ್ತೆಗಳನ್ನೇ ಮಾಡಬೇಕಾಗುತ್ತದೆ. ಆದುದರಿಂದ, ಒಂದು ಹೊಸ ರಸ್ತೆಯನ್ನು ನಿರ್ಮಿಸಿದ ತಕ್ಷಣ ಮೆಟ್ಲಿಂಗ್ ಮಾಡಿ, ಅವುಗಳನ್ನು ಒಳ್ಳೆಯ ರಸ್ತೆಗಳನ್ನಾಗಿ ಪರಿವರ್ತಿಸಬೇಕೆಂದು ಹೇಳುತ್ತೇನೆ.

ಇನ್ನು ಸೇತುವೆಗಳ ವಿಚಾರದಲ್ಲಿ ನಾನು ಬಹಳ ದುಃಖದಿಂದ ಮಾತನಾಡಬೇಕಾಗಿದೆ. ೧೯೬೭ನೇ ಇಸವಿಯಲ್ಲಿ ಮಾನ್ಯ ನಿಜಲಿಂಗಪ್ಪನವರು ಕೇರಳಾಪುರದ ಸೇತುವೆಗೆ ಅಸ್ತಿಭಾರ ಹಾಕಿದರು. ಆ ಸೇತುವೆಗೆ ಕಂಬ ಕಟ್ಟಿ ಇವತ್ತಿಗೆ ೩-೪ ವರ್ಷಗಳಾದವು ; ಅದಿನ್ನೂ ಪೂರ್ಣಗೊಂಡಿಲ್ಲ. ಆ ಸೇತುವೆಗಾಗಿ ಈ ವರ್ಷದ ಆಯವ್ಯಯದಲ್ಲಿ ಸರ್ಕಾರದವರು ಕೇವಲ ಹತ್ತು ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಇದನ್ನು ನೋಡಿದರೆ ಅರಕಲಗೂಡು ತಾಲ್ಲೂಕಿನ ಬಗ್ಗೆ ಸರ್ಕಾರದವರು ಎಂತಹ ಧೋರಣೆಯನ್ನು ತಳೆದಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಈ ರೀತಿಯಾಗಿ ಸರ್ಕಾರದವರು ಹಣವನ್ನು ಹಂಚುತ್ತಾ ಹೋದರೆ, ಇನ್ನು ಎಷ್ಟು ವರ್ಷಕ್ಕೆ ಆ ಸೇತುವೆ ಪೂರ್ಣಗೊಳ್ಳುವುದೋ ಗೊತ್ತಾಗುವುದಿಲ್ಲ. ಹಾಸನ-ಕೇರಳಾಪುರ, ಕೇರಳಾಪುರ-ಅರಕಲಗೂಡು ಅರಕಲಗೂಡು ಹುಣಸೂರು, ಹುಣಸೂರ-ಮಡಿಕೇರಿ ಹೀಗೆ ಮೂರು ಜಿಲ್ಲೆಗಳಿಗೆ ಕನೆಕ್ಟ್ ಮಾಡುವ ದೊಡ್ಡ ರಸ್ತೆಯ ಮಧ್ಯದಲ್ಲಿರುವ ಈ ಸೇತುವೆಯನ್ನು ಇನ್ನೂ ಸರ್ಕಾರದವರು ನಿರ್ಮಿಸದಿರುವುದು ಬಹಳ ಶೋಚನಿಯವಾದ ವಿಚಾರ. ಮಾನ್ಯ ಚನ್ನಬಸಪ್ಪನವರು ಹಾಗೂ ೩-೪ ಜನ ಮುಖ್ಯ ಇಂಜಿನಿಯರಗಳು ಬಂದು ಈ ಸೇತುವೆಯನ್ನು ಖುದ್ದು ಪರಿಶೀಲಿಸಿದ್ದರೂ ಈ ಸೇತುವೆ ಇದುವರೆವಿಗೂ ಪೂರ್ಣಗೊಂಡಿಲ್ಲ ; ಹಾಗೇ ನಿಂತಿದೆ. ಸೇತುವೆಗಳ ನಿರ್ಮಾಣವನ್ನು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ವಹಿಸಲಾಗಿದೆ ಎಂದು ಹೇಳಿದ ಮೇಲೆ, ಅಲ್ಲಿಗೆ ನಾನು ಮೂರು ವರ್ಷಗಳಿಂದಲೂ ತಿರುಗಾಡುತ್ತಿದ್ದೇನೆ, ಸರ್ಕಾರದವರು ರೇಟ್ ಸಪ್ಲೈ ಮಾಡಿಲ್ಲವೆಂದು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿನವರು

ವಿಳಂಬಕ್ಕೆ ಕಾರಣ ಕೊಡುತ್ತಾರೆ. ಅಲ್ಲಿರುವವರೂ ಇಂಜಿನಿಯರುಗಳೇ ಇಲ್ಲಿರುವವರು ಇಂಜಿನಿಯರುಗಳೇ; ಎಲ್ಲರೂ ಇಲಾಖಾ ಇಂಜಿನಿಯರುಗಳೇ ಆಗಿದ್ದಾರೆ. ಇವರಿಬ್ಬರ ನಡುವೆ ಎಂತಹ ರೇಟ್ ಕಂಟ್ರಾಕ್ಟ್ ಆಗಬೇಕೋ ನನಗೆ ತಿಳಿಯದು. ಹೀಗಾಗಿ, ಅವರ ಮನಸ್ಸಿನ ಯಾವುದೋ ಕಲ್ಮಷ ಉಂಟಾಗಿ, ಆ ಸೇತುವೆ ಕೆಲಸ ಹಾಗೇ ನಿಂತಿದೆ. ಆ ಸೇತುವೆಯನ್ನು ಸರ್ಕಾರದವರು ಸೆಪ್ಟೆಂಬರ್ ಅಕ್ಟೋಬರ್ ಹೊತ್ತಿಗೆ ಅಥವಾ ಜನವರಿಯೊಳಗಾದರೂ ಪೂರ್ತಿ ಮಾಡಿಸಿಕೊಡದೆ ಹೋದರೆ. ಆ ಭಾಗದ ಕಡೆಯಿಂದ ಎರಡು ಮೂರು ಬಸ್‌ನಲ್ಲಿ ಜನಗಳನ್ನು ಕರೆದುಕೊಂಡು, ಈ ಸದನದ ಮುಂದೆ ಸತ್ಯಾಗ್ರಹ ಮಾಡುವುಕ್ಕೂ ನಾವು ಸಿದ್ಧರಿದ್ದೇವೆ ಎಂದು ಹೇಳಬಯಸುತ್ತೇನೆ.

ಅಧ್ಯಕ್ಷರು.—ಅದಕ್ಕೆ ಯಾವರೀತಿ ಅಪ್ರೋಚ್ ಮಾಡಬೇಕೋ ಆ ರೀತಿ ಮಾಡಬೇಕು.

೧-೦೦ ಪಿ. ಎಂ.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ ನನ್ನ ಕಷ್ಟವನ್ನು ಹೇಳಿಕೊಳ್ಳಬೇಕಾಗಿದೆ. ೧೨ ವರ್ಷಗಳಿಂದ ಆ ಬ್ರಿಡ್ಜ್ ಆಗಿಲ್ಲ. ಆ ಸೇತುವೆಗೆ ಶ್ರೀಮಾನ್ ನಿಜಲಿಂಗಪ್ಪನವರು ಫೌಂಡೆಷನ್ ಹಾಕಿದರು. ಫೌಂಡೇಷನ್ ಹಾಕಿ ೧೨ ವರ್ಷಗಳಾಗಿದೆ. ಅದು ಯಾವಾಗ ಆಗುತ್ತದೆಯೋ ಎನ್ನುವುದು ನನ್ನ ಮನಸ್ಸಿನಲ್ಲಿರುವ ನೋವು. ೧೯೭೩ನೇ ಇಸವಿಯಲ್ಲಿ ಈ ಸೋತೇಹಳ್ಳಿ ಸೇತುವೆಗೆ ಫೌಂಡೇಷನ್ ಹಾಕಿದ್ದರೂ ಕೂಡ ಇನ್ನೂ ಅದಕ್ಕೆ ಎಸ್ಟಿಮೆಂಟ್ ತಯಾರು ಮಾಡಿಲ್ಲ. ಆದ್ದರಿಂದ ಇದನ್ನು ಆದಷ್ಟು ಜಾಗ್ರತೆ ಮಾಡಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯವೇನೆಂದರೆ ನಮ್ಮ ತಾಲ್ಲೂಕಿನಲ್ಲಿ ಅಲ್ಲಲ್ಲೇ ರಸ್ತೆಗಳಲ್ಲಿ ಜಲ್ಲಿಯನ್ನು ಕಲೆಕ್ಟ್ ಮಾಡಿದ್ದಾರೆ. ಅದನ್ನು ರಸ್ತೆಗೆ ಹಾಕಿ ಮೆಟಲಿಂಗ್ ಮಾಡಿಲ್ಲ. ರಸ್ತೆಗಳು ಚೆನ್ನಾಗಿಲ್ಲದೆ ಅನಾಹುತಗಳಾಗುತ್ತಿವೆ. ರಸ್ತೆಗಳಲ್ಲಿ ಜನಗಳು ತಿರುಗಾಡುವುದಕ್ಕೆ ಆಗುವುದಿಲ್ಲ. ಜನಗಳು ಸಂತೆಗೆ ಹೋಗುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ರಸ್ತೆಗಳನ್ನು ನಮ್ಮ ತಾಲ್ಲೂಕಿನಲ್ಲಿ ಆದಷ್ಟು ಜಾಗ್ರತೆ ರಿಪೇರಿ ಮಾಡಿಸಿಕೊಡಬೇಕೆಂದು ನಾನು ಸ್ವಲ್ಪ ಹೆಚ್ಚು ಸಮಯ ತೆಗೆದುಕೊಂಡು ಅಧ್ಯಕ್ಷರಿಗೆ ತೊಂದರೆ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ ಮಾನ್ಯ ಲೋಕೋಪಯೋಗಿ ಶಾಖೆಯ ಸಚಿವರು ಈ ಚರ್ಚೆಗೆ ಉತ್ತರ ಕೊಡುವುದಕ್ಕೆ ಮೊದಲು ಕೆಲವು ವಿಷಯಗಳನ್ನು ಕೇಳಬೇಕಾಗಿದೆ. ಈಗ ಮೊದಲನೆಯದಾಗಿ ಮಾನ್ಯ ಲೋಕೋಪಯೋಗಿ ಶಾಖೆಯ ಸಚಿವರು ಈ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ನಮ್ಮ ರಾಜ್ಯದಲ್ಲಿ ನ್ಯಾಷನಲ್ ಹೈವೇ ೧೯೬೮ ಕಿಲೋ ಮೀಟರ್ ಇದೆ, ಸ್ಟೇಟ್ ಫಂಡ್ ರೋಡ್ ೫೭,೬೬೬ ಕಿಲೋಮೀಟರು ಇದೆ, ಐ. ಸಿ. ಆರ್. ಸಿ. ರಸ್ತೆ ೭೨೯೦ ಕಿಲೋಮೀಟರ್ ಇದೆ ಎಂದು ತಾವು ಉತ್ತರ ಕೊಟ್ಟಿದ್ದೀರಿ. ತಾವು ತಮ್ಮ ಪಬ್ಲಿಕ್‌ವರ್ಕ್ಸ್ ಇಲಾಖೆಯ ಬೇಡಿಕೆಯಲ್ಲಿ ೨೬,೧೧,೧೯,೦೦೦ ರೂಪಾಯಿಗಳನ್ನು ಪಬ್ಲಿಕ್ ವರ್ಕಿಗೂ, ೧೪,೪೫,೮೧,೦೦೦ ರೂಪಾಯಿಗಳನ್ನು ಕಟ್ಟಡಗಳಿಗೂ, ೩೧,೬೩,೦೦,೦೦ ರೂಪಾಯಿಗಳನ್ನು ರಸ್ತೆ ಮತ್ತು ಸೇತುವೆಗಳಿಗೂ ಸರ್ಕಾರದವರು ಕೊಟ್ಟಿದ್ದಾರೆ. ಬಿಲ್ಡಿಂಗ್‌ಗಳಿಗೆ ಕೊಟ್ಟಿರತಕ್ಕ ಹಣ ಈಗ ಇರತಕ್ಕ ಬಿಲ್ಡಿಂಗ್‌ಗಳಿಗೆ ಸುಣ್ಣ ಬಣ್ಣವನ್ನು ಬಳಿಯುವುದಕ್ಕೂ ಸಾಕಾಗುವುದಿಲ್ಲ. ಹಾಗೆಯೇ ರಸ್ತೆ ಮತ್ತು ಸೇತುವೆಗಳಿಗೆ ಕೊಟ್ಟಿರತಕ್ಕ ಹಣ ಏನಿದೆ ಇದರಿಂದ ಇರತಕ್ಕ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೂ ಸಾಕಾಗುವುದಿಲ್ಲ. ಆದ್ದರಿಂದ ಬಡ್ಜೆಟ್ಟಿನಲ್ಲಿ ಹಣವನ್ನು ಕೇಳುವಾಗ ರಸ್ತೆಗಳ ಅಭಿವೃದ್ಧಿ ಕಾರ್ಯವನ್ನು ಮಾಡಿಸುವುದಕ್ಕೆ ಅದು ಸದುಪಯೋಗವಾಗಬೇಕಾದರೆ ಪ್ರತಿಯೊಂದು ಹಳ್ಳಿಯ ರಸ್ತೆಯನ್ನೂ ತಾಲ್ಲೂಕು ರಸ್ತೆಗಳಿಗೆ ಸೇರಿಸಬೇಕು. ತಾಲ್ಲೂಕು ರಸ್ತೆಗಳನ್ನು ಡಿಸ್ಟ್ರಿಕ್ಟ್ ರಸ್ತೆಗಳಿಗೆ ಸಂಪರ್ಕವನ್ನು ಕಲ್ಪಿಸಬೇಕು. ಆತರಹ ವ್ಯವಸ್ಥೆಯಾಗಬೇಕು. ಮಾನ್ಯ ಲೋಕೋಪಯೋಗಿ ಶಾಖೆಯ ಸಚಿವರು ಸರ್ಕಾರದಿಂದ ಎಲ್ಲಾ ಎಂ. ಎಲ್. ಎ. ಗಳಿಗೂ ಪತ್ರವನ್ನು ಬರೆದಿದ್ದಾರೆ. ನನಗೆ ಆ ಪತ್ರವನ್ನು ನೋಡಿದ ಕೂಡಲೇ ನಗುಬಂತು. ಎಂ. ಎಲ್. ಎ ಗಳು ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ೫ ಕಿಲೋಮೀಟರ್ ರಸ್ತೆಯನ್ನು ಮಾಡಿಸುವ ಬಗ್ಗೆ ಸೂಚನೆಯನ್ನು ಕೊಡಬೇಕು ಎಂದು ಪತ್ರಬರೆದಿದ್ದರು ೫ ಕಿಲೋ ಮಿಟರ್ ರಸ್ತೆ ಎಂದರೆ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗುವುದಕ್ಕಾಗುವುದಿಲ್ಲ. ಇಷ್ಟು ದೂರದ ರಸ್ತೆಯನ್ನು ಮಾಡುವ ಬಗ್ಗೆ ಸೂಚನೆ ಕೊಡಿ ಎಂದರೆ ಅದು ಹಾಸ್ಯಾಸ್ಪದವಾಗುತ್ತದೆ. ಹಿಂದೆ ಶ್ರೀಮಾನ್ ಚನ್ನಬಸಪ್ಪನವರು ಲೋಕೋಪಯೋಗಿ ಶಾಖೆಯ ಸಚಿವರಾಗಿದ್ದಾಗ ಬ್ರಿಡ್ಜ್ ಟ್ಯಾಕ್ಸ್ ಮತ್ತು ರೋಡ್ ಟ್ಯಾಕ್ಸ್ ಹಾಕಿ ಸ್ಪೆಷಲ್ ಟ್ಯಾಕ್ಸ್

ಹಾಕಿದ್ದಾರೆ. ಆದರೆ ಈಗ ಬಡ್ಜೆಟ್ಟಿನಲ್ಲಿ ಲೋಕೋಪಯೋಗಿ ಶಾಖೆಗೆ ಒದಗಿಸಿರತಕ್ಕ ಹಣದಲ್ಲಿ ಏನೇನೂ ಕೆಲಸ ಆಗುವುದಿಲ್ಲ. ಇದ್ದ ರಸ್ತೆಯನ್ನು ಮೇಂಟೇನ್ ಮಾಡುವುದಕ್ಕಾಗುವುದಿಲ್ಲ. ಇರತಕ್ಕ ಬಿಲ್ಡಿಂಗ್‌ಗಳ ರಿಪೇರಿ ಮಾಡುವುದಕ್ಕೆ ಆಗುವುದಿಲ್ಲ. ಹೀಗಿರುವಾಗ ಹೊಸ ಸೇತುವೆಗಳು ಹೊಸ ಕಟ್ಟಡಗಳು ಹೇಗೆ ಆಗಬೇಕು ಎಂಬುದನ್ನು ಆಲೋಚನೆ ಮಾಡಬೇಕು. ಮಾನ್ಯ ಮಂತ್ರಿಗಳು ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಕ್ಯಾಬಿನೆಟ್‌ನಲ್ಲಿ ಒಂದು ನಿರ್ಣಯ ತೆಗೆದುಕೊಂಡು ಎಲ್ಲಿ ವೆಚ್ಚವನ್ನು ಕಡಿಮೆ ಮಾಡಬೇಕೋ, ಎಲ್ಲಿ ಆವಶ್ಯಕವಾಗಿ ಖರ್ಚು ಮಾಡಬೇಕೋ, ಅದೆಲ್ಲವನ್ನು ಕುಳಿತು ಮಾತನಾಡಿ ಲೋಕೋಪಯೋಗಿ ಖಾತೆಗೆ ಹೆಚ್ಚು ಹಣವನ್ನು ಪಡೆಯದೇ ಹೋದರೆ ಇವರು ಬರೀ ಹೆಸರಿಗೆ ಬಂಗಾರಪ್ಪನವರಾಗುತ್ತಾರೆಯೇ ವಿನಹ ಇವರಿಂದ ಕೆಲಸ ಆಗುವುದಿಲ್ಲ ಎಂದು ನಾವು ಹೇಳಬೇಕಾಗುತ್ತದೆ ಈಗ ಏನು ಲೋಕೋಪಯೋಗಿ ಶಾಖೆಗೆ ಹಣವನ್ನು ಸರ್ಕಾರದವರು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ ಇದರಿಂದ ಇರತಕ್ಕ ಕಟ್ಟಡಗಳಿಗೆ ಸುಣ್ಣ ಬಣ್ಣವನ್ನು ಹಚ್ಚುವುದಕ್ಕೆ ಆಗುವುದಿಲ್ಲ.

ಶ್ರೀ ಜೆ. ಎಚ್. ಪಟೇಲ್.—ವಿರೋಧ ಪಕ್ಷದವರು ಇರುವ ಕಡೆ ರಸ್ತೆಗಳು ಆಗಬಾರದು, ರಸ್ತೆಗಳು ಇದ್ದರೆ ಅವುಗಳಿಗೆ ಮಣ್ಣು ಹಾಕಬಾರದು ಎಂದು ಏನಾದರೂ ರೂಲ್ ಇದೆಯೋ ? ನಮ್ಮ ಊರು ದಾವಣಗೆರೆ ಮತ್ತು ಶಿವಮೊಗ್ಗಾಕ್ಕೆ ಮಧ್ಯದಲ್ಲಿರುವ ಊರು. ಮಾನ್ಯ ಸಚಿವರೂ ಸಹ ಸ್ವತಃ ಅಲ್ಲಿಗೆ ಹೋಗಿ ನೋಡಿದ್ದಾರೆ. ಕಳೆದ ೪ ವರ್ಷಗಳಿಂದ ನಮ್ಮ ಊರಿನ ರಸ್ತೆಯಲ್ಲಿ ೩ ಕಾಸಿನ ಕೆಲಸವೂ ಆಗಿಲ್ಲ. ಮಾಡಿಸಿಯೂ ಇಲ್ಲ. ಸರ್ಕಾರದವರು ಏನಾದರೂ ಜೆ. ಎಚ್. ಪಟೇಲರು ಇರುವ ರಸ್ತೆಯನ್ನು ರಿಪೇರಿ ಮಾಡಬೇಡಿ ಎಂದು ಇಂಜಿನಿಯರಿಗೆ ಹೇಳಿದ್ದಾರೆಯೋ ? ಮಾನ್ಯ ಸಚಿವರಿಗೂ ಕೂಡ ಗೊತ್ತಿದೆ. ಆದ್ದರಿಂದ ಅವರು ಆ ಕಡೆ ತಮ್ಮ ಗಮನವನ್ನು ಹರಿಸಬೇಕು. ಆ ರಸ್ತೆಯಲ್ಲಿ ಲಕ್ಷಾಂತರ ಜನಗಳು ಓಡಾಡುತ್ತಾರೆ. ಅಲ್ಲಿ ಬಹಳ ಹೆಚ್ಚಿನ ಟ್ರಾಫಿಕ್ ಇದೆ. ಆದ್ದರಿಂದ ಆ ರಸ್ತೆಗೆ ದಯವಿಟ್ಟು ಬೇಗ ಆದ್ಯತೆಯನ್ನು ಕೊಡುತ್ತೀರಾ ?

† ಶ್ರೀ ಎಸ್. ಬಂಗಾರಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು)—

ಸನ್ಮಾನ್ಯ ಅಧ್ಯಕ್ಷರೇ ನನ್ನ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥಾ ೪ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ಈ ಸದನದ ಅನೇಕ ಜನ ಮಾನ್ಯ ಸದಸ್ಯರು ನಮ್ಮ ಮಿತ್ರರು ಸಲಹೆಗಳನ್ನು ಮತ್ತು ಈ ಇಲಾಖೆಗೆ ಸಂಬಂಧಪಟ್ಟಿರತಕ್ಕ ಪ್ರತಿಯೊಂದು ವಿಷಯದ ಬಗ್ಗೆಯೂ ಹಲವಾರು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಅವರಿಗೆ ಋಣಿಯಾಗಿದ್ದಾನೆ. ಒಂದು ಕಾರಣದಿಂದ ಅವರು ಕೊಟ್ಟಿರತಕ್ಕ ಸಲಹೆಗಳು ಅಷ್ಟು ಕಾರ್ಯಗತವಾಗುತ್ತವೆಯೋ ಎನ್ನತಕ್ಕಂಥಾ ಆತಂಕ ನನ್ನ ಮನಸ್ಸಿನಲ್ಲಿ ಇದ್ದರೂ ಕೂಡ ಈ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಇಲಾಖೆಯವರು ಸಂದರ್ಭ ಬಂದಾಗ ಹಣ ಸಿಕ್ಕಿದಾಗ ಅವುಗಳನ್ನು ಕಾರ್ಯಗತ ಮಾಡುತ್ತಾರೆ ಎನ್ನುವುದು ಸರ್ವವಿದಿತವಾಗಿದೆ. ನಮ್ಮ ಬೇಡಿಕೆಗಳ ಪ್ರಮಾಣ ಅಗಾದವಾಗಿದೆ. ಈ ಅಗಾದವಾಗಿರತಕ್ಕ ಬೇಡಿಕೆಗೆ ತಕ್ಕಹಾಗೆ ನಾವು ಹಣವನ್ನೂ ಕೂಡ ಮೀಸಲಾಗಿಡಬೇಕು ಎಂಬುದು ನಿರ್ವಿವಾದ ವಿಷಯ. ಮಾನ್ಯ ಸದಸ್ಯರೊಬ್ಬರು ಮಾತನಾಡುವಾಗ ಹೇಳಿದರು. ೧೦೦ ಕ್ಕೆ ೯೮ ರಷ್ಟು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿ ಹೋಗಿವೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಶೇಕಡಾವಾರು ಅವರು ಹೇಳಿರತಕ್ಕದ್ದು ಅವರ ಅಭಿಪ್ರಾಯ ಇರಬಹುದು. ಆದರೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ರಸ್ತೆಗಳ ಸಂಪರ್ಕಗಳು ಸರಿಯಾಗಿಲ್ಲ ಎನ್ನುವ ಮಾತನ್ನು ಎಲ್ಲರೂ ಒಪ್ಪಲೇ ಬೇಕು. ಶೇಕಡಾವಾರು ೯೮ ಇರಬಹುದು, ೮೦ ಇರಬಹುದು, ೭೦ ಇರಬಹುದು ಅರವತ್ತು ಇರಬಹುದು ಅಥವಾ ೪೦ ಇರಬಹುದೆಂದು ಒಬ್ಬೊಬ್ಬರು ಒಂದೊಂದು ಶೇಕಡಾವಾರನ್ನು ಹೇಳಬಹುದು. ಆದರೆ ಹೆಚ್ಚಿನ ಪ್ರಮಾಣದಲ್ಲಿ ನನ್ನ ಪ್ರಕಾರ ೧೦೦ ಕ್ಕೆ ೭೫ ರಷ್ಟು ೮೦ ರಷ್ಟು ರಸ್ತೆಗಳು ಚೆನ್ನಾಗಿಲ್ಲ ಎಂದು ಒಪ್ಪಿಕೊಳ್ಳಬಹುದು. ಸರ್ಕಾರದವರೂ ಇದನ್ನು ಒಪ್ಪುತ್ತಾರೆ. ಅಂದ ಮೇಲೆ ಇದಕ್ಕೆ ಎಷ್ಟು ಹಣ ಬೇಕಾಗುತ್ತದೆ ಎನ್ನತಕ್ಕಂಥಾ ಮಾತಿನ ಅರ್ಥ ಅದರ ವ್ಯಾಪ್ತಿ ಎಲ್ಲಿಯವರೆಗೆ ಹೋಗುತ್ತದೆ ಎನ್ನುವುದು ತಮಗೆ ವೇದ್ಯವಾಗುತ್ತದೆ.

ಮಾನ್ಯ ಅಧ್ಯಕ್ಷರೆ, ಈ ಬಡ್ಜೆಟನ್ನು ನೋಡಿ ಮಾನ್ಯ ಸದಸ್ಯರನೇಕರು ಪ್ರಸ್ತಾಪ ಮಾಡಿದ್ದಾರೆ. ಇದು ಕೆಲವರ ಅಭಿಪ್ರಾಯ ಇರಬಹುದು. ಇಲ್ಲಿ ಇಟ್ಟಿರತಕ್ಕ ಹಣ ಹೊಸದಾಗಿ ತೆಗೆದುಕೊಳ್ಳತಕ್ಕ ಪ್ಲಾನಿಂಗ್ ಸ್ಕೀಂಗಳಿಗೆ ಎಂಬ ಭಾವನೆ ಇರಬಹುದು. ಇಲ್ಲಿರತಕ್ಕ ಹಣ ಗೋಯಿಂಗ್ ವರ್ಕ್ಸ್‌ಗೆ ಹೆಚ್ಚಾಗಿದೆ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ಆದರೆ ಇದು ಏನೇನೂ ಸಾಲದು. ಈ ಹಣವನ್ನೆಲ್ಲಾ

ಒಟ್ಟು ಮಾಡಿ ರಾಜ್ಯದಲ್ಲಿ ಇರತಕ್ಕ ರಸ್ತೆ, ಸೇತುವೆ ಮುಂತಾದ ಸಂಪರ್ಕಸಾಧನಗಳಿಗೋಸ್ಕರವೇ ಖರ್ಚು ಮಾಡಿದರೂ ಇದು ಒಂದು ಮೂಲೆಗೂ ಸಹ ಸಾಕಾಗುವುದಿಲ್ಲ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ ರಸ್ತೆಗಳನ್ನೂ ಒಂದು ಮಟ್ಟಕ್ಕೆ ತಂದು ಅಲ್ಲಿ ಎತ್ತಿನ ಗಾಡಿ, ಕಾರು, ಲಾರಿ ಮುಂತಾದುವು ಹೋಗುವಂತೆ ಮಾಡಬೇಕು ಎನ್ನುವುದಾದರೆ ನಾವು ಒಂದು ದೊಡ್ಡ ಯೋಜನೆಯನ್ನು ಹಾಕಿದರೆ ಮಾತ್ರ ಸಾಧ್ಯವಾಗುತ್ತದೆ ಎಂಬುದನ್ನು ಹೇಳಬಯಸುತ್ತೇನೆ. ಮಾನ್ಯ ಸದಸ್ಯರೊಬ್ಬರು ಕೋಲಾರ ಜಿಲ್ಲೆಯ ಬಗ್ಗೆ ಒಂದು ಪ್ರಶ್ನೆ ಹಾಕಿ ಅಲ್ಲಿರತಕ್ಕ ಕೆಲವು ಒಳ್ಳೆಯ ರಸ್ತೆಗಳನ್ನು ಬಿಟ್ಟು ಉಳಿದ ರಸ್ತೆಗಳಿಗೆ ಟಾರ್, ಮೆಟಲ್ ಮಾಡಿಸಿ ಕೆಲವು ವರ್ಷಗಳವರೆಗೆ ಬಾಳಿಕೆ ಬರುವಂತೆ ಮಾಡಬೇಕಾದರೆ ಸರ್ಕಾರಕ್ಕೆ ಸುಮಾರು ಎಷ್ಟು ದುಡ್ಡು ಖರ್ಚಾಗಬಹುದೆಂದು ಕೇಳಿದರು, ಅದಕ್ಕೆ ಸುಮಾರು ೨೦ ಕೋಟಿ ರೂಪಾಯಿಗಳನ್ನಾದರೂ ನಾವು ಖರ್ಚುಮಾಡಬೇಕಾಗುತ್ತದೆಂದು ಹಿಂದೆ ಸರ್ಕಾರ ಉತ್ತರ ಕೊಟ್ಟಿತ್ತು. ಕೋಲಾರ ಜಿಲ್ಲೆ ಒಂದಕ್ಕೆ ಇಷ್ಟು ಹಣ ಖರ್ಚಾಗುವುದಾದರೆ ನಮ್ಮ ರಾಜ್ಯದಲ್ಲಿರುವ ೧೯ ಜಿಲ್ಲೆಗಳಿಗೂ ಎಷ್ಟು ಬೇಕಾಗುತ್ತದೆಂದು ಲೆಕ್ಕ ಹಾಕಿದರೆ ಸುಮಾರು ೪೦೦ ಕೋಟಿ ರೂಪಾಯಿಗಳಾಗುತ್ತದೆ. ಇಷ್ಟೊಂದು ಹಣ ಖರ್ಚುಮಾಡುವುದು ಎಂದರೆ ಇದೇನೂ ಸಣ್ಣ ವಿಷಯವಲ್ಲ. ಈ ಬಗ್ಗೆ ೩-೪ ದಿವಸಗಳ ಹಿಂದೆ ಒಂದು ಪ್ರಶ್ನೆ ಬಂದಿತ್ತು. ಈಗಿರತಕ್ಕ ರಸ್ತೆಗಳಲ್ಲಿ ಸುಮಾರು ೫೦-೬೦ ಪರ್ಸೆಂಟ್ ರಸ್ತೆಗಳನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ಇಡಬೇಕಾದರೆ ಇದಕ್ಕೆ ಎಷ್ಟು ಹಣ ಬೇಕಾಗುತ್ತದೆ ಎಂದು. ಇದಕ್ಕೆ ಸುಮಾರು ೨೦೦ ಚಿಲ್ಲರೆ ಕೋಟಿ ರೂಪಾಯಿ ಆದರೂ ಬೇಕಾಗುತ್ತದೆ. ಇಷ್ಟು ಹಣಕ್ಕೆ ಗೌರ್ನಮೆಂಟ್ ಆಫ್ ಇಂಡಿಯಾದವರು ಪ್ಲಾನಿಂಗ್ ಕಮಿಷನ್‌ನವರೂ ಒಪ್ಪಿಗೆ ಕೊಡಬೇಕಾಗಿದೆ. ಇದನ್ನು ಕೇಂದ್ರ ಸರ್ಕಾರದವರು ಆಲ್ ಇಂಡಿಯಾ ಪಾಲಿಸಿ ಎಂದು ತಿಳಿದುಕೊಳ್ಳಬೇಕು; ಮತ್ತು ಎಲ್ಲ ರಾಜ್ಯಗಳವರನ್ನೂ ಕರೆದು ಚರ್ಚೆ ಮಾಡಬೇಕು. ನನಗೆ ತಿಳಿದಿರುವಂತೆ ಯೋಜನಾ ಆಯೋಗದವರು ಇರಿಗೇಷನ್‌ಗೆ, ಪವರ್ ಪ್ರೊಡಕ್ಷನ್‌ಗೆ ಹಣವನ್ನು ಕೊಡುತ್ತಿದ್ದಾರೆ. ಇವತ್ತು ನಾವು ಅಪ್ಪರ್ ಕೃಷ್ಣಾ, ಘಟಪ್ರಭಾ, ಮಲಪ್ರಭಾ ಯೋಜನೆಗಳಲ್ಲಿ ನೀರಾವರಿ ಪ್ರದೇಶಗಳನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರ ಜೊತೆಯಲ್ಲಿ ರಸ್ತೆಗಳನ್ನೂ ಸುವ್ಯವಸ್ಥಿತವಾಗಿ ಇಡುವ ಕೆಲಸವನ್ನು ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಯಾವ ರೈತರೂ ಕೂಡ ಕಡಿಮೆ ಖರ್ಚಿನಲ್ಲಿ ತಮ್ಮ ಊರುಗಳನ್ನು ಸೇರುವುದಕ್ಕಾಗುವುದಿಲ್ಲ. ಬಸ್ ಹಾಕಿದರೆ ಅದಕ್ಕೆ ಖರ್ಚುವೆಚ್ಚಗಳು ಜಾಸ್ತಿ ಬರುತ್ತದೆ. ಏಕೆಂದರೆ ಕರಿ ಮಣ್ಣು; ಮತ್ತು ಮರಳು ಮಿಶ್ರ ಇರುವ ಜಾಗಗಳಲ್ಲಿ ರಸ್ತೆಗಳನ್ನು ಮಾಡುವುದು ಬಹಳ ಕಷ್ಟ. ಆ ರಸ್ತೆಗಳಿಗೆ ಜೆಲ್ಲಿ, ಮಣ್ಣು ಹಾಕಿದರೆ ಆ ರಸ್ತೆಗಳೇ ಇದನ್ನೆಲ್ಲಾ ನುಂಗಿಬಿಡುತ್ತವೆ. ಮಲೆನಾಡಿನ ಕೆಲವು ಜಿಲ್ಲೆಗಳಲ್ಲಿ ನಾವು ಎಷ್ಟೇ ಜೆಲ್ಲಿ, ಮಣ್ಣು ಹಾಕಿದರೂ ಅವು ಒಂದು ವರ್ಷವೂ ಕೂಡ ಸರಿಯಾಗಿ ಬಾಳಿಕೆ ಬರುವುದಿಲ್ಲ. ಇವತ್ತು ನಾವು ರಸ್ತೆಗಳನ್ನು ಮಾಡಿ ಕಲ್ಲು. ಜೆಲ್ಲಿ. ಮಣ್ಣು ಹಾಕಿದರೆ ಅವು ಕನಿಷ್ಟ ೨-೩ ವರ್ಷವಾದರೂ ಇರುವಂತೆ ಮಾಡಬೇಕು. ಕೇಂದ್ರ ಸರ್ಕಾರದವರೂ ಮತ್ತು ಯೋಜನಾ ಆಯೋಗದವರೂ ತಮ್ಮ ವಿಚಾರ ಪರಂಪರೆಯನ್ನು ಬದಲಾಯಿಸಿಕೊಂಡು ಎಲ್ಲ ರಾಜ್ಯಗಳವರನ್ನೂ ಕರೆದು ಮೀಂಟಿಗ್ ಮಾಡಿ ನೀರಾವರಿ, ಪವರ್, ಕೈಗಾರಿಕೆ ಇವುಗಳ ಜೊತೆಯಲ್ಲಿಯೇ ರಸ್ತೆಗಳನ್ನೂ ತೆಗೆದುಕೊಳ್ಳದೇ ಹೋದರೆ, ಇದನ್ನು ನಾವೇ ಸರಿಪಡಿಸುವುದಕ್ಕಾಗುವುದಿಲ್ಲ. ನಾವು ಹೊಸದಾಗಿ ಯೋಜನೆ ಮಾಡುವುದಕ್ಕೆ ಹೋದರೆ ಯೋಜನಾ ಆಯೋಗದವರು ಒಪ್ಪಿಗೆ ಕೊಡದೇ ಇರಬಹುದು. ಹಣವನ್ನು ಯಾವರೀತಿ ನಾವು ಶೇಖರಣೆ ಮಾಡಬಹುದು ಎನ್ನುವ ಬಗ್ಗೆ ನಾನು ಕೇಳಿದರೆ ಮಾನ್ಯ ಸದಸ್ಯರು ಸಲಹೆಗಳನ್ನು ಕೊಡುತ್ತಿದ್ದರೋ ಏನೋ, ಆದರೆ ಯಾರೂ ಸಲಹೆಗಳನ್ನು ಕೊಡಲಿಲ್ಲ. ಇವತ್ತು ನಮ್ಮಲ್ಲಿರತಕ್ಕ ರಿಸೋರ್ಸಸ್, ಪವರ್, ಇರಿಗೇಷನ್ ಎಲ್ಲಾ ಲೆಕ್ಕ ಹಾಕಿದರೆ ಸುಮಾರು ೩೦೦-೪೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇಷ್ಟು ಹಣವನ್ನು ಜನರಿಂದ ವಸೂಲ್ಮಾಡಬೇಕಾದರೆ ನಾವು ಹೇವಿ ಟ್ಯಾಕ್ಸ್ ಹಾಕಿದರೆ ಮಾತ್ರ ಸಾಧ್ಯವಾಗುತ್ತದೆ. ಆದರೆ ಎಲ್ಲ ಜನರೂ ಈ ಟ್ಯಾಕ್ಸ್‌ನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರ ಇಂಥ ನೀತಿಯನ್ನು ಏನೂ ಇಟ್ಟುಕೊಂಡಿಲ್ಲ. ಇವತ್ತು ಬಡ್ಜೆಟ್‌ನಲ್ಲಿ ಒಂದು ಕೆಲಸ ಪ್ರಾರಂಭಿಸಿ ೧೦ ರಸ್ತೆಗಳನ್ನು ತೆಗೆದುಕೊಂಡರೆ ಅಷ್ಟನ್ನೂ ಮಾಡಿ ಮುಗಿಸುವುದಕ್ಕಾಗುವುದಿಲ್ಲ. ಅದರಲ್ಲಿ ಎ;ಬಿ;ಸಿ;ಡಿ;ಇ., ಎಂದು ಐದು ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆ. ಈ ಎಲ್ಲ ರಸ್ತೆಗಳಲ್ಲೂ ಒಂದೆರಡು ಕಿಲೋ ಮೀಟರ್ ಕೆಲಸ ಪ್ರಾರಂಭಿಸಿ ಅದಕ್ಕಾಗಿ ನಿಗದಿ ಮಾಡಿದ ಹಣ ಮುಗಿಯುವವರೆಗೂ ಮಾಡಿ ಆಮೇಲೆ ಕೆಲಸ ನಿಲ್ಲಿಸುತ್ತೇವೆ. ಇದು ಸರಿಯಲ್ಲ. ನಾವು ಆಲ್ ವೆದರ್ ರೋಡ್ಸ್ ಮಾಡಬೇಕಾಗುತ್ತದೆ. ಇದನ್ನು ಮಾಡಬೇಕಾದರೆ ಮೊದಲು ನಾವು ಒಂದು ಮಾಸ್ಟರ್ ಪ್ಲಾನ್ ತಯಾರಿಸಬೇಕು. ಇದನ್ನು ತಯಾರಿಸಲು ಆದೇಶ ಕೊಡಬೇಕೆಂದಿದ್ದೇನೆ. ಇವತ್ತು ಒಂದೊಂದು ತಾಲ್ಲೂಕಿನಲ್ಲಿ ಸುಮಾರು ೫೦ ರಿಂದ ನೂರು ಹಳ್ಳಿಗಳಿರುತ್ತವೆ. ಮಲೆನಾಡಿನ ಜಿಲ್ಲೆಗಳಲ್ಲಿ

೧೦೦–೧೨೦ ಹಳ್ಳಿಗಳಿರುತ್ತವೆ. ಅಲ್ಲಿ ೨೦೦–೩೦೦ ಮನೆಗಳಿವೆ ಒಂದೊಂದು ಹಳ್ಳಿಯಿರುತ್ತವೆ. ಉದಾಹರಣೆಗೆ ೧೨೦ ಹಳ್ಳಿಗಳಿರುವ ತಾಲ್ಲೂಕಿನಲ್ಲಿ ಸುಮಾರು ೧೦೦ ಹಳ್ಳಿಗಳಾದರೂ ಮೋಟಾರ್ ವಾಹನದ ಸೌಕರ್ಯ ಕಲ್ಪಿಸಬೇಕು. ಇನ್ನುಳಿದ ೨೦ ಹಳ್ಳಿಗಳಿಗೆ ಅಪ್ರೋಚ್ ರೋಡ್ ಕೊಡಬೇಕು. ಇದನ್ನೆಲ್ಲಾ ಮಾಡಬೇಕಾದರೆ ಒಂದು ಮಾಸ್ಟರ್ ಪ್ಲಾನ್ ಮಾಡಿದರೆ ಮಾತ್ರ ಸಾಧ್ಯ. ಮಾನ್ಯ ಸದಸ್ಯರಾದ ಶ್ರೀಮಾನ್ ಕಡಿದಾಳ್ ದಿವಾಕರ್‌ರವರು ಮರಳು ಮಿಶ್ರಿತ ಹಾಗೂ ಕರಿ ಮಣ್ಣು ಇರುವ ಕಡೆಗಳಲ್ಲಿ ರಸ್ತೆಗಳಿಗೆ ಟಾರ್ ಮಾಡಿಸುವುದು ಒಳ್ಳೆಯದೆಂದು ಒಂದು ಸಲಹೆ ಕೊಟ್ಟಿದ್ದಾರೆ.

ಇದಕ್ಕೆ ಹಣ ಬೇಕು. ಮಾಸ್ಟರ್ ಪ್ಲಾನ್ ಮಾಡಿ ಬಿಟ್ಟು, ಇದಕ್ಕೆ ನಾವು ಹಣವನ್ನು ಕೂಡಿ ಹಾಕಬೇಕು. ಇದಕ್ಕೆ ನಮ್ಮಲ್ಲಿರತಕ್ಕ ಎಲ್ಲಾ ರಿಸೋರ್ಸ್‌ಗಳಿಂದಲೂ ಎಷ್ಟೆಷ್ಟು ಸಾಧ್ಯವೋ ಅಷ್ಟು ಹಣವನ್ನು ನಾವು ಹಾಕಿ ಇದರ ಮೇಲೆ ಖರ್ಚು ಮಾಡಬೇಕಾಗುತ್ತದೆ. ವರ್ಲ್ಡ್ ಬ್ಯಾಂಕಿನಿಂದ ಇದಕ್ಕಾಗಿ ಹಣವನ್ನು ಪಡೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಇದರ ಬಡ್ಡಿ ದರ ಮುಕ್ಕಾಲು ಅಥವಾ ಒಂದು ಪರ್ಸೆಂಟ್ ಇರಬಹುದು. ಯೋಜನಾ ಆಯೋಗದವರು ಇದಕ್ಕೆ ಒಪ್ಪುವುದಾದರೆ, ನಾವು ೪೦೦ ಕೋಟಿ ರೂಪಾಯಿಗಳು ಅಥವಾ ೨೦೦ ಕೋಟಿ ರೂಪಾಯಿಗಳಾದರೂ ಕನಿಷ್ಟ ಪಕ್ಷ ಪಡೆದುಕೊಂಡು ಈಗಿರುವ ರೋಡುಗಳನ್ನಾದರೂ ಸ್ವಲ್ಪ ಮಟ್ಟಿಗೆ ಅಂದರೆ ನೂರಕ್ಕೆ ೭೫ ಭಾಗದಷ್ಟು ರಸ್ತೆಗಳನ್ನು ನಾವು ತೆಗೆದುಕೊಳ್ಳಬಹುದು. ಈ ಕೆಲಸವನ್ನು ನಾವು ಮಾಡಿದರೆ, ಬಹುಶಃ ಇಷ್ಟೊಂದು ಬೇಡಿಕೆ ಇಷ್ಟೊಂದು ತೊಂದರೆ ನಮಗೆ ಇನ್ನು ಮುಂದೆ ಇರಲಾರದು ; ಎನ್ನುವ ಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇದಕ್ಕಾಗಿ ನಾವು ಆಯೋಜ ಆಯೋಗದವರ ಮೇಲೆ ಕೇಂದ್ರ ಸರ್ಕಾರದವರ ಒತ್ತಡವನ್ನು ನಾವು ತರಬೇಕಾಗಿದೆ. ಈಗ ಅವರು ಏನು ಒಂದು ವಿಚಾರವನ್ನು ಇಟ್ಟುಕೊಂಡಿದ್ದಾರೆ ಅದನ್ನು ನಾವು ಸಧ್ಯದಲ್ಲಿಯೇ ಬದಲಾವಣೆ ಮಾಡಬೇಕಾಗಿದೆ. ಅಷ್ಟೇ ಅಲ್ಲ, ಎಲ್ಲಾ ರಾಜ್ಯಗಳಿಗೂ ಸಂಬಂಧಪಟ್ಟ ಹಾಗೆ ಒಂದು ನೀತಿಯನ್ನು ಇದರ ಬಗ್ಗೆ ಕೇಂದ್ರ ಸರ್ಕಾರದವರು ರೂಪಿಸಬೇಕು ಎನ್ನುವ ಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇದರ ಬಗ್ಗೆ ನಾನು ಪ್ರಯತ್ನ ಮಾಡುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಏನು ಒಂದು ವಿಚಾರವನ್ನು ವ್ಯಕ್ತ ಮಾಡಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಬಗ್ಗೆ ತಾವು ಒಂದು ನಿರ್ಧಿಷ್ಟವಾದ ಯೋಜನೆಯನ್ನು ಇಟ್ಟುಕೊಂಡು ಈ ಮನೆಯಲ್ಲಿ ಒಂದು ನಿರ್ಣಯ ತೆಗೆದುಕೊಂಡರೆ ಅದಕ್ಕೆ ನಾವು ಸಂಪೂರ್ಣ ಬೆಂಬಲ ಕೊಡುತ್ತೇವೆ. ತಾವು ಇದರ ಜೊತೆಗೆ ದೇಶಕ್ಕೆ ಒಂದು ಮಾರ್ಗದರ್ಶನವಾಗುವಂತೆ ಈ ಯೋಜನೆಯನ್ನು ತೆಗೆದುಕೊಂಡು ಬನ್ನಿ, ಇದಕ್ಕೆ ನಮ್ಮ ಸಹಾನುಭೂತಿಯ ಬೆಂಬಲ ಕೊಡುವುದಕ್ಕೆ ತಯಾರಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ವಿರೋಧಪಕ್ಷದ ನಾಯಕರ ಸಹಕಾರಕ್ಕೆ, ಹಾಗೂ ಸದಸ್ಯರ ಸಹಕಾರಕ್ಕೆ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರು ನಾನು ಹೇಳಿದಂಥ ವಿಚಾರವನ್ನು ಸ್ವಾಗತ ಮಾಡಿದ್ದಾರೆ, ಅದಕ್ಕೋಸ್ಕರ ನಾನು ನನ್ನ ಪ್ರಯತ್ನವನ್ನು ಮುಂದುವರಿಸುತ್ತೇನೆ. ಪೂರ್ವಭಾವಿಯಲ್ಲಿ ನಾನು ಎಲ್ಲಾ ಪಕ್ಷದ ನಾಯಕರನ್ನು, ಸಭೆ ಕರೆದು ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಒಂದು ವೇಳೆ ಹೀಗೆ ತಂದ ಹಣವನ್ನು ನಾವು ಹೇಗೆ ತೀರಿಸಬೇಕು ಎನ್ನುವ ವಿಚಾರ ಬಂದರೆ ಅದನ್ನು ಸಭೆಯಲ್ಲಿ ನಾವು ವಿಚಾರ ಮಾಡಿ, ಹೇಗೆ ತೀರಿಸಬೇಕು ಎನ್ನುವುದನ್ನು ತೀರ್ಮಾನ ತೆಗೆದುಕೊಳ್ಳಬೇಕು ಎಂದು ನಾನು ಸಭೆಯಲ್ಲಿ ಇದನ್ನು ಪ್ರಕಟ ಮಾಡುತ್ತಿದ್ದೇನೆ. ಅದಕ್ಕಾಗಿ ಈ ಸದನದ ಸಭೆಯು ಮುಕ್ತಾಯವಾಗುವುದರೊಳಗೆ ತಮ್ಮನ್ನೂ ಕೂಡ ಸಭೆಗೆ ಕರೆಯುತ್ತಿದ್ದೇನೆ. ಆ ಸಂದರ್ಭದಲ್ಲಿ ನಾವುಗಳು ಇದರ ಬಗ್ಗೆ ಚರ್ಚೆ ಮಾಡಿ ಒಂದು ಅಂತಿಮ ರೂಪರೇಖೆಯನ್ನು ತಯಾರು ಮಾಡಿ, ಸಾಲವನ್ನು ೧೦–೨೦ ವರ್ಷದಲ್ಲಿ ತೀರಿಸುವಂತೆ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳಬೇಕಾಗಿದೆ. ಈ ಎಲ್ಲಾ ಹಣವನ್ನು ರೋಡು ಮತ್ತು ಬ್ರಿಡ್ಜ್‌ಸ್‌ಗಳಿಗೆ ಖರ್ಚು ಮಾಡಬೇಕು ಎಂದು ಮಾಡಿದ್ದೇವೆ. ಮೈನರ್ ಇರಿಗೇಷನ್‌ಗೆ ಮುಕ್ಕಾಲು ಪರ್ಸೆಂಟ್ ಬಡ್ಡಿ ದರದಲ್ಲಿ ೫೦ ವರ್ಷಗಳಲ್ಲಿ ಸಾಲ ತೀರಿಸುವಂಥ ಒಂದು ಯೋಜನೆ ಇದೆ. ಅದರ ಪ್ರಕಾರ ಲೆಕ್ಕ ಹಾಕುವುದಾದರೆ, ಸುಮಾರು ೫೦೦ ಕೋಟಿ ರೂಪಾಯಿಗಳನ್ನು ನಾವು ತೆಗೆದುಕೊಂಡರೆ ಪ್ರತಿ ವರ್ಷ ಬಡ್ಜೆಟ್ಟಿನಲ್ಲಿ ಇದಕ್ಕಾಗಿ ೧೦ ಕೋಟಿ ರೂಪಾಯಿಳನ್ನು ಪ್ರಾವಿಷನ್ ಮಾಡಿಕೊಂಡು ಇಡಬೇಕು. ಇದು ನನ್ನ ಅಭಿಪ್ರಾಯ. ೧೦ ಕೋಟಿ ರೂಪಾಯಿಗಳಂತೆ ನಾವು ಪ್ರತಿ ವರ್ಷ ಕೊಡುತ್ತಾ ಹೋದರೆ ಅದು ೫೦ ವರ್ಷಗಳಲ್ಲಿ ೫೦೦ ಕೋಟಿ

ರೂಪಾಯಿಗಳು ತೀರಿ ಹೋಗುತ್ತದೆ. ಇಂಥ ಒಂದು ತೀರ್ಮಾನವನ್ನು ನಾವು ಮಾಡಬೇಕಾಗಿದೆ. ಇದನ್ನು ನಾವು ಅಂತಿಮವಾಗಿ ಆಳವಾಗಿ ಅಭ್ಯಾಸ ಮಾಡಿ ಒಂದು ವ್ಯವಸ್ಥೆ ಮಾಡತಕ್ಕ ಜವಾಬ್ದಾರಿ ನಮ್ಮದಾಗಿದೆ.

ಐ.ಸಿ.ಆರ್.ಸಿ., ರೋಡ್ಸ್ ಇತ್ಯಾದಿಗಳಿಗೆ ಸುಮಾರು ಒಂದು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಒಂದೊಂದು ತಾಲ್ಲೂಕಿಗೆ ಇಟ್ಟಿದ್ದೇವೆ. ಇದು ಏತಕ್ಕೂ ಸಾಲದು ಎಂದು ತಿಳಿದು ಬಹಳ ಕಷ್ಟಪಟ್ಟು ಮೂರು ಲಕ್ಷ ಚಿಲ್ಲರೆ ರೂಪಾಯಿಗಳಿಗೆ ಇದನ್ನು ಏರಿಸತಕ್ಕ ಪ್ರಯತ್ನವನ್ನು ಮಾಡಿದ್ದೇವೆ. ಇದಕ್ಕಿಂತ ಹೆಚ್ಚಿಗೆ ಪ್ರಾವಿಷನ್ ಮಾಡುವುದಕ್ಕೆ ಸಾಧ್ಯವೇ ಇಲ್ಲ, ಇದಕ್ಕೆ ಜಾಸ್ತಿ ಹಣವನ್ನು ಒದಗಿಸಬೇಕು ಎಂದು ನಾನು ಮಾನ್ಯ ಹಣಕಾಸಿನ ಮಂತ್ರಿಗಳ ಹತ್ತಿರವೂ ನಾವು ಮಾತನಾಡಿದ್ದೇವೆ. ಈಗ ಒದಗಿಸಿರತಕ್ಕ ಹಣದಿಂದ ನಾವು ಮಿಸ್ಸಿಂಗ್ ಲಿಂಕಿಂಗ್ ರೋಡ್ಸ್‌ಗಳನ್ನು, ಸಣ್ಣ ಕಾಸ್‌ವೇಗಳನ್ನು ಮಾಡುವುದಕ್ಕಾಗುವುದಿಲ್ಲ. ಒಂದು ಸಣ್ಣ ಬಡ್ಜೆಟ್ಟನ್ನು ನಾವು ಪ್ರತ್ಯೇಕವಾಗಿ ಕಟ್ಟುವುದಕ್ಕೆ ಅವಕಾಶವಿಲ್ಲವಾಗಿದೆ. ಇಂಥ ಪರಿಸ್ಥಿತಿಯಲ್ಲಿ ನಾವು ಇವೆಲ್ಲವನ್ನೂ ಸರಿತೂಗಿಸಬೇಕಾದರೆ. ನಮಗೆ ಹೆಚ್ಚಿನ ಹಣ ಬೇಕು, ಇದಕ್ಕಾಗಿ ೨–೩ ಕೋಟಿ ರೂಪಾಯಿಗಳನ್ನು ಜಾಸ್ತಿಯಾಗಿ ಕೊಡತಕ್ಕ ಅಭಿಪ್ರಾಯವನ್ನು ನಾವು ಇಟ್ಟುಕೊಂಡಿದ್ದೇವೆ.

ತಮಗೆ ಗೊತ್ತಿರುವ ಹಾಗೆ ಐ ಸಿ ಆರ್ ಸಿ ರೋಡ್ಸ್‌ಗಳಿಗೆ ನಾವು ಈ ವರ್ಷ ೭೮–೭೯ರಲ್ಲಿ ಸುಮಾರು ೨೦೦ ಕಿಲೋ ಮೀಟರ್ ರಸ್ತೆಗಳನ್ನು ತೆಗೆದುಕೊಳ್ಳಬೇಕು ಎಂದು ಇಟ್ಟುಕೊಂಡಿದ್ದರೂ ಇದಕ್ಕೆ ಒದಗಿಸಿರತಕ್ಕ ಹಣ ಬಹಳ ಕಡಿಮೆ. ಇದಕ್ಕೂ ನಾವು ಒಂದು ಯೋಜನೆಯನ್ನು ಹಾಕಿಕೊಂಡು ೮೦ ಕಿಲೋ ಮೀಟರ್ ರಸ್ತೆಯನ್ನಾದರೂ ತೆಗೆದುಕೊಳ್ಳಬೇಕು ಎಂದು ನಾವು ತೀರ್ಮಾನ ಮಾಡಿದ್ದೇವೆ. ಈ ಯೋಜನೆಯ ಪ್ರಕಾರ ನಾವು ಇದರ ಮೊದಲನೆಯ ಸ್ಟೇಜನ್ನು ಮುಗಿಸುವುದಕ್ಕೆ ಸುಮಾರು ೪೮ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ನಾವು ಸಿ.ಡಿ. ರೋಡುಗಳನ್ನು ಮಾಡಿಸುವುದಕ್ಕೋಸ್ಕರ ಸುಮಾರು ೧೫.೭೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದೂ ಸಹ ಮಾರ್ಚ್ ೭೮ರ ಕೊನೆಯವರೆಗೆ ಮಾತ್ರ. ಇನ್ನು ನಮಗೆ ಸುಮಾರು ೩೨ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಸುಮಾರು ೨.೬೪ ಲಕ್ಷ ರೂಪಾಯಿಗಳು ಸೇತುವೆಗಳಿಗೆ ಬೇಕಾಗುತ್ತದೆ. ಈ ವಿಚಾರದಲ್ಲಿ ನಾವು ಅಂಕಿ ಅಂಶಗಳನ್ನು ನಮ್ಮ ವರದಿಯಲ್ಲಿ ಹೇಳಿದ್ದೇವೆ. ಪರ್ಫಾರ್ಮೆನ್ಸ್ ಬಡ್ಜೆಟ್‌ನ್ನು ನೋಡಿದರೆ ಈ ಎಲ್ಲಾ ವಿಚಾರಗಳು ಗೊತ್ತಾಗುತ್ತದೆ. ಇದಕ್ಕಾಗಿ ಇಟ್ಟಿರತಕ್ಕ ಹಣದಿಂದ ಏನೂ ಮಾಡುವುದಕ್ಕಾಗುವುದಿಲ್ಲ.

ಈ ತೊಂದರೆಯನ್ನು ನಾವು ಗಮನಿಸಿ, ಎಲ್ಲಾ ಕ್ಷೇತ್ರದ ಸದಸ್ಯರಿಗೂ ಅವರವರ ಕ್ಷೇತ್ರದಲ್ಲಿ ಅತ್ಯಾವಶ್ಯಕವಾಗಿರುವ ನಾವು ಐದು ಕಿಲೋ ಮೀಟರ್ ರಸ್ತೆಯ ಕೆಲಸವನ್ನು ನಾವು ತೆಗೆದುಕೊಳ್ಳುತ್ತೇವೆ ಅದನ್ನು ಸೂಚಿಸಬೇಕು ಎಂದು ಕೇಳಿಕೊಂಡಿದ್ದೇವೆ. ಕೆಲವರು ಇದಕ್ಕೆ ಉತ್ತರ ಕೊಟ್ಟಿದ್ದಾರೆ, ಇನ್ನೂ ಕೆಲವರು ಕೊಡುವವರಿದ್ದಾರೆ. ಇಷ್ಟು ಕೆಲಸವನ್ನು ನಾವು ಮಾಡಬೇಕಾದರೂ ಸುಮಾರು ೬–೭ ಕೋಟಿ ರೂಪಾಯಿಗಳು ಬೇಕಾಗಂತ್ತದೆ. ಅಂದರೆ ಒಂದೊಂದು ಕ್ಷೇತ್ರಕ್ಕೆ ಸುಮಾರು ೫೦ ಸಾವಿರ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ನಾವು ಲೆಕ್ಕ ಹಾಕುವುದಾದರೆ ರೋಡ್ಸ್ ಮತ್ತು ಬ್ರಿಡ್ಜಸ್ ಫಂಡ್ಸ್ ಏನು ಇದೆ, ಅದು ಸಾಲದು. ಕೆಲವು ಕಡೆ ಷುಗರ್‌ಕೇನ್ ಸೆಸ್ ರೋಡ್ಸ್, ಕೋ–ಆಪರೇಟೀವ್ ಮಾರ್ಕೆಟಿಂಗ್ ಸೆಸ್‌ನಿಂದ ಮೇಂಟೇನ್ ಮಾಡತಕ್ಕ ರಸ್ತೆಗಳು ಇದೆ. ಇದಕ್ಕೋಸ್ಕರ ನಿಧಿ ಏನು ಇದೆ, ಅದರಿಂದ ನಾವು ಈ ವರ್ಷ ೪ ಕೋಟಿ ರೂಪಾಯಿಗಳನ್ನು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ. ಮೋಟಾರ್ ವೆಹಿಕಲ್ಸ್‌ನಿಂದ ಸುಮಾರು ಎರಡು ಕೋಟಿ ರೂಪಾಯಿಗಳನ್ನು ನಾವು ಲೆಕ್ಕ ಹಾಕಿಕೊಂಡಿದ್ದೇವೆ, ಇದೂ ಕೂಡ ಸಾಕಾಗುವುದಿಲ್ಲ. ಅದಕ್ಕಾಗಿಯೇ ನಾವು ಮಾನ್ಯ ಸದಸ್ಯರುಗಳಿಗೆ ಪತ್ರ ಬರೆದಿದ್ದುದು. ಪ್ರಾಮುಖ್ಯವಾದ ಕಡೆಗಳಲ್ಲಿ ಮಾತ್ರ ಆದ್ಯತೆ ಕೊಟ್ಟು ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಇದ್ದೇವೆ. ನಾನು ಇನ್ನು ಇದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ.

ಸೇತುಗಳ ಬಗ್ಗೆಯೂ ಪತ್ರ ಬರೆದಿದ್ದೇವೆ. ಮಲೆನಾಡು ಪ್ರದೇಶದಲ್ಲಿ ಸಣ್ಣ ಪುಟ್ಟ ಸೇತುವೆಗಳ ಅವಶ್ಯಕತೆ ಬಹಳ ಇದೆ. ಅಲ್ಲಿಯ ಮಕ್ಕಳು ಶಾಲೆಗೆ ಹೋಗಬೇಕಾದರೂ ಹಳ್ಳಕೊಳ್ಳಗಳನ್ನು ದಾಟಿಕೊಂಡು ಹೋಗಬೇಕಾಗುತ್ತದೆ. ಆದರೂ ಕೆಲವು ಕಡೆಗಳಲ್ಲಿ ಹಳ್ಳಗಳಲ್ಲಿ ಮಳೆಗಾಲದಲ್ಲಿ ವಿಪರೀತ

ನೀರು ಹರಿಯುತ್ತಿರುತ್ತದೆ ಹಾಗೆಯೇ ಸಣ್ಣ ಪುಟ್ಟ ಸೇತುವೆಗಳ ಬಗ್ಗೆ ಹೇಳುವುದಾದರೆ, ಈ ಬಗ್ಗೆ ೧೯ ಜಿಲ್ಲೆಯ ಎಲ್ಲ ಮಿತ್ರರಿಗೂ ಪತ್ರ ಬರೆದು ಉತ್ತರ ಪಡೆದಿದ್ದೇನೆ, ಇನ್ನು ಕೆಲವು ಉತ್ತರಗಳು ಬರಬೇಕಾಗಿವೆ. ಅವನ್ನು ಅತಿ ಶೀಘ್ರವಾಗಿ ಕಳುಹಿಸಿಕೊಟ್ಟರೆ, ಈಗಿರತಕ್ಕ ನೀತಿಯ ಪ್ರಕಾರ ಕರ್ನಾಟಕ ರೋಡ್ಸ್ ಅಂಡ್ ಬ್ರಿಡ್ಜಸ್ ಫಂಡಿನಿಂದ ತಕ್ಷಣ ಆ ಕಾರ್ಯವನ್ನು ಪ್ರಾರಂಭ ಮಾಡತಕ್ಕ ಪ್ರಯತ್ನ ಮಾಡುತ್ತೇನೆ. ಇನ್ನು ಮಾನ್ಯ ದಿವಾಕರ್‌ರವರು ಮಲೆನಾಡು ಪ್ರದೇಶಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ, ಅದೇನೆಂದರೆ, ಮೈಸೂರು ಪವರ್ ಕಾರ್ಪೊರೇಷನ್‌ನವರು ಕೊಡತಕ್ಕ ರಸ್ತೆಗಳನ್ನು ನೀವು ತೆಗೆದುಕೊಳ್ಳಬೇಕು ಎಂದು. ಅದಕ್ಕೆ ನಾನು ಹೇಳುವುದು, ಈಗಾಗಲೇ ನಮ್ಮಲ್ಲಿ ಹಣ ಇಲ್ಲ, ಇರತಕ್ಕದ್ದು ತಮಗೆ ಗೊತ್ತಿರಬಹುದು. ಇರಿಗೇಷನ್ ಟ್ರಾನ್ಸ್‌ಪೋರ್ಟ್ಸ್ ಏನು ಇತ್ತು ಅದನ್ನೂ ಕೂಡ ನಾವು ಅವರಿಗೇ ಕೊಟ್ಟಿದ್ದೇವೆ. ಅವರು ತಮ್ಮ ಕೆಲಸವನ್ನು ರೆಡಿ ಮಾಡಿ ನಮಗೆ ಮೆಯಿಂಟೇನ್ ಮಾಡಲಿಕ್ಕೆ ಕೊಡುತ್ತಾರೆ. ಆದರೆ ನಮ್ಮ ಹತ್ತಿರವೇ ಹಣ ಇಲ್ಲದೆ ಇದ್ದರೆ ನಾವು ಏನು ಮಾಡುವುದು ? ಇನ್ನು ಮೈದಾನ ಪ್ರದೇಶಗಳಲ್ಲೂ ಕೂಡ ಸಣ್ಣ ಪುಟ್ಟ ಬ್ರಿಡ್ಜ್‌ಗಳ ಅವಶ್ಯಕತೆ ಇದೆಯೆಂದು ಪತ್ರ ಒಲೆದಿದ್ದಾರೆ ಆ ಕೆಲಸವನ್ನು ಕೂಡ ಮಾಡಿಕೊಡಲಾಗುವುದು. ಈ ಸಂದರ್ಭದಲ್ಲಿ, ಉಳಿದಿರತಕ್ಕ ವಿವರಗಳಿಗೆ ಹೋಗದಿದ್ದರೂ ಕೂಡ ಈ ಇಲಾಖೆಯ ಆಡಳಿತದ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಈ ಬಗ್ಗೆ ಮಾನ್ಯ ಸದಸ್ಯರುಗಳೂ ಕೂಡ ಕೆಲವು ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ. ಈ ಬಗ್ಗೆ ನಾನೂ ಕೂಡ ವಿಚಾರ ಮಾಡಿದ್ದೇನೆ ; ಕಳೆದ ೮–೧೦ ವರ್ಷಗಳ ಕಾಲ ವಿರೋಧ ಪಕ್ಷದ ಸದಸ್ಯನಾಗಿದ್ದಾಗ ಈ ಬಗ್ಗೆ ಅನೇಕ ಗಂಟೆಗಳನ್ನು ಅನೇಕ ದಿವಸಗಳನ್ನು ಖರ್ಚು ಮಾಡಿರುವ ಸದಸ್ಯರುಗಳ ಪೈಕಿ ನಾನು ಒಬ್ಬ.

೧–೩೦ ಪಿ.ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಳೆದ ೭–೮ ವರ್ಷಗಳಿಂದ ಆ ಕಡೆ ಇದ್ದಿರೋ ಈ ಕಡೆ ಇದ್ದಿರೋ ಅರ್ಥವಾಗುತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ತಿಳಿಸುತ್ತಿದ್ದೇನೆ, ಈ ಇಲಾಖೆಯ ಕೆಲಸವನ್ನು ನಾವು ಸರಿ ಮಾಡಬೇಕೆಂಬ ಭಾವನೆಯನ್ನು ಇಟ್ಟುಕೊಂಡಿದ್ದೇನೆ. ಈ ಇಲಾಖೆ ಹಣವನ್ನು ಖರ್ಚು ಮಾಡುವ ಬಗ್ಗೆ ಹಲವಾರು ದೂರುಗಳು ಬಂದಿವೆ. ಕೆಲವು ಮಾನ್ಯ ಸದಸ್ಯರುಗಳು ಹೇಳಿದರು, ನಮ್ಮ ಕ್ಷೇತ್ರದಲ್ಲಿ ಶಾಲಾ ಕಟ್ಟಡಗಳಿಲ್ಲ, ಅದನ್ನು ಪಿ.ಡಬ್ಲ್ಯು.ಡಿ.ಯವರು ಕಟ್ಟಿಸಿಕೊಡಬೇಕು ಎಂದು. ಆದರೆ ಅದು ನಮ್ಮ ಕೆಲಸ ಅಲ್ಲ. ಈ ಇಲಾಖೆ ಬೇರೆ ಇಲಾಖೆಯ ಏಜೆಂಟ್ ಅಲ್ಲ. ಶಾಲಾ ಕಟ್ಟಡಗಳು ಬೇಕೆಂದು ಸಂಬಂಧಪಟ್ಟ ಇಲಾಖೆಯವರು ಹಣವನ್ನು ಕೊಟ್ಟರೆ ನಾವು ಕಟ್ಟಿಸಿಕೊಡುತ್ತೇವೆ. ಆದ್ದರಿಂದ ಆ ಇಲಾಖೆಗೆ ಹೇಳಿ ಹಣವನ್ನು ಕಳುಹಿಸಿಕೊಡಿ, ನಾವು ಆ ಕೆಲಸವನ್ನು ಜವಾಬ್ದಾರಿಯುತವಾಗಿ ಮಾಡಿಕೊಡುತ್ತೇವೆ. ಈ ಇಲಾಖೆ ಏನೇನು ಕೆಲಸ ಮಾಡಿಲ್ಲದೆಂದು ಕೆಲವರು ಹೇಳಿದರೂ ಕೂಡ, ನಾವು ಮಾತ್ರ ಈ ಇಲಾಖೆ ಏನೇನು ಕೆಲಸ ಮಾಡಿಲ್ಲ ಎಂಬ ಭಾವನೆಯನ್ನು ಇಟ್ಟುಕೊಂಡಿಲ್ಲ. ಕುದುರೆಮುಖದ ರಸ್ತೆಗಳನ್ನು ಮಾಡುವಾಗ ಟೈಂ ಷೆಡ್ಯೂಲ್ ಕೀಪ್ ಅಪ್ ಮಾಡಲಿಲ್ಲ ಎನ್ನತಕ್ಕಂತಹ ಆಪಾದನೆ ನಾನಾ ಅಗಾಧವಾದ ಅಪಾದನೆಗಳ ಪೈಕಿ ಅದೂ ಒಂದು. ನಾನು ಮಂತ್ರಿಯಾದ ಬಳಿಕ ಒಂದೆರಡು ವಿಷಯಗಳನ್ನು ಕ್ವೋಟ್ ಮಾಡಬಹುದೆಂದು ಇಟ್ಟುಕೊಂಡಿದ್ದೇನೆ. ತಮಗೆ ಗೊತ್ತಿರುವ ಹಾಗೆ ಆ ರಸ್ತೆಗೆ ಕೋಟಿಗಟ್ಟಲೆ ಹಣ ಖರ್ಚಾಗಿದೆ, ಜೊತೆಗೆ ಕಾಲಕ್ಕೆ ಸರಿಯಾಗಿ ಏನು, ಅದಕ್ಕಿಂತಲೂ ಮೊದಲೇ ಮುಗಿಸಿಕೊಟ್ಟಿದ್ದೇವೆ. ಈ ಕುದುರೆಮುಖದ ರಸ್ತೆಯ ಬಗ್ಗೆ ಪತ್ರಿಕೆಗಳಲ್ಲೂ ಕೂಡ ಬರೆದಿದ್ದಾರೆ. ಅದನ್ನೆಲ್ಲ ಈಗ ಓದುತ್ತಾ ಹೋಗುವುದಿಲ್ಲ. ಒಟ್ಟಿನಲ್ಲಿ, "ಇಂಥ ಯೋಜನೆಯನ್ನು ಲೋಕೋಪಯೋಗಿ ಇಲಾಖೆಯವರು ಇಷ್ಟು ಚೆನ್ನಾಗಿ ಮಾಡುತ್ತಾರೆಂದು ಗೊತ್ತಿರಲಿಲ್ಲ, ಅವರು ಇಷ್ಟೊಂದು ಶಕ್ತಿಯುತರಾಗಿದ್ದಾರೆಂದು ಗೊತ್ತಿರಲಿಲ್ಲ ; ಬಹಳ ಚೆನ್ನಾಗಿ ಕೆಲಸ ಮಾಡಿಕೊಟ್ಟಿದ್ದಾರೆ, ಕ್ವಾಲಿಟಿ ಆಫ್ ವರ್ಕ್ ಮೆಯಿಂಟೇನ್ ಮಾಡಿದ್ದಾರೆ, ಜೊತೆಗೆ ವೇಳೆಗೆ ಸರಿಯಾಗಿ ಮಾಡಿಕೊಟ್ಟಿದ್ದಾರೆ" ಎಂದು ಹೇಳಿದ್ದಾರೆ. ಎರಡನೆಯದಾಗಿ, ಹೈಕೋರ್ಟ್ ಬಿಲ್ಡಿಂಗಿಗೆ ಬೆಂಕಿ ಬಿದ್ದು ಸುಟ್ಟು ಹೋಗಿ ಅನೇಕ ಕೆಲಸ ಕಾರ್ಯಗಳು ಸ ಗಿತಗೊಂಡಿದ್ದವೆಂಬುದು ತಮಗೆಲ್ಲ ಗೊತ್ತಿದೆ. ಅದು ನೂರಾರು ವರ್ಷದ ಕಟ್ಟಡ, ಮರದ ಚಾವಣಿಗಳೆಲ್ಲ ಬಿದ್ದು ಹೋಗಿದ್ದವು. ಹಳೆ ಕಟ್ಟಡವನ್ನು ರಿಪೇರಿ ಮಾಡುವುದು ಅಷ್ಟು ಸುಲಭವಲ್ಲ. ಆ ಕಾರ್ಯವನ್ನು ನಾವು ಅತಿ ಶೀಘ್ರವಾಗಿ ಕೈಗೊಂಡು ಮಾಡಿಸಿರುವುದನ್ನು ಬೇಕಾದರೆ ಮಾನ್ಯ ಸದಸ್ಯರುಗಳು ಹೋಗಿ ನೋಡಿಕೊಂಡು ಬರಬಹುದು. ಆ ಕೆಲಸವನ್ನು ಬಹಳ ಚೆನ್ನಾಗಿ ಮಾಡಿದ್ದಾರೆಂದು

ಸಾರ್ವಜನಿಕರು ಅಭಿಪ್ರಾಯಪಟ್ಟಿರುವುದರ ಜೊತೆಗೆ ಅಲ್ಲಿನ ನ್ಯಾಯಾಧೀಶರುಗಳು ಹಾಗೂ ಮುಖ್ಯ ನ್ಯಾಯಾಧೀಶರು ಬಹಳ ಹೊಗಳಿಕೆಯ ಮಾತುಗಳನ್ನಾಡಿದ್ದಾರೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ೨ ಸಾರಿ ಅಲ್ಲಿಗೆ ಹೋಗಿ ಬಂದಿದ್ದೇನೆ. ನ್ಯಾಯಾಧೀಶರ ಕೊಠಡಿಗಳು, ಆಫೀಸುಗಳು, ಕೋರ್ಟ್ ಹಾಲುಗಳು ಪ್ರತಿಯೊಂದನ್ನು ಕೂಡ ಬಹಳ ವ್ಯವಸ್ಥಿತವಾಗಿ ಈಗಿನ ಮಟ್ಟಕ್ಕೆ ಮಾಡಿದ್ದಾರೆ. ಅದರ ಬಗ್ಗೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಪತ್ರ ಕೂಡ ಬರೆದಿದ್ದಾರೆ. ಗೊತ್ತುಪಡಿಸಿದ್ದ ಕಾಲಕ್ಕಿಂತ ೩-೪ ತಿಂಗಳು ಮುಂಚೆಯೇ ಆ ಕೆಲಸವನ್ನು ಮುಗಿಸಿಕೊಟ್ಟಿದ್ದೇವೆ. ಅದು ಬಹಳ ಮುಖ್ಯವಾದುದು. ಇನ್ನೂ ಹೆಚ್ಚಿಗೆ ಉದಾಹರಣೆಗಳು ಬಂಗಾರಪ್ಪನವರ ಹತ್ತಿರ ಇಲ್ಲವೇ ಎಂದರೆ, ಇವೆ, ಆದರೆ ಅಘಾಧವಾಗಿಲ್ಲವೆಂಬ ಮಾತನ್ನು ಒಪ್ಪುತ್ತೇನೆ. ಆದ್ದರಿಂದ, ಒಟ್ಟಿನಲ್ಲಿ, ಸರಿಯಾದ ಒಂದು ವಾತಾವರಣವನ್ನು ಸೃಷ್ಟಿ ಮಾಡತಕ್ಕದ್ದು ನಮ್ಮ ಕೈಯಲ್ಲಿದೆ, ನಮ್ಮ ರಾಜ್ಯಕ್ಕೆ ಅಂಥ ಒಂದು ಶಕ್ತಿ ಇದೆ, ಸಾಧ್ಯತೆ ಇದೆ ಎಂಬ ಮಾತನ್ನು ಹೇಳಬಯಸುತ್ತೇನೆ. ಈ ಇಲಾಖೆಯಲ್ಲಿ ಲಂಚಗುಳಿತನ ಜಾಸ್ತಿಯಾಗಿದೆ, ಎಸ್ಟಿಮೇಟ್ ಮಾಡಬೇಕಾದರೆ, ಬಿಲ್ಸ್ ಪಾವತಿ ಮಾಡಬೇಕಾದರೆ ಲಂಚ ಕೇಳುತ್ತಾರೆಂಬುದು ಸರ್ವೇ ಸಾಮಾನ್ಯವಾದೆಂದು ತಮ್ಮ ಅನುಭವದಿಂದ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ ಈ ಸಂದರ್ಭದಲ್ಲಿ, ಮಾನ್ಯ ರೆಡ್ಡಿಯವರು ಎಂ. ಇ. ಗ್ರಾಜುಯೇಟ್ ಎಂದು ಕೇಳಿದೆ, ಬಹಳ ಸಂತೋಷ. ಅವರಂತಹ ಸದಸ್ಯರು ಹಾಗೂ ಇತರ ಅನುಭವ ಇರತಕ್ಕವರು ಈ ಇಲಾಖೆಗೆ ಅವಶ್ಯಕವಾದ ಸಲಹೆಗಳನ್ನು ಕೊಡಬೇಕು. ಈ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಮುಗಿದ ಬಳಿಕ ಒಂದು ಸಲಹಾ ಸಮಿತಿಯನ್ನು ರಚಿಸಬೇಕೆಂದಿದ್ದೆ. ಅದನ್ನು ಇನ್ನು ಒಂದು ವಾರದೊಳಗೆ ಮಾಡುತ್ತೇನೆ. ಅದರಲ್ಲಿ ಇಂತಹ ಸದಸ್ಯರುಗಳ ಸಲಹೆಯನ್ನು ಪಡೆಯಬೇಕೆಂಬ ಆಸೆ ಇದೆ. ಅವರ ಸಲಹೆಗಳನ್ನು ಪಡೆದು ಇಲಾಖೆಯಲ್ಲಿರತಕ್ಕ ಆಪಾದನೆಗಳನ್ನು ಆದಷ್ಟು ಕಡಿಮೆ ಮಾಡಬೇಕು, ವರ್ಷೇ ವರ್ಷೇ ಕ್ಷೀಣಿಸುತ್ತಾ ಹೋಗಬೇಕೆಂದು ಹೇಳುತ್ತಿದ್ದೇನೆ. ಕೆಲವು ವೇಳೆ ೫೦-೬೦ ಲಕ್ಷ ರೂಪಾಯಿ ಎಸ್ಟಿಮೇಟ್ ಇದ್ದುದು ಒಂದು ಕೋಟಿಗೆ ಹೋಗಬಹುದು; ಅದಕ್ಕೆ ಕಾರಣವೇನೆಂದರೆ, ಸಿಮೆಂಟ್ ರೇಟ್ ಜಾಸ್ತಿಯಾಗುತ್ತದೆ, ವೇಜಸ್ ಜಾಸ್ತಿಯಾಗುತ್ತದೆ, ಹೀಗೆ ಹಲವಾರು ಕಾರಣಗಳಿಂದ ಷೆಡ್ಯೂಲ್ ರೇಟ್ ಜಾಸ್ತಿಯಾಗುತ್ತದೆ. ಆ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಅಧಿಕಾರವನ್ನು ಕೇಂದ್ರೀಕೃತ ಮಾಡುವುದು ಒಳ್ಳೆಯದಲ್ಲ. ವಿಕೇಂದ್ರೀಕರಣ ಮಾಡಬೇಕೆಂಬ ದೃಷ್ಟಿಯಿಂದ, ಅಲ್ಲಿನ ಪರಿಸ್ಥಿತಿಗಳಿಗನುಗುಣವಾಗಿ ಮಾಡಬಹುದೆಂದು ಸರ್ಕಲ್‌ನಲ್ಲಿರತಕ್ಕ ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರಿಗೆ ಆ ಅಧಿಕಾರವನು ಕೊಟ್ಟಿದ್ದೇವೆ. ಇವತ್ತಿನ ದಿವಸ ಹಲವಾರು ಅಪಾದನೆಗಳಿವೆ, ಅವುಗಳನ್ನೆಲ್ಲ ತಾವು ಹೇಳಿದ ಹಾಗೆ, ನಾವೂ ಕೂಡ ಸರಿಪಡಿಸಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇವೆ. ಟೆಕ್ನಿಕಲ್ ಆಸ್ಪೆಕ್ಟ್ ಹಾಗೂ ತಾಂತ್ರಿಕ ವಿಷಯಗಳನ್ನು ಇಲಾಖೆಗೆ ಸಂಬಂಧಪಟ್ಟ ಹಾಗೆ ನೋಡಿಸಬೇಕೆಂಬ ಆಸೆ ಇದೆ, ಆ ಬಗ್ಗೆ ಒಂದು ತೀರ್ಮಾನವನ್ನು ಕೂಡ ತೆಗೆದುಕೊಳ್ಳಲಾಗಿದೆ. ಇದರ ಬಗ್ಗೆ ಒಂದು ಸಮಿತಿಯನ್ನು ರಚಿಸಿ ಸದ್ಯದಲ್ಲೇ ಪ್ರಕಟ ಮಾಡುವವನಿದ್ದೇನೆ. ಅದರಲ್ಲಿ, ಟೆಕ್ನಿಕಲ್ ಆಸ್ಪೆಕ್ಸ್ ನೋಡತಕ್ಕವರು, ಹಣ ಕಾಸನ್ನು ಯಾವ ರೀತಿ ಕಂಟ್ರೋಲ್ ಮಾಡಬೇಕೆಂದು ಹೇಳುವವರು, ಅಡ್ಮಿನಿಸ್ಟ್ರೇಷನ್ ಯಾವ ರೀತಿ ಇರಬೇಕೆಂದು ಹೇಳುವವರು, ಈ ಎಲ್ಲ ಜನರನ್ನು ಸೇರಿಸಿ, ಸುಮಾರು ೫-೬ ಮಂದಿ ಸದಸ್ಯರಿರುವ ಒಂದು ಸಮಿತಿಯನ್ನು ಮಾಡಲಾಗುವುದು. ಈ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಸಂಪೂರ್ಣ ವಿಷಯಗಳುಳ್ಳ ಮ್ಯಾನ್ಯುಯಲ್ಸ್, ಕೋಡುಗಳೆಲ್ಲ ಬಹಳ ಹಳೆಯವಾಗಿವೆ; ಅವನ್ನೆಲ್ಲ ಹೊಸ ದೃಷ್ಟಿಯಿಂದ ನೋಡಬೇಕೆಂದು ಇದೆ. ಕೋಡ್, ಮ್ಯಾನ್ಯುಯಲ್, ಅಡ್ಮಿನಿಸ್ಟ್ರೇಷನ್, ಟೆಕ್ನಿಕಲ್ ಆಸ್ಪೆಕ್ಟ್ ಇವೆಲ್ಲವನ್ನು ನೋಡಿ ಸರಿಪಡಿಸುವುದಕ್ಕೆ ಒಂದು ಸಮಿತಿಯನ್ನು ಮತ್ತು ಅದಕ್ಕೆಲ್ಲ ಕಾನೂನು ಪ್ರಕಾರ ಎಷ್ಟು ಖರ್ಚು ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನೆಲ್ಲ ಸದ್ಯದಲ್ಲೇ ಪ್ರಕಟಿಸುತ್ತೇನೆ. ಅನೇಕ ಮಾನ್ಯ ಸದಸ್ಯರುಗಳು ಈ ಲೋಕೋಪಯೋಗಿ ಇಲಾಖೆಯಲ್ಲಿ ಲಂಚಗುಳಿತನ ಜಾಸ್ತಿ ಇದೆ ಎಂದು ಹೇಳಿದರು. ನಾನು ಈ ಬಗ್ಗೆ ಹೇಳಬೇಕು ಎಂದರೆ ಈ ಇಲಾಖೆಯಲ್ಲಿ ಲಂಚಗುಳಿತನ ಏನೇನೂ ಇಲ್ಲ—ಎಂಬತಕ್ಕ ಮಾತನ್ನು ನಾನು ಹೇಳುವುದಿಲ್ಲ. ಲಂಚ ಈ ಇಲಾಖೆಯಲ್ಲಿದ್ದರೂ ಕೂಡ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅಷ್ಟುಮಟ್ಟಿಗೆ ಇಲ್ಲ ಎಂಬ ನನ್ನ ಭಾವನೆ.

ಶ್ರೀ ಮಳ್ಳೂರು ಆನಂದರಾವ್.—ವಿರೋಧ ಪಕ್ಷದಲ್ಲಿ ಕುಳಿತು ನೀವೇ ಆಪಾದನೆ ಮಾಡಿದ್ದೀರಿ. ರೆಕಾರ್ಡ್ ತೆಗೆದು ನೋಡಿ.

ಶ್ರೀ ಎಸ್. ಬಂಗಾರಪ್ಪ.—ಈ ಲಂಚಗುಳಿತನಕ್ಕೆ ಇಲಾಖೆಯೊಂದೇ ಕಾರಣವಲ್ಲ. The society is responsible. After all these officers are drawn from the Society. ಆದ್ದರಿಂದ ಇದನ್ನೂ ತಿಳಿದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಜವಾಬ್ದಾರಿ ಎಲ್ಲ ಕಡೆಯಿಂದಲೂ ಇದೆ. ''ಎರಡು ಕೈ ಸೇರಿದರೆ ಮಾತ್ರ ಚಪ್ಪಾಳೆ'' ಎಂಬ ಸಾಮಾನ್ಯವಾದ ಒಂದು ಗಾದೆ ಮಾತಿದೆ. ಇದು ಸರ್ವಕಾಲಕ್ಕೂ ಸತ್ಯವಾದ ಮಾತು. ಆದರೂ ಕೂಡ ಇದನ್ನು ಯಾವ ರೀತಿ ತಹಬಂದಿಗೆ ತರಬೇಕು ಎಂಬ ದೃಷ್ಟಿಯಿಂದ ಸಮಿತಿ ನೇಮಕ ಮಾಡುತ್ತಿದ್ದೇವೆ. ಅದರಲ್ಲಿ ಈ ವಿಷಯವೂ ಕೂಡ ಅಡಕವಾಗುತ್ತದೆ ಎಂಬ ಮಾತನ್ನು ತಿಳಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಈ ರಸ್ತೆಗಳ ಬಗ್ಗೆ ಹೇಳಬೇಕೆಂದರೆ ನಮ್ಮ ಮಿತ್ರರು ಒಂದು ಮಾತನ್ನು ಹೇಳಿದ್ದಾರೆ toing up of administration, ಇದರ ಬಗ್ಗೆ ಅಧಿಕಾರಿಗಳು ಹೆಚ್ಚಿನ ನಿಗಾ ವಹಿಸಬೇಕು ಎಂದು ಹೇಳಿದ್ದಾರೆ; ಮತ್ತು ರಸ್ತೆ ಪಕ್ಕದಲ್ಲಿರತಕ್ಕ ಮರಗಳ ಬಗ್ಗೆಯೂ ಹೇಳಿದ್ದಾರೆ. ನಮ್ಮ ಕರ್ನಾಟಕದಲ್ಲಿ ಬಹಳ ಕಾಲದಿಂದಲೂ ರಸ್ತೆ ಪಕ್ಕದಲ್ಲಿ ಮರಗಳು ಚೆನ್ನಾಗಿ ಬೆಳೆಯುತ್ತಿವೆ. ಮೊನ್ನೆ ನಾನು ಕೆಲಸದ ಮೇಲೆ ದೆಹಲಿಗೆ ಹೋಗಿದ್ದೆ. ಆಗ ಕೇಂದ್ರ ಮಂತ್ರಿಗಳಾದ ಚಾಂದ್‌ರಾಂ ಅವರನ್ನು ಭೇಟಿಯಾಗಿದ್ದಾಗ ಅವರು ಹೇಳಿದರು ನಿಮ್ಮ ಕರ್ನಾಟಕ ರಾಜ್ಯದಲ್ಲಿ ಒಂದೊಂದು ರಸ್ತೆಯಲ್ಲಿ ಮರಗಳನ್ನು ನೋಡುತ್ತಾ ಇದ್ದರೆ ಬಿಟ್ಟು ಬರುವುದಕ್ಕೇ ಮನಸ್ಸು ಬರುವುದಿಲ್ಲ, ಅಷ್ಟು ಚೆನ್ನಾಗಿ ಮರಗಳು ಬೆಳೆದಿವೆ ಎಂದು ಸಂತೋಷ ವ್ಯಕ್ತಪಡಿಸಿದರು. ಎಲ್ಲಾ ಕಡೆ ಆ ರೀತಿ ಇದೆ ಎಂದು ನನ್ನ ಅಭಿಪ್ರಾಯವಲ್ಲ. ಅನೇಕ ಕಡೆಗಳಲ್ಲಿ ಚೆನ್ನಾಗಿ ಮರಗಳು ಬೆಳೆದಿವೆ ಇನ್ನೂ ಹೆಚ್ಚಾಗಿ ಬೆಳಸಬೇಕು ಎಂಬ ಆಸೆ ನಮಗೂ ಇದೆ. ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಸಾಲು ಮರಗಳಿಗೆ ಕೇಂದ್ರ ಸರ್ಕಾರದವರು ಗಮನ ಕೊಟ್ಟಿದ್ದಾರೆ. ಆ ಬಗ್ಗೆ ಪತ್ರಗಳನ್ನೂ ಕೂಡ ಬರೆದಿದ್ದಾರೆ. ಅದಕ್ಕೆ ಒಂದು ಕಿಲೋಮೀಟರ್‌ಗೆ ಮರ ಬೆಳೆಸುವುದಕ್ಕೆ ಸುಮಾರು ೨೧ ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಎರಡೂ ಸಾಲಿನಲ್ಲಿ ಮರಗಳನ್ನು ಬೆಳೆಸಬೇಕಾದರೆ ಅಷ್ಟು ಹಣ ಖರ್ಚಾಗುತ್ತದೆ ಎಂದು ಹೇಳಿ ಪೂರ್ತಿ ವಿವರಗಳನ್ನು ದೆಹಲಿಗೆ ಹೋದಾಗ ಕೇಂದ್ರದ ಸಚಿವರಿಗೆ ಕೊಟ್ಟೆ. ನಾನು ವರದಿಯನ್ನು ತೆಗೆದುಕೊಂಡು ಹೋಗಿದ್ದು ಅಂಕಿ ಅಂಶಗಳನ್ನು ಅವರಿಗೆ ಹೇಳಿದೆ. ಅದಕ್ಕೆ ಅವರು ಅಷ್ಟೊಂದು ಹಣವನ್ನು ಕೊಡುವುದು ಕಷ್ಟವಾಗುತ್ತದೆ ಎಂದು ಹೇಳಿದರು. ಆಗ ನಾನು ಅವರಿಗೆ ಹೇಳಿದೆ, ನೀವು ಹಣ ಕೊಡಿ ಇಲ್ಲವೇ ಪತ್ರ ಬರೆಯುವುದನ್ನು ಬಿಡಬೇಕಾಗುತ್ತದೆ. ಸುಮ್ಮನೆ ಪತ್ರ ಬರೆದರೆ ನಾವು ಎಲ್ಲಿಂದ ಹಣ ತರಬೇಕು, ನ್ಯಾಷನಲ್ ಹೈವೇ ಕೇಂದ್ರ ಸರ್ಕಾರಕ್ಕೆ ಸೇರಿದ ವಿಷಯ, ಆದ್ದರಿಂದ ನೀವು ಅದಕ್ಕೆ ಹಣ ಕೊಡಬೇಕು, ನಮ್ಮಿಂದ ಹಣ ಖರ್ಚು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದೆ. ನಮ್ಮಲ್ಲಿ ಸ್ಟೇಟ್ ಹೈವೇಸ್, ವಿಲೇಜ್ ರಸ್ತೆಗಳು, ಇತರ ರಸ್ತೆಗಳನ್ನು ನೋಡಿಕೊಳ್ಳುವುದೇ. ಕಷ್ಟವಾಗಿದೆ ಆದ್ದರಿಂದ ನ್ಯಾಷನಲ್ ಹೈವೇಸ್‌ಗೆ ನೀವು ಹಣ ಕೊಡಬೇಕು ಎಂದು ಹೇಳಿದಾಗ ಹೇಗೋ ಸ್ವಲ್ಪ ಹಣ ಹೆಚ್ಚಾಗಿ ಕೊಡುತ್ತೇವೆ ಎಂಬ ಮಾತನ್ನು ಹೇಳಿದರು ಒಂದು ಕಿಲೋಮೀಟರ್‌ಗೆ ೨೧ ಸಾವಿರ ರೂಪಾಯಿ ಅಲ್ಲದಿದ್ದರೂ ಕೂಡ ಹೆಚ್ಚು ಕಡಿಮೆ ಸ್ವಲ್ಪ ಹೆಚ್ಚಾಗಿ ಹಣ ಕೊಡುವ ಭರವಸೆ ನೀಡಿದ್ದಾರೆ. ಡೈರೆಕ್ಟರ್ ಜನರಲ್ ಆಫ್ ರೋಡ್ಸ್ ಅವರೂ ಕೂಡ ಇದರ ಬಗ್ಗೆ ಒಪ್ಪಿಗೆ ಕೊಟ್ಟಿದ್ದಾರೆ ಎಂಬ ಸಂತೋಷದ ವಿಷಯವನ್ನು ಹೇಳುತ್ತಿದ್ದೇನೆ. ಅನಂತರ ಮಾನ್ಯ ಅಧ್ಯಕ್ಷರೇ, ನ್ಯಾಷನಲ್ ಹೈವೇಸ್ ಅಲ್ಲದೆ ಸ್ಟೇಟ್ ಹೈವೇಸ್ ಮತ್ತು ಇತರ ಪಿ. ಡಬ್ಲ್ಯೂ. ಡಿ. ಇಲಾಖೆಗೆ ಸಂಬಂಧಪಟ್ಟ ರಸ್ತೆಗಳ ಬಗ್ಗೆ ಹೆಚ್ಚು ಗಮನವಹಿಸಿದ್ದೇನೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಈ ಬಗ್ಗೆ ಹೆಚ್ಚಿನ ಗಮನವನ್ನು ವಹಿಸಿರುವುದಲ್ಲದೆ ಇದೇ ತಿಂಗಳು ೧೫ನೇ ತಾರೀಖಿನೊಳಗೆ ರಸ್ತೆಗಳಲ್ಲಿ ಗಿಡಗಳನ್ನು ನೆಡಿಸತಕ್ಕ ಕಾರ್ಯವನ್ನೂ ಕೂಡ ಮಾಡಿಸಿದ್ದೇನೆ. ಒಂದೊಂದು ತಾಲ್ಲೂಕಿನಲ್ಲಿ ೫ ಕಿಲೋಮೀಟರ್‌ಗೆ ೧ ಸಾವಿರ ಸಸಿಗಳನ್ನು ಹಾಕತಕ್ಕದ್ದು ಅಂದರೆ ರಸ್ತೆಯ ಎರಡೂ ಕಡೆ ಸೇರಿ ೧ ಸಾವಿರ ಸಸಿಗಳು ಬರುತ್ತವೆ, ಒಂದೊಂದು ಕಿಲೋಮೀಟರ್‌ಗೆ ೨೦೦ ಸಸಿಗಳಂತೆ ೫ ಕಿಲೋಮಿಟರ್‌ಗೆ ಅಂದರೆ ಒಂದೊಂದು ತಾಲ್ಲೂಕಿನಲ್ಲಿ ಒಟ್ಟು ಒಂದು ಸಾವಿರ ಗಿಡಗಳು ಬರುತ್ತವೆ. ನಾನು ಈ ಮಾನ್ಯ ಸಭೆಗೆ ವಿವರಗಳನ್ನು ಕೊಡಬೇಕು ಎಂಬ ದೃಷ್ಟಿಯಿಂದ ಈ ತಿಂಗಳು ೧೫ನೇ ತಾರೀಖಿನೊಳಗಾಗಿ ಎಲ್ಲಾ ತಾಲ್ಲೂಕುಗಳಲ್ಲಿ ಈ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಕೈಗೊಂಡಿದ್ದೇನೆ. ಒಂದು ವೇಳೆ ಯಾವುದಾದರೂ ತಾಲ್ಲೂಕಿನಲ್ಲಿ ಈ ಕಾರ್ಯ ಆಗದೇ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಈ ಮಳೆಗಾಲ ಪ್ರಾರಂಭವಾಗುವುದರೊಳಗೆ ಸಸಿಗಳನ್ನು ನೆಡಬೇಕು, ಆಮೇಲೆ ತೊಂದರೆಯಾಗುತ್ತದೆ. ಹೀಗೆ ಲಕ್ಷಾಂತರ ಮರಗಳನ್ನು ನಮ್ಮ ರಾಜ್ಯದಲ್ಲಿ ಬೆಳೆಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ,

ಇನ್ನೂ ಜಾಸ್ತಿ ಮಾಡಬಹುದು ಎಂದೂ ಆಲೋಚನೆ ಮಾಡಿದ್ದೇನೆ ಮರದ ಕೊಂಬೆಗಳನ್ನು ಅಂದರೆ ಈ ಟೆಂಡರ್ ಬ್ರಾಂಚಸ್ ತೆಗೆದುಕೊಂಡು ಹೋಗಿ ಮಳೆ ಬೀಳತಕ್ಕ ಪ್ರದೇಶದಲ್ಲಿ ಹಾಕಿದರೆ ತಕ್ಷಣ ಚೆನ್ನಾಗಿ ಮರ ಬೆಳೆಯುತ್ತದೆ. ಕೆಲವು ಕಡೆ ಏನಾಗಿದೆ ಎಂದರೆ ಈ ಮರಗಳ ರಕ್ಷಣೆಗೋಸ್ಕರ ಸುತ್ತಲೂ ಮುಳ್ಳುಗಳನ್ನು ಹಾಕಿದ್ದರೆ ಈ ಮುಳ್ಳುಗಳೇ ಮರಕ್ಕಿಂತ ಚೆನ್ನಾಗಿ ಬೆಳೆದು ಮರಗಳೇ ಬೆಳೆದಿಲ್ಲ. ಅಂಥ ಸಂದರ್ಭಗಳೂ ಇರುತ್ತವೆ. ಈಗ ಆ ಮುಳ್ಳುಗಳನ್ನು ತೆಗೆಸಬೇಕಾದರೆ ಒಂದು ಗಿಡಕ್ಕೆ ೫ ರೂಪಾಯಿ ಬೇಕಾಗುತ್ತದೆ. ಈ ರೀತಿ ಆಗಬಾರದು ಎಂಬ ದೃಷ್ಟಿಯಿಂದ ನಾವು ವಿಚಾರ ಮಾಡಿ ಇಂಟೆನ್‌ಸೀವ್ ಕೊಟ್ಟು ಗಿಡಗಳನ್ನು ಬೆಳೆಸುವ ಬಗ್ಗೆ ಕೂಡ ವಿಚಾರ ಮಾಡಿದ್ದೇವೆ. ಅರಣ್ಯ ಇಲಾಖೆಗೆ ಸೇರಿರತಕ್ಕ ಭೂಮಿ ರಸ್ತೆ ಪಕ್ಕದಲ್ಲಿ ಎಲ್ಲಿ ಬರುತ್ತದೆ ಅದನ್ನು ಇಲಾಖೆಯವರು ನೋಡಿಕೊಳ್ಳುವುದಲ್ಲದೆ ರೆವಿನ್ಯೂ ಇಲಾಖೆ, ಫಾರೆಸ್ಟ್ ಡಿಪಾರ್ಟ್‌ಮೆಂಟ್, ಪಿ. ಡಬ್ಲ್ಯೂ. ಡಿ. ಈ ಮೂರು ಇಲಾಖೆಯೂ ಸೇರಿ ನೋಡಿಕೊಳ್ಳಬೇಕು ಎಂದು ಮಾಡಿದ್ದೇವೆ. ಮತ್ತು ಈ ವಿಲೇಜ್ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರತಕ್ಕ ಮರಗಳನ್ನು ಅವರಿಗೇ ಕೊಡುವ ಬಗ್ಗೆಯೂ ವಿಚಾರ ಮಾಡಿದ್ದೇವೆ. ಅವರಿಗೆ ವಹಿಸಿ ಒಂದು ಮರಕ್ಕೆ ೩೦ ರೂ.ನಂತೆ ಅವರಿಗೆ ಕೊಡುವುದು ಪಂಚಾಯಿತಿಯವರು ಬೇಕಾದರೆ ಹರಾಜು ಹಾಕಬಹುದು. ಯಾರು ಹರಾಜು ತೆಗೆದುಕೊಳುತ್ತಾನೆ ಅವನು ಆ ಮರದಲ್ಲಿ ಹಣ್ಣು ಬಂದರೆ ಇಷ್ಟು ವರ್ಷ ಅವನು ಅದನ್ನು ತೆಗೆದುಕೊಳ್ಳಬೇಕು ಎಂದು ಮಾಡಬೇಕು ಎಂದ ಮಾಡಿದ್ದೇವೆ. ಇದನ್ನೆಲ್ಲಾ ಕರಾರುವಾಕ್ಕಾಗಿ ನಿಗದಿ ಮಾಡಿ ಕಾರ್ಯಕ್ರಮ ಕೈಗೊಳ್ಳುವ ಬಗ್ಗೆ ಕೂಡ ಚರ್ಚೆ ಮಾಡಿದ್ದೇವೆ. ಒಟ್ಟಿನಲ್ಲಿ ಹೇಗಾದರೂ ಮಾಡಿ ಮರಗಳನ್ನು ಬೆಳೆಸಬೇಕು ಎಂಬ ದೃಷ್ಟಿಯಿಂದ ನಾನಾ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ದಿಸೆಯಲ್ಲಿ ಪ್ರಯತ್ನವನ್ನು ಮಾಡುತ್ತಿದ್ದೇವೆ. ಗ್ರೂಪ್ ಪಂಚಾಯಿತಿಮಾತ್ರವಲ್ಲ ಅಥವಾ ಹರಾಜು ತೆಗೆದುಕೊಂಡಿರುವವನು ಮಾತ್ರವಲ್ಲ ರೆವಿನ್ಯೂ ಡಿಪಾರ್ಟ್‌ಮೆಂಟಿನವರು, ಲೋಕೋಪಯೋಗಿ ಇಲಾಖೆಯುವರು, ಅರಣ್ಯ ಇಲಾಖೆಯುವರು ಎಲ್ಲರೂ ಸೇರಿ ಮರಗಳನ್ನು ನೋಡಿಕೊಳ್ಳಬೇಕಾಗುವುದು. ಉದಾಹರಣೆಗೆ ತಹಸೀಲ್ದಾರ್‌ರಿಗೆ ಜೀಪ್ ಇರುತ್ತದೆ ಅವರು ಓಡಾಡುತ್ತಿರುತ್ತಾರೆ, ಅದೇ ರೀತಿ ಬಿ. ಡಿ. ಓ. ಕೂಡ ಓಡಾಡುತ್ತಿರುತ್ತಾರೆ, ಅವರೂ ಕೂಡ ಈ ಬಗ್ಗೆ ಗಮನಹರಿಸಬೇಕು. ಒಂದು ಕೊಂಬೆಯನ್ನು ಯಾರಾದರೂ ಕತ್ತರಿಸಿಹಾಕಿದರೂ ಕೂಡ ಅವನ ಮೇಲೆ ಕೇಸ್ ಹಾಕಬೇಕು ಎಂಬ ಸಿಟ್ಟು ನನಗಿದೆ. ಏಕೆಂದರೆ ಮರ ಬೆಳಸುವುದು ಅಷ್ಟು ಸುಲಭದ ಕೆಲಸವಲ್ಲ. ರಾತ್ರಿ ವೇಳೆಯಲ್ಲಿ ಮರ ಕಡಿಯುತ್ತಾರೆ ಎಂಬ ಬಗ್ಗೆ ಕೂಡ ದೂರುಗಳಿವೆ. ಮಾನ್ಯ ಮುಖ್ಯಮಂತ್ರಿಗಳೂ ಹೇಳುತ್ತಿದ್ದರು ದೇವನಹಳ್ಳಿ ಕಡೆಯಿಂದ ಬರಬೇಕಾದರೆ ಹಗಲಿನಲ್ಲೇ ಮರ ಕಡಿಯುತ್ತಿದ್ದರು ಎಂದು ಯಾರೂ ಹೇಳುವವರು ಕೇಳುವವರು ಇಲ್ಲದಂತಾಗಿದೆ. ಆದ್ದರಿಂದ ಬೆಳೆದಿರತಕ್ಕ ಮರಗಳನ್ನು ನಾವು ಉಳಿಸಿಕೊಳ್ಳಬೇಕು ಮತ್ತೆ ಇನ್ನೂ ಬೆಳೆಸಬೇಕು ಎಂಬ ದೃಷ್ಟಿಯಿಂದ ಸರ್ಕಾರ ತೀವ್ರವಾಗಿ ಯೋಚನೆ ಮಾಡಿ ಸಾಲು ಮರಗಳ ಬಗ್ಗೆ ದೊಡ್ಡ ಯೋಜನೆಯನ್ನು ಹಾಕಿಕೊಂಡಿದ್ದೇವೆ. ತೀವ್ರಗತಿಯಲ್ಲಿ ನಾವು ಅದನ್ನು ಮಾಡುತ್ತೇವೆ. ಈ ಸಂದರ್ಭದಲ್ಲಿ ನ್ಯಾಷನಲ್ ಹೈವೇಸ್ ಬಗ್ಗೆ ಮತ್ತೊಂದು ಮಾತನ್ನು ಹೇಳಬೇಕಾಗಿದೆ. ನಾನು ಕೇಂದ್ರ ಸರ್ಕಾರದ ಸಚಿವರ ಜೊತೆಯಲ್ಲಿ ಮಾತನಾಡಿದಾಗ ಈ ನ್ಯಾಷನಲ್ ಹೈವೇಸ್ ಬಗ್ಗೆ ಹೆಚ್ಚಿನ ನ್ಯಾಷನಲ್ ಹೈವೇಸ್ ಕೊಡಬೇಕೆಂದು ಹೇಳಿದ್ದೇನೆ. ರಸ್ತೆಗಳನ್ನು ಪಟ್ಟಿ ಮಾಡಿ ಕೂಡ ಬರೆದಿದ್ದೇನೆ. ಇನ್ನೂ ಹತ್ತು ನ್ಯಾಷನಲ್ ಹೈವೇಸ್ ಕೊಡಬೇಕು ಎಂದೂ ಹೇಳಿದ್ದೇನೆ. ತುಮಕೂರಿನಿಂದ ಅರಸೀಕೆರೆ ಶಿವಮೊಗ್ಗ ಕಡೆ ಹೋಗಿ ತೀರ್ಥಹಳ್ಳಿಯಿಂದ ಮುಂದೆ ಹೋಗುವಂತೆ ನ್ಯಾಷನಲ್ ಹೈವೇ ಕೊಡಬೇಕು ಎಂದು ಕೇಳಿದ್ದೇವೆ. ಈ ಬಿ. ಎಚ್. ರಸ್ತೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಹೋಗಿ ಸೇರತಕ್ಕ ಸಲಹೆ ಕೂಡ ಇದೆ. ಅದರ ಜೊತೆಗೆ ಮತ್ತೊಂದು ಸಲಹೆಯನ್ನು ನಾನು ಮಂತ್ರಿಯಾದ ಮೇಲೆ ಕೊಟ್ಟಿದ್ದೇನೆ. ಇದರಲ್ಲಿ ಮಾನ್ಯ ಸದಸ್ಯರು ಹೇಳಿರತಕ್ಕ ಮಾತೂ ಬರುತ್ತದೆ. ಮಂಗಳೂರಿನಿಂದ ವೈಯಾ ಶಿವಮೊಗ್ಗ ಹುಬ್ಬಳ್ಳಿಗೆ ಹೋಗತಕ್ಕಂಥಾ ನ್ಯಾಷನಲ್ ಹೈವೇಯನ್ನು ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇನೆ. ಈಗಾಗಲೇ ೮-೯ ಸಲಹೆಗಳನ್ನು ಕೇಂದ್ರಕ್ಕೆ ಕೊಟ್ಟಿದ್ದೇನೆ. ಎಲ್ಲಾ ಜಿಲ್ಲೆಗಳಿಗೂ ಸಂಪರ್ಕ ಕೊಡತಕ್ಕ ರಸ್ತೆಗಳ ಸಲಹೆಯನ್ನು ಮಾಡಿದ್ದೇನೆ. ಕೇಂದ್ರ ಸಚಿವರು ಇದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರ್ಕಾರದವರು ನಮ್ಮ ರಾಜ್ಯದಲ್ಲಿ ಒಂದು ಕಿಲೋಮೀಟರ್ ನ್ಯಾಷನಲ್ ಹೈವೇಯನ್ನು ಕೂಡ ಸ್ಯಾಂಕ್ಷನ್ ಮಾಡಿಲ್ಲ. ಕೇರಳ ಮತ್ತು ತಮಿಳುನಾಡು ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ್ದು ಬಹಳ ಕಡಿಮೆಯಾಗಿದೆ: ನಮ್ಮಲ್ಲಿ ಜಾಸ್ತಿ ಮಾಡಬೇಕು ಎಂದು ಕೇಂದ್ರ ಸಚಿವರಿಗೆ ಮನದಟ್ಟು ಮಾಡಿದೆ. ನ್ಯಾಷನಲ್ ಹೈವೇ ರೋಡುಗಳನ್ನು

ಮಾಡತಕ್ಕಂಥಾದ್ದು ಕೇಂದ್ರ ಸರ್ಕಾರದ ಜವಾಬ್ದಾರಿ ಕರ್ನಾಟಕಕ್ಕೆ ಮಾನ್ಯತೆ ಕೊಡಬೇಕು, ನಮಗೆ ಜಾಸ್ತಿ ಹಣ ಕೊಡಬೇಕು ಎಂದು ಹೇಳಿದ್ದಾಗ ೨-೩ ರೋಡುಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಅಭಾರಿಯಾಗಿದ್ದೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನ್ಯಾಷನಲ್ ಹೈವೇಗೆ ಕೊಡತಕ್ಕ ಹಣ ಬೇರೆ ರಾಜ್ಯಗಳಿಗಿಂತ ನಮ್ಮದು ಬಹಳ ಕಡಿಮೆಯಾಗಿದೆ, ಇದಕ್ಕೆ ಜಾಸ್ತಿ ಕೊಡಬೇಕು ಎಂದು ಹೇಳಿದ್ದೇನೆ, ಅವರು ಜಾಸ್ತಿ ಕೊಡುತ್ತೇನೆಂದು ಹೇಳಿದ್ದಾರೆ. ಹರಿಹರ, ದಾವಣಗೆರೆ ಬೈಪಾಸ್ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಹಣ ಕೊಡಬೇಕು. ಕೇಂದ್ರ ಸರ್ಕಾರದವರು ಹಿಂದೆ ೧೭ ಲಕ್ಷ ಚಿಲ್ಲರೆ ರೂಪಾಯಿಗಳನ್ನು ಕೊಟ್ಟರು. ಲ್ಯಾಂಡ್ ಅಕ್ವಿಸಿಷನ್‌ಗೆ ೧೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನು ಒಂದು ಲಕ್ಷ ಚಿಲ್ಲರೆ ರೂಪಾಯಿಗಳು ಉಳಿದಿರಬಹುದು. ಅದರಿಂದ ಬೈಪಾಸ್ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಕೇಂದ್ರ ಸರ್ಕಾರದವರು ನಮಗೆ ಹಣ ಕೊಡಬೇಕು ಎಂದು ಅವರ ಮೇಲೆ ಒತ್ತಡ ತಂದಿದ್ದೇನೆ.

ಮತ್ತೊಂದು ಮಾತನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕು. ಏನೆಂದರೆ, ಶುಗರ್‌ಕೇನ್ ಸೆಸ್ ಮತ್ತು ಮಾರ್ಕೆಟಿಂಗ್ ಸೆಸ್ ಬಗ್ಗೆ ಕೆಲವು ಜನ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಶುಗರ್‌ಕೇನ್ ಸೆಸ್ ಬರಲಿ ನಮ್ಮ ಕನ್‌ಸಾಲಿಡೇಟೆಡ್ ಫಂಡ್‌ಗೆ ಹೋಗುತ್ತದೆ, ಮಾರ್ಕೆಟಿಂಗ್ ಸೆಸ್ ಬರಲಿ ಕನ್‌ಸಾಲಿಡೇಟೆಡ್ ಫಂಡ್‌ಗೆ ಹೋಗುತ್ತದೆ. ಮಾನ್ಯ ಭೀಮಣ್ಣ ಖಂಡ್ರೆಯವರು ಶುಗರ್ ಫ್ಯಾಕ್ಟರಿಯಿಂದ ೨೦ ಲಕ್ಷ ರೂಪಾಯಿಗಳನ್ನು ಕಲೆಕ್ಟ್ ಮಾಡುತ್ತಾರೆ. ಬರೀ ೩ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ ಎಂದು ಹೇಳಿದರು. ಮಾನ್ಯ ಆರ್. ಎಸ್. ಪಾಟೀಲರು ಪ್ರಸ್ತಾಪ ಮಾಡುತ್ತಿದ್ದರು; ಏನೆಂದರೆ, ಬೆಂಗಳೂರು ನಗರದಲ್ಲಿ ಮೋಟಾರ್ ವೆಹಿಕಲ್ ಟ್ಯಾಕ್ಸ್ ನೂರಾರು ಕೋಟಿ ರೂಪಾಯಿಗಳು ಬರುತ್ತದೆ, ಎಲ್ಲಾ ಹಣವನ್ನು ಬೆಂಗಳೂರು ನಗರದವರಿಗೇ ಕೊಡಿ ಎಂದರೆ ಗ್ರಾಮಾಂತರ ಪ್ರದೇಶದಿಂದ ಬರತಕ್ಕವರಿಗೆ ತೊಂದರೆಯಾಗುತ್ತದೆ ಎಂದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಬ್ರಿಡ್ಜ್ ಸೆಸ್, ಮಾರ್ಕೆಟಿಂಗ್ ಸೆಸ್, ರೋಡ್ ಟ್ಯಾಕ್ಸ್ ಮುಂತಾದ ಸೆಸ್‌ಗಳನ್ನು ವಸೂಲು ಮಾಡಿ ಆಯಾ ಭಾಗದ ಪ್ರದೇಶಗಳ ಅಭಿವೃದ್ಧಿಗಾಗಿ ಹೆಚ್ಚು ಹಣವನ್ನು ಖರ್ಚು ಮಾಡುತ್ತೇವೆ ಎಂದು ಈ ಸದನದಲ್ಲಿ ಹಿಂದಿನ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು, ಈ ಸದನದಲ್ಲಿ ಹಿಂದಿದ್ದ ಸಚಿವರು ಭರವಸೆಯನ್ನು ಕೊಟ್ಟಿದ್ದಾರೆ ಎನ್ನುವ ಮಾತನ್ನು ವ್ಯಕ್ತಪಡಿಸಿದ್ದಾರೆ. ನಾವು ಆಳವಾಗಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಮಾರ್ಕೆಟಿಂಗ್ ಸೆಸ್ ೧೯೭೬-೭೭ರಲ್ಲಿ ೪ ಕೋಟಿ ೨ ಲಕ್ಷ ಚಿಲ್ಲರೆ ರೂಪಾಯಿಗಳು ಬಂದಿದೆ. ಈಗ ಪ್ರತಿಯೊಂದು ತಾಲ್ಲೂಕಿಗೂ ೫೦ ಕಿಲೋ ಮೀಟರ್ ಹಾದಿಯನ್ನು ಮಾಡಿಸಬೇಕಾಗಿದೆ, ಯಾವ ಭಾಗದಲ್ಲಿ ಮಾರ್ಕೆಟಿಂಗ್ ಸೆಸ್ ವಸೂಲಾಗುತ್ತದೋ ಆ ಭಾಗಕ್ಕೆ ಸುಮಾರು ಅರ್ಧಕ್ಕಿಂತಲೂ ಹೆಚ್ಚಾಗಿ ಖರ್ಚು ಮಾಡಬೇಕು ಎನ್ನುವ ಅಭಿಪ್ರಾಯಕ್ಕೆ ಬಂದಿದ್ದೇವೆ. ೭೫ ಪರ್ಸೆಂಟ್ ಹಣ ಹೋದರೂ ಚಿಂತೆಯಿಲ್ಲ, ಮಾರ್ಕೆಟ್ ಸೆಸ್ ಹಣ ಆಯಾ ಸ್ಥಳದಲ್ಲಿಯೇ ಖರ್ಚಾಗಲಿ, ಅದನ್ನು ಅಲ್ಲಿಯೇ ವಿನಿಯೋಗಿಸುವುದಕ್ಕೆ ಸಿದ್ಧನಾಗಿದ್ದೇನೆ, ಉಳಿದಂತೆ ಇಲಾಖೆಗೆ ಒದಗಿರುವ ಹಣವನ್ನು ಎಲ್ಲಾ ಭಾಗಗಳಿಗೂ ಸಮನಾಗಿ ಹಂಚಲಾಗಿದೆ. ಇದೇ ರೀತಿ ಶುಗರ್‌ಕೇನ್ ಸೆಸ್‌ಗೆ ಸಂಬಂಧಪಟ್ಟ ಪ್ರಶ್ನೆಗೂ ಅನ್ವಯಿಸುತ್ತದೆ. ಮಾನ್ಯ ಸದಸ್ಯರಾದ ಪಟೇಲರು ವಿರೋಧ ಪಕ್ಷದವರು ಇರುವ ಭಾಗಕ್ಕೆ ಹಣ ಅಲಾಟ್ ಮಾಡಬಾರದು ಎನ್ನುವ ರೀತಿಯಲ್ಲಿ ಅಧಿಕಾರಿಗಳು ಹೇಳಿದರು ಎಂದು ಹೇಳಿದರು. ಯಾರಾದರೂ ಆಫೀಸರ್ ಆ ರೀತಿ ಹೇಳಿದ್ದರೆ ಅವರು ದಾರಿತಪ್ಪಿ ಮಾತನಾಡಿದ್ದಾರೆ ಎಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಅದನ್ನು ಹುಟ್ಟಿಸಿಕೊಂಡು ಹೇಳಿದ್ದಲ್ಲ, ನಡೆದದ್ದು.

ಶ್ರೀ ಎಸ್. ಬಂಗಾರಪ್ಪ.—ಆ ರೀತಿ ಭಾವನೆ ಇಲ್ಲ. ಒಂದು ವೇಳೆ ಇದನ್ನು ನನ್ನ ಗಮನಕ್ಕೆ ತಂದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕು. ಇವತ್ತು ಆ ಕಡೆಯವರು ಈ ಕಡೆಯುವರು ಎಂದು ಭೇದಭಾವನೆಯಿಂದ ನೋಡಿಲ್ಲ; ಬೇಕಾದರೆ ನಾನು ಅಂಕಿಅಂಶಗಳನ್ನು ತಂದು ಸಭೆಯ ಮುಂದಿಡುವುದಕ್ಕೆ ಸಿದ್ಧನಾಗಿದ್ದೇನೆ ಬೇಕಾದರೆ ಅಧ್ಯಕ್ಷರಿಗೆ ಕಳಿಸಿಕೊಡುತ್ತೇನೆ, ಯಾರಾದರೂ ನೋಡಿಕೊಳ್ಳಬಹುದು. ಈ ಇಲಾಖೆಗೆ ಒದಗಿರುವ ಹಣವನ್ನು

ಸಂಪೂರ್ಣವಾಗಿ ಹಂಚಿದ್ದೇನೆ, ಇದರ ಬಗ್ಗೆ ಆರ್ಡರನ್ನು ಹೊರಡಿಸಿದ್ದೇನೆ. ೫ ರೂಪಾಯಿ ಬಂದರೆ ಎಲ್ಲರಿಗೂ ಬಂದಿರುತ್ತದೆ, ೫ ಲಕ್ಷ ರೂಪಾಯಿ ಬಂದರೂ ಎಲ್ಲರಿಗೂ ಬಂದಿರುತ್ತದೆ. ಸಬ್ ಡಿವಿಜನ್, ತಾಲ್ಲೂಕುವಾರು ಲೆಕ್ಕ ಹಾಕಿಸಿ ಹಣವನ್ನು ಕೊಡಿಸಿದ್ದೇನೆ. ಈ ಸಂದರ್ಭದಲ್ಲಿ ಮತ್ತೊಂದು ಮಾತನ್ನು ಪ್ರಸ್ತಾಪ ಮಾಡಬೇಕಾಗಿದೆ. ಏನೆಂದರೆ, ಅಧಿಕಾರಿಗಳು ಕೆಲವು ತಪ್ಪು ಮಾಡಿರತಕ್ಕವರು ಉಳಿದುಕೊಳ್ಳಬಾರದು ಎಂದು ಕಾರ್ಯಕ್ರಮ ಮಾಡಿಕೊಂಡಿದ್ದೇನೆ. ಈ ಇಲಾಖೆಯಲ್ಲಿ ತಪ್ಪು ಮಾಡಿ ಉಳಿದುಕೊಳ್ಳಲು ಸಾಧ್ಯವೆಂದು ಭಾವಿಸಿದರೆ ಅದು ಸಾಧ್ಯವಿಲ್ಲ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಕೆಲವರನ್ನು ಸಸ್ಪೆಂಡ್ ಮಾಡಿದ್ದೇನೆ ಒಬ್ಬರನ್ನು ಟ್ರಾನ್ಸ್‌ಫರ್ ಮಾಡಿದ್ದೇನೆ. ಅವರು ಹೋಗದೇ ಇದ್ದರೆ, ಅನೇಕರು ಅಡ್ರಸ್ ಕೊಡದೆ ನೋಟೀಸ್ ಕೊಡದೇ ಇದ್ದುದು ಗಮನಕ್ಕೆ ತಂದಾಗ ಆ ಅಧಿಕಾರಿಗಳನ್ನು ತಕ್ಷಣ ಸಸ್ಪೆಂಡ್ ಮಾಡಿದ್ದೇನೆ. ಆ ವಿವರಗಳನ್ನು ಬೇಕಾದರೆ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಅಧಿಕಾರಿಗಳು ತಪ್ಪಿಸಿಕೊಳ್ಳಬಹುದು, ಏನಾದರೂ ಮಾಡಬಹುದು ಎಂದುಕೊಂಡಿದ್ದರೆ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಜೆಲ್ಲಿ ಸ್ಥಳಾಂತರ ಮಾಡುವುದು, ಸಿಮೆಂಟನ್ನು ನುಂಗಿ ಹಾಕತಕ್ಕಂಥ, ಕಬ್ಬಿಣವನ್ನು ನುಂಗಿ ಹಾಕತಕ್ಕಂಥ ಕೆಲಸ ನಡೆದಿದೆ, ಜೆಲ್ಲಿ ಒಂದು ಅಕೌಂಟ್‌ಗಿಂತ ಮತ್ತೊಂದು ಅಕೌಂಟಿಗೆ ಹೋಗತಕ್ಕಂಥಾದ್ದು, ಮತ್ತೊಂದು ರಾಶಿಗೆ ಸೇರಿಕೊಳ್ಳತಕ್ಕಂಥಾದ್ದು ಕೆಲವೊಮ್ಮೆ ನಡೆದಿದೆ, ಇಲ್ಲ ಎಂದು ಹೇಳುವುದಿಲ್ಲ. ಅಧಿಕಾರಿಗಳು ಬಿಗಿಯಾದರೆ ಈ ರೀತಿ ಆಗುವುದಿಲ್ಲ. ಅಧಿಕಾರಿಗಳು ಬಿಗಿಯಾಗಬೇಕು. ಅಧಿಕಾರಿಗಳು ತಪ್ಪು ಮಾಡಿ ಉಳಿದುಕೊಳ್ಳುತ್ತಾರೆ ಎನ್ನುವುದು ತಪ್ಪು. ಆ ರೀತಿ ಯಾರಾದರೂ ತಪ್ಪು ಮಾಡಿ ಉಳಿದುಕೊಂಡಿದ್ದಾರೆ ಎನ್ನುವುದನ್ನು ನನ್ನ ಗಮನಕ್ಕೆ ತಂದರೆ ನನಗೆ ಇರತಕ್ಕ ಕಾನೂನಿನ ಚೌಕಟ್ಟಿನಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ, ಏನು ಕ್ರಮ ತೆಗೆದುಕೊಂಡಿದ್ದೇನೆ ಎನ್ನುವುದನ್ನೂ ಸಹ ತಮಗೆ ತಿಳಿಸುವುದಕ್ಕೆ ಸಿದ್ಧನಾಗಿದ್ದೇನೆ. ಒಳ್ಳೆಯ ಅಧಿಕಾರಿಗಳಿಗೆ ನಾವು ಅಷ್ಟೇ ಬೆಂಬಲವನ್ನು ಕೊಡಬೇಕಾಗುತ್ತದೆ. ನಾವು ಬೆಂಬಲ ಕೊಡದೇ ಹೋದರೆ ಅವರಿಂದ ಸಾರ್ವಜನಿಕ ಕೆಲಸಗಳನ್ನು ಮಾಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಒಳ್ಳೆಯ ಅಧಿಕಾರಿಗಳಿಗೆ ಬೆಂಬಲ ಕೊಡಬೇಕಾಗುತ್ತದೆ. ಎಲ್ಲರೂ ಕೆಟ್ಟವರೆ ಎಂದರೆ ಅದನ್ನು ನಾನು ಒಪ್ಪುವುದಿಲ್ಲ. ಕೆಟ್ಟವರು ಎಂದು ಒಳ್ಳೆಯ ಅಧಿಕಾರಿಗಳ ಮನಸ್ಸಿಗೆ ಬರುವುದು ಬೇಡ. ಬಹುಶಃ ಫಸ್ಟ್‌ಕ್ಲಾಸ್ ಅಧಿಕಾರಿಗಳು ಈ ಇಲಾಖೆಯಲ್ಲಿದ್ದಾರೆ, ಅದನ್ನು ನಾನು ಕಂಡಿದ್ದೇನೆ, ಅವರಿಂದ ಕೆಲಸ ಮಾಡುವುದಕ್ಕೆ ಸಾಧ್ಯವಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

2-00 ಪಿ.ಎಂ.

ಮಾನ್ಯ ಅಧ್ಯಕ್ಷರೇ, ಇನ್ನು ನಮ್ಮ ಲೇಬರ್ ಲೀಡರ್ಸ್ ಏನು ಇಲ್ಲಿದ್ದಾರೆ, ಶ್ರೀ ಆರ್ಮುಗಂರವರು, ಶ್ರೀ ಪಂಪಾಪತಿಯವರು ಮತ್ತು ಇನ್ನು ಅನೇಕ ಮಿತ್ರರು ಈ ವರ್ಕ್ ಚಾರ್ಜ್ ಎಸ್ಟಾಬ್ಲಿಶ್‌ಮೆಂಟ್ ಬಗ್ಗೆ ಪ್ರಸ್ತಾಪ ಮಾಡಿದರು. ಅವರುಗಳ ಬಗ್ಗೆ ಮಾನ್ಯ ಸದಸ್ಯರಿಗೇನು ಅನುಕಂಪ, ಕಳವಳ ಇದೆಯೋ ಅಷ್ಟೇ ತೀವ್ರವಾದ ಕಳವಳ ಮತ್ತು ಅನುಕಂಪ ನಮ್ಮ ಸರ್ಕಾರಕ್ಕೂ ಇದೆ ಮತ್ತು ಅದೇ ನಮ್ಮ ನೀತಿಯಾಗಿದೆಂಬುದನ್ನು ಸಹ ಹೇಳಲು ಬಯಸುತ್ತೇನೆ. ನಮ್ಮ ಸರ್ಕಾರದ ನೀತಿಯಾದರೂ 'ಏನು' ಬಡವರು ಯಾರಿದ್ದಾರೆ, ನಿರ್ಗತಿಕರು ಯಾರು ಇದ್ದಾರೆ, ಹಿಂದುಳಿದಿರತಕ್ಕಂಥ ಮತ್ತು ಎಸ್.ಸಿ. ಎಸ್.ಟಿ. ಯವರ ಪರವಾಗಿಯೇ ನಮ್ಮ ಸರ್ಕಾರವಿದೆ, ಅದಕ್ಕೆ ಅನುಗುಣವಾಗಿಯೇ ನಾವು ಕಾರ್ಯಗಳನ್ನು ಕೈಗೊಳ್ಳುತ್ತಿದ್ದೇವೆ. ವರ್ಕ್ ಚಾರ್ಜ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ ನೀರಾವರಿ ಯೋಜನೆಯಲ್ಲಿ ಕೆಲಸ ಮಾಡತಕ್ಕ ಸುಮಾರು ೧೩ ಸಾವಿರ ಚಿಲ್ಲರೆ ಜನ ಇದ್ದಾರೆ ಆ ಮೇಲೆ ನಮ್ಮಲ್ಲಿ ೬೦೦,೭೦೦ ಚಿಲ್ಲರೆಯಷ್ಟು ಜನ ಬರುತ್ತಾರೆ. ಇವರ ಬಗ್ಗೆ ಮೊನ್ನೆ ನಾನು ಮತ್ತು ನಮ್ಮ ಇಲಾಖೆಯ ಅಧಿಕಾರಿಗಳು ಮುಖ್ಯಮಂತ್ರಿಗಳವರ ಜೊತೆಯಲ್ಲಿ ಮಾತನಾಡಿದ್ದೇವೆ. ಅದರ ಬಗ್ಗೆ ನಮ್ಮ ನೀತಿ ಏನು ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳವರೂ ಸಹ ನಾಳೆ ಸೋಮವಾರ ಅಥವಾ ಮಂಗಳವಾರ ಅವರ ಉತ್ತರದಲ್ಲಿ ತಿಳಿಸುವವರಿದ್ದಾರೆ. ಈ ೧೩ ಸಾವಿರ ಚಿಲ್ಲರೆ ವರ್ಕ್ ಚಾರ್ಜ್ ಮೆನ್ ಮತ್ತು ೧೧ ಸಾವಿರ ಗ್ಯಾಂಗ್ ಮೆನ್‌ಗಳೇನಿದ್ದಾರೆ ಅವರುಗಳೆಲ್ಲರನ್ನೂ ಕೆಲವೊಂದು ಷರತ್ತುಗಳಿಗೆ ಒಳಪಟ್ಟು ಕಾಯಂ ಮಾಡಬೇಕು ಎನ್ನುವುದರ ಬಗ್ಗೆ ತೀರ್ಮಾನ ಮಾಡಿದ್ದೇವೆಂದು ಮಾನ್ಯ ಸದಸ್ಯರುಗಳಿಗೆ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ.

ಅ ಷರತ್ತುಗಳೇನೋ ಎಂದು ಮಾನ್ಯ ಸದಸ್ಯರುಗಳು ಆತಂಕ ಪಟ್ಟುಕೊಳ್ಳಬೇಕಾದ್ದು ಏನೂ ಇಲ್ಲ. ಅದನ್ನು ಸಹ ಮಾನ್ಯ ಸದಸ್ಯರುಗಳ ಗಮನಕ್ಕೆ ತರಬಯಸುತ್ತೇನೆ. ಈಗ ನಾವು ಯಾವುದಾದರೂ ೨ ಕೋಟಿ ರೂಪಾಯಿಗಳ ಯೋಜನೆಯನ್ನು ಕೈಕೊಂಡಾಗ. ಆ ಯೋಜನೆ ಮುಗಿಯುವವರೆಗೂ ೨ ಪರ್ಸೆಂಟ್‌ಗಿಂತ ಹೆಚ್ಚಿಗೆ ಹಣವನ್ನು ಅಲ್ಲಿ ಕೆಲಸ ಮಾಡತಕ್ಕಂಥವರ ಸಂಬಳ ಸಾರಿಗೆಗಳಿಗೆ ಖರ್ಚು ಮಾಡಬಾರದೆಂದು ಹಿಂದೆ ಇತ್ತು. ಆದರೆ ಈಗ ಬೆಲೆಗಳೂ ಸಹ ಜಾಸ್ತಿಯಾಗಿರುವುದರಿಂದ ೪ರಿಂದ ೬ ಪರ್ಸೆಂಟ್‌ಗಳವರೆಗೆ ಹೋಗಬಹುದು ಎನ್ನುವ ಅಭಿಪ್ರಾಯವನ್ನು ತಾಳಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಪಂಪಾಪತಿಯವರು ಹೇಳಿದ ಹಾಗೆ ಈ ಗ್ಯಾಂಗ್ ಮೆನ್‌ಗಳಲ್ಲಿ ಕೆಲವರಿಗೆ ೧೫,೨೦,೨೫ ವರ್ಷ ಸರ್ವಿಸ್‌ಗಳೂ ಆಗಿದೆ, ಅವರುಗಳನ್ನೆಲ್ಲಾ ಇನ್ನು ೫ ವರ್ಷದಲ್ಲಿ ಹಂತಹಂತವಾಗಿ ರೆಗ್ಯುಲರೈಜ್ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ೧೩ ಸಾವಿರ ವರ್ಕ್ ಚಾರ್ಜ್‌ನಲ್ಲಿರುವವರ ಪೈಕಿ ಈ ವರ್ಷ ಒಂದು ಸಾವಿರ ಚಿಲ್ಲರೆ ಇಲ್ಲ ಎರಡು ಸಾವಿರದವರೆಗೆ ರೆಗ್ಯುಲರೈಜ್ ಮಾಡಿಬಿಡುತ್ತಿದ್ದೇವೆ. ಬಾಕಿ ಹೊಸದಾಗಿ ಬಂದಿರತಕ್ಕಂಥವರು ಇನ್ನು ೫ ವರ್ಷಗಳು ಕಾದರೆ ಅವರನ್ನೂ ಕೂಡ ರೆಗ್ಯುಲರೈಜ್ ಮಾಡಿ ಬಿಡುತ್ತೇವೆ, ಕೇರಳದವರು ತಮಿಳುನಾಡಿನವರು ಮಾಡಿದ್ದಾರೆಂದು ಮಾನ್ಯ ಸದಸ್ಯರುಗಳು ಮೊನ್ನೆ ದಿವಸ ಪ್ರಸ್ತಾಪ ಮಾಡುತ್ತಾ ಹೇಳಿದರು ಅದು ನಿಜ ಅವರು ಮಾಡಿದ್ದಾರೆಂದು ನಾವು ಅವರನ್ನು ಅನುಸರಿಸುತ್ತಿಲ್ಲ. ಅವರು ಮಾಡದಿರಲಿ ಮಾಡದೇ ಇರಲಿ, ನಾವು ಅವರುಗಳ ಸೇವೆಯನ್ನು ಖಾಯಂ ಮಾಡಲೇಬೇಕೆಂದು ತೀರ್ಮಾನ ಮಾಡಿದ್ದೇವೆ. ಏತಕ್ಕೆಂದರೆ ಇವತ್ತು ಗ್ಯಾಂಗ್ ಮೆನ್‌ಗಳು ಮತ್ತು ವರ್ಕ್ಸ್ ಚಾರ್ಜ್ ಎಸ್ಟಾಬ್ಲಿಷ್‌ಮೆಂಟಿನವರಿಗೆ ರೋಡ್ಸ್ ಮತ್ತು ನೀರಾವರಿ ಯೋಜನೆಗಳು ನಮ್ಮ ಕರ್ನಾಟಕದಲ್ಲಿ ಅಷ್ಟು ಬೇಗನೆ ಯಾವುದು ಮುಗಿಯುವುದಿಲ್ಲ. ಅವರಿಗೆ ಕೆಲಸ ಇದ್ದೇ ಇರುತ್ತದೆ. ೧೦,೧೫,೨೦ ವರ್ಷ ಸರ್ವಿಸ್ ಮಾಡಿದವರಿಗೂ ಮಕ್ಕಳು ಮರಿ ಆಗಿರುತ್ತದೆ ಅಂಥವರನ್ನು ಬಿಟ್ಟು ಮತ್ತೆ ಬೇರೆ ಹೊಸಬರನ್ನು ಕೆಲಸಕೆ ತೆಗೆದುಕೊಂಡರೆ ಅವರ ಜೀವನಕ್ಕೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ, ಪುನಃ ಅದರ ಬಗ್ಗೆ ಕಂಪ್ಲೆಂಟ್ ಬರಬಾರದು ಮತ್ತು ಅವರ ಸೇವೆಯನ್ನು ಮಾನ್ಯತೆ ಮಾಡಬೇಕು, ಹಾಗೂ ಅವರೂ ಉತ್ತಮವಾಗಿ ಬಾಳಬೇಕು ಎನ್ನುವ ದೃಷ್ಟಿಯಿಂದ ಈ ತೀರ್ಮಾನವನ್ನು ಮಾಡಿದ್ದೇವೆ. ೧೧ ಸಾವಿರ ಚಿಲ್ಲರೆ ಗ್ಯಾಂಗ್ ಮಾನ್‌ಗಳಲ್ಲಿ ಸುಮಾರು ೬೦೦.೭೦೦ ಜನ ಇವತ್ತು ನ್ಯಾಷನಲ್ ಹೈವೇನಲ್ಲಿ, ಸ್ಟೇಟ್ ಹೈವೇಸ್, ಮತ್ತಿತರ ರೋಡ್ ವೇಸ್ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರಲ್ಲೂ ಕೂಡ ೧೦,೧೫,೨೦ ವರ್ಷಗಳ ಸರ್ವಿಸ್ ಆದವರು ಇದ್ದಾರೆ ಮತ್ತೆ ೨_೩ ವರ್ಷಗಳ ಸರ್ವಿಸ್ ಆದವರೂ ಇದ್ದಾರೆ. ಇದನ್ನೆಲ್ಲಾ ಪರಿಶೀಲನೆ ಮಾಡಿ ಅವರುಗಳನ್ನೂ ಕೂಡ ಇನ್ನು ೫ ವರ್ಷದಲ್ಲಿ ಹಂತಹಂತವಾಗಿ. ಅವರ ಸೇವೆಗಳನ್ನೂ ಕೂಡ ಖಾಯಂ ಗೊಳಿಸುವ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಮತ್ತೊಂದು ಇದರಿಂದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಯಾವ ಪರಿಣಾಮವನ್ನು ಬೀರುತ್ತದೆ ಎನ್ನುವ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬೊಮ್ಮಾಯಿರವರಿಗೆ ಮತ್ತು ಇತರ ಸದಸ್ಯರುಗಳ ಗಮನಕ್ಕೆ ತರಬಯಸುತ್ತೇನೆ. ತಾವುಗಳೆಲ್ಲರೂ ಈ ಗ್ಯಾಂಗ್‌ಮೆನ್‌ಗಳನ್ನು ಖಾಯಂಗೊಳಿಸುವ ಬಗ್ಗೆ ಒತ್ತಾಯ ಪಡಿಸಿದ್ದೀರಿ ಹಾಗೂ ಸರ್ಕಾರದ ನೀತಿಯಂತೆ ನಾವೂ ಅದನ್ನು ಒಪ್ಪಿಕೊಂಡಿದ್ದೇವೆ ಆದರೆ ಲದರಿಂದ ಹಣಕಾಸಿನ ಪರಿಸ್ಥಿತಿಯ ಮೇಲೆ ಏನು ಪರಿಣಾಮವಾಗುತ್ತದೆಂಬುದನ್ನು ತಾವು ತಿಳಿದುಕೊಳ್ಳಬೇಕು. ಅವರಿಗೆ ನಾವು ಈಗ ೪ನೇ ದರ್ಜೆಯ ನೌಕರರ ಸಂಬಳವನ್ನು ಕೊಡಬೇಕಾಗುತ್ತದೆ. ಇದರಿಂದ ಹೆಚ್ಚಿಗೆ ಹಣ ಖರ್ಚಾಗುತ್ತದೆ. ಮೊದಲಾಗಿದ್ದರೆ ಡೈಲಿ ವೇಜಸ್ಸ್ ಎಂದು ೧.೮೦—೨.೦೦ ರೂ.ಗಳನ್ನು ಕೊಡುತ್ತಿದ್ದೆವು ಆದರೆ ಈಗ ಕ್ಲಾಸ್ (೪) ಅಫಿಶಿಯಲ್ಸ್‌ಗೆ ಏನು ಸಿವಿಲ್ ಸರ್ವಿಸ್ ರೂಲ್ಸ್ ಪ್ರಕಾರ ಕೊಡಬೇಕೋ ಆ ರೀತಿ ಎಲ್ಲಾ ಸೌಲತ್ತುಗಳನ್ನೂ ಕೊಡಬೇಕಾಗುತ್ತದೆ. ಅದರಿಂದ ಮೊದಲು ಎರಡು ಕೋಟಿ ರೂಪಾಯಿಗಳಲ್ಲಿ ೫—೫ ಕಿಲೋಮೀಟರ್ ರಸ್ತೆ ಮಾಡಲು ಯೋಚಿಸಿದ್ದರಲ್ಲಿ ೨½, ೩ ಕಿಲೋಮೀಟರ್ ರಸ್ತೆಯನ್ನು ಮಾಡಬೇಕಾಗಿದೆ. ಇಲ್ಲದಿದ್ದರೆ ಹಣ ಸಾಕಾಗುವುದಿಲ್ಲ ಅದಕ್ಕಾಗಿ ತಮ್ಮ ಗಮನವನ್ನು ಇದರ ಬಗೆ ಸೆಳೆಯಬೇಕು ಎನ್ನುವ ದೃಷ್ಟಿಯಿಂದ ಪ್ರಯತ್ನ ಮಾಡುತ್ತಿದ್ದೇನೆ. ಅದಕ್ಕಾಗಿ ತಾವು ಅರ್ಥ ಮಾಡಿಕೊಳ್ಳಬೇಕು. ಹೇಗೂ ಸರ್ಕಾರ ಹಣವನ್ನು ಜೋಡಿಸಿ ಕೆಲಸ ಕಾರ್ಯಗಳಿಗೆ ತೊಂದರೆಯಾಗಬಾರದು ಎನ್ನತಕ್ಕ ದೃಷ್ಟಿಯಿಂದ ನಾವು ಈ ರೀತಿ ಮಾಡಬೇಕಾಗಿದೆ. ಅದನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕೆಂದು ಹೇಳಬಯಸುತ್ತೇನೆ. ಮತ್ತೆ ಇಲ್ಲಿ ವಿಶೇಷವಾಗಿ ನಾನು ಎಸ್.ಸಿ. ಮತ್ತು ಎಸ್.ಟಿ.ಯವರ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಜಿ.ವಿ. ಕೃಷ್ಣನ್‌ರವರು ನನಗೊಂದು ಪತ್ರ ಬರೆದಿದ್ದಾರೆ, ನಾವು ಬೋವಿ ಕಮ್ಯೂನಿಟಿಗೆ ಸೇರಿದವರು

ನಾವೊಂದು ಸೊಸೈಟಿ ಮಾಡಿಕೊಂಡಿದ್ದೇವೆ, ನಮ್ಮ ಸೊಸೈಟಿಯ ಮುಖಾಂತರ ನಿಮ್ಮ ಕೆಲಸ ಕಾರ್ಯಗಳನ್ನು ಏತಕ್ಕೆ ಮಾಡಿಸಬಾರದು,'' ಎಂದು ಪತ್ರ ಬರೆದಿದ್ದರು. ಅದಕ್ಕೆ ನಾನು ಹೇಳುವುದಾದರೆ ನಮ್ಮ ಸರ್ಕಾರದ ನೀತಿಯಾದರೂ ಏನು ಎಂಬುದನ್ನು ಹೇಳುವುದಾದರೆ, ಆ ರೀತಿ ಎಲ್ಲೆಲ್ಲಿ ಸಹಕಾರ ಸಂಘಗಳು ಅದರಲ್ಲೂ ವರ್ಕರ್ಸ್ ಸೆಕ್ಷನ್ಸ್‌ಗೆ ಸಂಬಂಧಪಟ್ಟವುಗಳು ಇದ್ದಾವೆ, ಅವುಗಳ ಮುಖಾಂತರ ನಮ್ಮ ಇಲಾಖೆಯ ಕೆಲಸ ಕಾರ್ಯಗಳನ್ನು ಮಾಡಿಸಬೇಕು ಎನ್ನುವ ದೃಷ್ಟಿಯಿಂದ ನಾವು ಈಗಾಗಲೇ ೧ ಲಕ್ಷ ರೂ.ಗಳ ಕೆಲಸವನ್ನು ಅವರಿಗೆ ಕೊಟ್ಟಿದ್ದೇವೆ. ಇದರ ಬಗ್ಗೆ ನಾವು ಈಗಾಗಲೇ ಒಂದು ಗೌವರ್ನ್‌ಮೆಂಟ್ ಆರ್ಡರ್‌ನ್ನು ಹೊರಡಿಸಿದ್ದೇವೆ, ಅವರು ಇನ್ನೂ ಚೆನ್ನಾಗಿ ಕೆಲಸ ಮಾಡುವುದಾದರೆ ೧೦ ಲಕ್ಷ ರೂಪಾಯಿಗಳವರೆಗೆ ಕೆಲಸ ಕಾರ್ಯಗಳನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಕೋ-ಆಪರೇಟಿವ್ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡಬೇಕು ಎನ್ನುವುದೇ ಸರ್ಕಾರದ ಉದ್ದೇಶವಾಗಿದೆ. ಸೊಸೈಟಿಗಳು ಅಂದಾಕ್ಷಣ ಮಾನ್ಯ ಸದಸ್ಯರುಗಳಿಗೆ ಕೋ-ಆಪರೇಟಿವ್ ಮೂವೆಂಟ್ ಫೇಲ್ ಆಗಿರತಕ್ಕಂಥದ್ದು ಗಮನಕ್ಕೆ ಬರುತ್ತದೆ. ಅಂಥಾ ಸೊಸೈಟಿಗಳಿಗೆ ಸಾಮಾನ್ಯ ಜನರ ಹಣವನ್ನು, ಸರ್ಕಾರೀ ಹಣವನ್ನು ಕೊಡುವುದಕ್ಕೆ ನಾವು ತಯಾರಾಗಿಲ್ಲ. ಆದುದರಿಂದ ಮಾನ್ಯ ಅಧ್ಯಕ್ಷರೇ, ಕೋ-ಆಪರೇಟಿವ್ ಸೊಸೈಟಿಗಳು ಅಲ್ಲದೇನೇ ಇನ್‌ಡಿವಿಜ್ಯುಯಲ್ ಆಗಿ ಒಬ್ಬ ಎಸ್.ಸಿ., ಎಸ್.ಟಿ.ಯಾಗಲೀ ಅಥವಾ ಹಿಂದುಳಿದಿರತಕ್ಕಂಥ ಪಂಗಡದವರು ಆಗಲೀ ಅವನಿಗೆ ಯಾವ ರೀತಿಯಾಗಿ ಸಹಾಯ ಮಾಡಬೇಕು ಎನ್ನುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಕ್ವಾಂಟಿಟಿ ಆಫ್ ವರ್ಕ್ ಮತ್ತು ರೂಲ್ಸ್ ಪ್ರಕಾರ ಟೆಂಡರ್ ಕಾಲ್‌ಫಾರ್ ಮಾಡಿದಾಗ ಅವನು ಹಾಕಿದ್ದರೆ ಆಗ ಅದನ್ನೆಲ್ಲಾ ಪರಿಶೀಲನೆ ಮಾಡಿ ವರ್ಕ್ ಚೆನ್ನಾಗಿದ್ದಲ್ಲಿ ಅಂಥವರಿಗೆ ನಾವು ಕೊಡುವುದಕ್ಕೆ ಸಿದ್ಧರಿದ್ದೇವೆಂದು ಮಾನ್ಯ ಸದಸ್ಯರಲ್ಲಿ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ.

ಇನು ಇಂಟರ್ ಸ್ಟೇಟ್ ರೋಡ್ಸ್ ಬಗ್ಗೆ ಹೇಳಬೇಕು ಎಂದರೆ, ಹೈದರಾಬಾದ್ ಕರ್ನಾಟಕ, ಕೋಲಾರ ಜಿಲ್ಲೆ ಮತ್ತು ಬೆಳಗಾಂ ಜಿಲ್ಲೆಗಳಿಂದ ಬಂದಿರತಕ್ಕಂಥವರ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು. ನಾನು, ದೇವೇಂದ್ರಪ್ಪ ಘಾಳಪ್ಪನವರು ಮತ್ತು ಮುಖ್ಯ ಮಂತ್ರಿಗಳವರೂ ಈಗ್ಗೆ ೧—೨ ತಿಂಗಳ ಹಿಂದೆ ಪ್ರವಾಸ ಮಾಡಿದ ಕಾಲಕ್ಕೆ ಕಣ್ಣಾರೆ ಕಂಡಿದ್ದೇವೆ. ಅವರುಗಳು ಹೇಳಿದ ಹಾಗೆ ಅವುಗಳು ಉತ್ತಮ ಸ್ಥಿತಿಯಲ್ಲಿಲ್ಲ ಕರ್ನಾಟಕ, ಮಹಾರಾಷ್ಟ್ರ, ಕರ್ನಾಟಕ—ಆಂಧ್ರ, ಕರ್ನಾಟಕ—ಕೇರಳ ರಾಜ್ಯಗಳ ರೋಡ್ಸ್‌ಗಳು ಚೆನ್ನಾಗಿಲ್ಲ ಅದರ ಬಗ್ಗೆ ನಾವು ಈಗಾಗಲೇ ಆಂಧ್ರದ ಪಿ.ಡಬ್ಲ್ಯು.ಡಿ. ಇಲಾಖೆಯ ಮಂತ್ರಿಗಳವರ ಜೊತೆಯಲ್ಲಿ ಮಾತು ಕತೆ ನಡೆಸಿದ್ದೇವೆ. ಅದಕ್ಕೆ ಒಂದು ಯೋಜನೆಯನ್ನೂ ಸಹಾ ಸಿದ್ಧ ಮಾಡಿಟ್ಟಿದ್ದೇವೆ. ಅದಕ್ಕೆ ಅಂತಿಮವಾದ ಸ್ವರೂಪವನ್ನು ಕೊಡಬೇಕಾಗಿದೆ ಆದರೆ ಅದಕ್ಕೆ ಸಾಕಷ್ಟು ಕಾಲಾವಕಾಶವಾಗಿಲ್ಲ. ಮತ್ತೆ ಇಂಟರ್ ಸ್ಟೇಟ್ ರೋಡ್ಸ್‌ಗಳೇನಿವೆ ಅವುಗಳಲ್ಲಿಯೂ ಆರ್ಥಿಕವಾಗಿ ಪ್ರಾಮುಖ್ಯವಾಗಿರತಕ್ಕಂಥ ರೋಡ್ಸ್‌ಗಳೇನಿವೆ ಅವಕ್ಕೆ ಕೇಂದ್ರ ಸರ್ಕಾರದವರು ಸಹ ಹಣಸಹಾಯವನ್ನು ಸ್ವಲ್ಪಮಟ್ಟಿಗೆ ಮಾಡಬೇಕಾಗುತ್ತದೆ. ಅದಕ್ಕಾಗಿ ನಾವು ಕೇಂದ್ರ ಸರ್ಕಾರದಿಂದಲೂ ಹಣ ಸಹಾಯವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನನಗೆ ಗೊತ್ತಿದೆ ಹೈದರಾಬಾದ್ ಕರ್ನಾಟಕ ಬಹಳ ಹಿಂದುಳಿದಿರತಕ್ಕ ಪ್ರದೇಶವೆನ್ನುವುದು, ಅದು ನನ್ನ ಗಮನದಲ್ಲಿದೆ, ಅದಕ್ಕೆ ತಕ್ಕ ಯೋಜನೆಗಳನ್ನು ಹಾಕಿ ಅತಿ ಶೀಘ್ರವಾಗಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳತಕ್ಕ ಪ್ರಯತ್ನವನ್ನೂ ನಾವು ಮಾಡುತ್ತಿದ್ದೇವೆ.

ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕು, ಏನೆಂದರೆ ನನಗೆ ಬೇರೆ ಬೇರೆ ಕಟ್‌ಮೋಷನ್‌ಗಳು ಕೂಡ ಬಂದಿದೆ. ಮಾನ್ಯ ಶಾಮಣ್ಣನವರು ಒಂದು ಕಟ್‌ಮೋಷನ್ ಹಾಕಿದ್ದಾರೆ, ನಾನು ಈ ಬಗ್ಗೆ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಅವರು ಕೇಳಿರತಕ್ಕಂಥ ವಿಷಯಕ್ಕೆ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ, ಏಕೆಂದರೆ ಈಗಾಗಲೇ ವೇಳೆಯಾಗುತ್ತಾ ಬರುತ್ತಿದೆ. ಒಂದು ಮಾತನ್ನು ಮಾತ್ರ ಇಲ್ಲಿ ಹೇಳುತ್ತೇನೆ, ಅವುಗಳಲ್ಲಿ ಕೆಲವಕ್ಕೆ ನಾವು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನು ಕೆಲವಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ. ಅವಕ್ಕೆಲ್ಲಾ ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಈ ಸಂದರ್ಭದಲ್ಲಿ ಅವರಿಗೆ ತಿಳಿಸುತ್ತೇನೆ. ಇನ್ನು ಕ್ಲಾಜ್ ೯ (ಎ) ಬಗ್ಗೆ ಮಾನ್ಯ ರಾಮಚಂದ್ರ ರೆಡ್ಡಿಯವರು ಪ್ರಸ್ತಾಪ ಮಾಡಿದ್ದಾರೆ. It has become impeditment ಎಂದು ನಮಗೆ ಗೊತ್ತಿದೆ. ನಾನು ಮತ್ತು ನಮ್ಮ ಅಧಿಕಾರಿಗಳು ಸೇರಿಕೊಂಡು ಇದನ್ನು ಯಾವರೀತಿ ಸರಿಮಾಡಬೇಕೆಂಬ ಬಗ್ಗೆ ವಿಚಾರ ಮಾಡಿ ಇದನ್ನು ಸರಿಪಡಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ, ಆಮೇಲೆ ಕರ್ನಾಟಕ ಸ್ಟೇಟ್ ಕಂಸ್ಟ್ರಕ್ಷನ್ ಕಾರ್ಪೊರೇಷನ್ ಬಗ್ಗೆ ಒಂದು ಮಾತನ್ನು ಹೇಳಬೇಕು. ಕಳೆದ ಸಾರಿ ಮಾನ್ಯ ಸದಸ್ಯರೊಬ್ಬರು ಪ್ರಶ್ನೆ ಕೇಳಿದಂಥ

ಸಂದರ್ಭದಲ್ಲಿ ಕರ್ನಾಟಕ ಸ್ಟೇಟ್ ಬ್ರಿಡ್ಜ್ ಕನ್‌ಸ್ಟ್ರಕ್ಷನ್ ಕಂಪನಿ ಇದೆಯೇ ಎಂದು ಕೇಳಿದ್ದರು. ಈ ಬಗ್ಗೆ ಕರ್ನಾಟಕಬ್ರಿಡ್ಜ್ ಕಂಸ್ಟ್ರಕ್ಷನ್ ಕಂಪನಿ ಇಲ್ಲ, ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಎಂದು ಇದೆ ಎಂಬುದಾಗಿ ಹೇಳಿದ್ದೇನೆ. ಇದರಲ್ಲಿ ನಾವು ಸುಮಾರು ೩ ಲಕ್ಷ ರೂಪಾಯಿಗಳ ಬಂಡವಾಳವನ್ನು ಹೂಡಿದ್ದೇವೆ. ಏತಕ್ಕೆಂದರೆ ಈ ಬಗ್ಗೆ ನಮ್ಮದೇ ಏಜೆನ್ಸಿ ಇರಬೇಕು ಆ ಮೂಲಕ ಅನ್‌ಸ್ಕ್ರುಪ್ಯುಲಸ್ ಕಂಟ್ರಾಕ್ಟರ್‌ಗಳನ್ನು ತಹಬಂದಿಗೆ ತರಬೇಕು ಎಂದು ಹೇಳಿ ಹೀಗೆ ಮಾಡಿದ್ದೇವೆ. ಈ ರೀತಿ ಮಾಡದೇ ಇದ್ದರೆ ಅವರನ್ನು ಕಂಟ್ರೋಲ್‌ಗೆ ತರುವುದು ಕಷ್ಟವಾಗುತ್ತಿತ್ತು. ಆದ್ದರಿಂದ ಈ ಒಂದು ಕಂಸ್ಟ್ರಕ್ಷನ್ ಕಾರ್ಪೊರೇಷನ್ ಮಾಡಿ ಕೆಲಸ ಮಾಡುತ್ತಿದ್ದೇವೆ. ಈಗ ನಾವು ಅನೇಕ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ಕೆಲಸ ಮಾಡಬೇಕೆಂದಿದ್ದೇವೆ. ಅದರಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ಈ ಪ್ರಾಜೆಕ್ಟನ್ನು ತೆಗೆದುಕೊಂಡಿರುವುದರಿಂದ ಅದಕ್ಕೆ ನಾವು ಸಾಕಷ್ಟು ಹಣವನ್ನು ಕೊಡದಿದ್ದರೆ ಆಗುವುದಿಲ್ಲ. ಅದಕ್ಕೆ ನಾವು ಸಾಕಷ್ಟು ಹಣವನ್ನು ಒದಗಿಸಿ ಈ ಪ್ರಾಜೆಕ್ಟ್ ಕೆಲಸಗಳನ್ನು ಪೂರೈಸುತ್ತೇವೆ. ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ, ಈ ಕರ್ನಾಟಕ ಸ್ಟೇಟ್ ಕಂಸ್ಟ್ರಕ್ಷನ್ ಕಾರ್ಪೊರೇಷನ್‌ನನ್ನು ವೈಂಡ್‌ಅಪ್ ಮಾಡಬೇಕೆನ್ನುವ ಮಟ್ಟಕ್ಕೆ ಹೋಗಿದೆ. ಈಗಾಗಲೇ ನಮ್ಮ ಇಲಾಖಾ ಅಧಿಕಾರಿಗಳು ಸಹ ಇದನ್ನು ರಿವೈಜಲೈಸ್ ಮಾಡದಿದ್ದರೆ ಅನ್‌ಸ್ಕ್ರುಪುಲೈಸ್ ಕಂಟ್ರಾಕ್ಟರ್‌ಗಳು ಮೇಲಕ್ಕೆ ಬರುವುದಕ್ಕೆ ಕಾರಣವಾಗುತ್ತದೆ ಎಂದು ಸಲಹೆ ಕೊಟ್ಟಿದ್ದಾರೆ. ಅದಕ್ಕೋಸ್ಕರ ಆ ರೀತಿ ರಿವೈಜಲೈಸ್ ಮಾಡಬೇಕೆಂದಿದ್ದೇವೆ. ಇನ್ನೂ ಹೆಚ್ಚು ಹಣವನ್ನು ಕೊಟ್ಟು ಹೆಚ್ಚಿನ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ಮೂಲಕ ಇದಕ್ಕೆ ಜೀವವನ್ನು ತುಂಬತಕ್ಕಂಥ ಪ್ರಯತ್ನ ಮಾಡಿದ್ದೇವೆ ಈಗಾಗಲೇ ಇದಕ್ಕೆ ಜೀವ ತುಂಬಿದ್ದೇವೆ, ತುಂಬುತ್ತಲೂ ಇದ್ದೇವೆ. ಇದಕ್ಕೆ ಎಲ್ಲಾ ಇಲಾಖೆಗಳವರೂ ಬೆಂಬಲ ಕೊಡುತ್ತೇವೆಂದು ಈಗಾಗಲೇ ಹೇಳಿದ್ದಾರೆ. ಇನ್ನು ಲೆಟರ್ ಆಫ್ ಕ್ರೆಡಿಟ್ ಬಗ್ಗೆ ಅನೇಕರು ಹೇಳಿದ್ದಾರೆ. ಇದರಲ್ಲಿ ಒಂದು ಕಾಲಮಿತಿಯನ್ನು ಹಾಕಿಕೊಂಡು ಕೆಲಸ ಮಾಡತಕ್ಕಂಥ ಒಂದು ಒಳ್ಳೆಯ ಯೋಜನೆ ಇದೆ ಇದರಲ್ಲಿ ಡೆಫನೆಟ್ ಎಷ್ಟಾಬ್ಲಿಷ್‌ಮೆಂಟ್ ಇರುತ್ತದೆ. ಇದರಲ್ಲಿ ಸ್ಯಾಲರೀಸ್ ಇತ್ಯಾದಿಗಳನ್ನು ಅನ್ವಯಿಸಿ ಬರೆದು ಮಾಡಬೇಕಾಗಿಲ್ಲ. ಇಲ್ಲಿ ಲೆಟರ್ ಆಫ್ ರೈಟ್ಸ್ ಇರಬೇಕು ಎಂದರೆ ಇದರಿಂದ ಹಣದ ದುರುಪಯೋಗವಾಗುತ್ತದೆ ಎನ್ನುವ ದೃಷ್ಟಿಯಿಂದ ಕೊನೆಯ ಪಕ್ಷ ಸಿಕ್ಕಾಪಟ್ಟೆ ಹಣ ವೇಸ್ಟ್ ಮಾಡುವುದನ್ನು ತಪ್ಪಿಸುವುದಕ್ಕಾಗಿ ಈ ಲೆಟರ್ ಆಫ್ ಕ್ರೆಡಿಟ್‌ನ್ನು ಕಂಟಿನ್ಯೂ ಮಾಡಬೇಕು, ಈ ಸ್ಯಾಲರೀಸ್ ಇತ್ಯಾದಿಗಳನ್ನು ಈ ಪರವ್ಯೂನಿಂದ ತೆಗೆಯಬೇಕೆಂದು ತೀರ್ಮಾನ ಮಾಡಿದ್ದೇವೆ,

ಮಾನ್ಯ ಅಧ್ಯಕ್ಷರೇ ಇನ್ನು ಎರಡು ಪ್ರಮುಖವಾದ ವಿಷಯಗಳನ್ನು ಈ ಸಭೆಯ ಗಮನಕ್ಕೆ ಮತ್ತು ಮಾನ್ಯ ವಿರೋದಪಕ್ಷದ ನಾಯಕರ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಈ ರೈಲ್ವೆ ಮತ್ತು ಏರ್‌ಪೋರ್ಟ್ ನಮ್ಮ ಇಲಾಖೆಗೆ ಸಂಬಂಧಪಟ್ಟ ವಿಷಯಗಳಾಗಿದೆ. ಈ ರೈಲ್ವೆ ಬಗ್ಗೆ ಹೇಳಬೇಕೆಂದರೆ ಈ ಬಗ್ಗೆ ನಾನು ಡೆಲ್ಲಿಗೆ ಹೋಗಿದ್ದಾಗ ಕೇಂದ್ರ ರೈಲ್ವೆ ಸಚಿವರಾದ ಪ್ರೊ॥ ಮಧುದಂಡವತೆ ಅವರ ಜೊತೆಯಲ್ಲಿ ಮಾತನಾಡಿಕೊಂಡು ಬಂದಿದ್ದೇನೆ. ಅವರಲ್ಲದೆ ಪ್ಲಾನಿಂಗ್ ಕಮಿಷನ್ ಉಪಾಧ್ಯಕ್ಷರ ಹತ್ತಿರವೂ ಸಹ ಈ ಬಗ್ಗೆ ಮಾತನಾಡಿಕೊಂಡು ಬಂದಿದ್ದೇನೆ. ಆಪ್ಟ–ಮಂಗಳೂರು ರೈಲ್ವೆ ಲೈನ್ ಬಗ್ಗೆ ಅವರೊಡನೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಅವರು ಈಗಾಗಲೇ ಆಪ್ಟ ಸ್ಟೇಜ್‌ನಿಂದ ಕೆಲಸ ಕಾರ್ಯಗಳು ಪ್ರಾರಂಭವಾಗಿದೆ ಎಂದು ಹೇಳಿದರು. ಅದಕ್ಕೆ ನಾನು ಆಪ್ಟ ಸ್ಟೇಜ್‌ನಿದ ಹೇಗೆ ಕೆಲಸಗಳು ಪ್ರಾರಂಭವಾಗಿದೆಯೋ ಹಾಗೆ ಮಂಗಳೂರಿನಿಂದ ಸಹ ಈ ಕೆಲಸಗಳು ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಕೇಳಿಕೊಂಡಾಗ 'let there be commencement of work from both the sides' ಎಂದು ಅವರು ನುಡಿದು 'ಈಗಾಗಲೇ ಮಂಗಳೂರಿನಿಂದ ರೆಕಾರ್ಡ್ ಬಂದಿದೆ, ಅದಕ್ಕೆ ಬೇಗನೆ ಮಂಜೂರಾತಿ ತೆಗೆದುಕೊಂಡು ಮಂಗಳೂರು ಕಡೆಯಿಂದ ಈ ಕೆಲಸ ಪ್ರಾರಂಭ ಮಾಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಅವರು ನನಗೆ ಕೊಟ್ಟಿದ್ದಾರೆ. ಆದ್ದರಿಂದ ನಾನು ನಮ್ಮ ಸರ್ಕಾರದವರ ಪರವಾಗಿ ಪ್ರೊ॥ ಮಧುದಂಡವತೆಯವರಿಗೆ ಹಾಗೂ ಕೇಂದ್ರ ಸರ್ಕಾರಕ್ಕೆ ನನ್ನ ಅಭಿನಂದನೆಯನ್ನು ಸಲ್ಲಿಸಲಿಚ್ಛಿಸುತ್ತೇನೆ. ಆಮೇಲೆ ನಾನು ಅಲ್ಲಿ ಪ್ಲಾನಿಂಗ್ ಕಮಿಷನ್‌ರವರ ಹತ್ತಿರ ಮಾತನಾಡತಕ್ಕಂಥ ಸಂದರ್ಭದಲ್ಲಿ 'the conversion of metreguage into broad-guage between Bangalore to Mysore.' ಈ ವಿಷಯದಲ್ಲೂ ಸಹ ಮಾತನಾಡಿದ್ದೇನೆ. ತಮಗೆ ಗೊತ್ತಿರುವ ಹಾಗೆ ಇದರಲ್ಲಿ ಸಿಕ್ಕಾಪಟ್ಟೆ ಟ್ರಾಫಿಕ್ ಇದೆ. ಇದನ್ನು ಬ್ರಾಡ್‌ಗೇಜ್‌ಗೆ ಕನ್‌ವರ್ಟ್ ಮಾಡಬೇಕೆಂಬ ಬಗ್ಗೆ ಒತ್ತಡ ಹಲವಾರು ವರ್ಷಗಳಿಂದ ಇದೆ. ಇದನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ನಾವು ಪ್ಲಾನಿಂಗ್

ಮಿಷನ್‌ಗೆ ಅನೇಕ ಸಾರಿ ಒತ್ತಾಯ ಮಾಡಿದ್ದೇವೆ. ಆದರೂ ಕೂಡ ಪ್ಲಾನಿಂಗ್ ಕಮಿಷನ್‌ನವರು ಇದಕ್ಕೆ ಕ್ಲಿಯರೆನ್ಸ್ ಕೊಟ್ಟಿಲ್ಲ. ಈ ವಿಚಾರದಲ್ಲಿ ನಾನು ಪ್ರೊ॥ ಮಧುದಂಡವತೆಯವರ ಹತ್ತಿರ ಮಾತನಾಡಿದಾಗ ಅವರು 'ಬೆಂಗಳೂರಿನಿಂದ ಮೈಸೂರಿಗೆ ಇರತಕ್ಕಂಥ ಮೀಟರ್‌ಗೇಜನ್ನು ಬ್ರಾಡ್‌ಗೇಜ್‌ಗೆ ಕನ್‌ವರ್ಟ್ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ' ಎಂದು ಹೇಳಿ ನಮಗೆ ಬೆಂಬಲವನ್ನು ಕೊಟ್ಟಿದ್ದಾರೆ, ಇದಕ್ಕಾಗಿ ಪುನಃ ಅವರಿಗೆ ಅಭಿನಂದನೆಯನ್ನು ಸಲ್ಲಿಸಲಿಚ್ಛಿಸುತ್ತೇನೆ. ಈ ವಿಚಾರದಲ್ಲಿ we have offered three concessions to the Govt. of India. ಏನೆಂದರೆ ೧.೭೫ ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವಂಥ ವುಡನ್ ಸ್ಲಿಪರ್ಸ್‌ನ್ನು ಕೊಡುತ್ತೇವೆಂದು ಹೇಳಿದ್ದೇವೆ. ಅಲ್ಲದೇ ೧ ಕೋಟಿ ರೂಪಾಯಿಗಳಷ್ಟು ಮಣ್ಣಿನ ಕೆಲಸವನ್ನು ನಾವೇ ವಹಿಸಿಕೊಳ್ಳುವುದಾಗಿ ಹೇಳಿದ್ದೇವೆ ಮತ್ತು Wherever Govt. land is available on the track, we are going to give to Railway Dept. free of cost. ಎಂದು ಹೇಳಿದ್ದೇವೆ ಈ ರೀತಿ to the tune of several crores we have offered to the Govt. of India. ಈ ಬಗ್ಗೆ ಪ್ಲಾನಿಂಗ್ ಕಮಿಷನ್‌ರವರ ಜೊತೆಯಲ್ಲಿ ಅನೇಕ ಸಾರಿ ವಿವರವಾಗಿ ಮಾತನಾಡಿದ ಮೇಲೆ ಅವರೂ ಕೂಡ ಇದರ ಬಗ್ಗೆ ಸಹಾನುಭೂತಿಯನ್ನು ತೋರಿಸಿದ್ದಾರೆ. 'ನಿಮ್ಮ ಕಳಕಳಿ ನಮಗೆ ಅರ್ಥವಾಗಿದೆ, ನಾವು ಇದಕ್ಕೆ ಬೆಂಬಲವನ್ನು ಕೊಡುತ್ತೇವೆಂದು ಅವರು ಹೇಳಿದ್ದಾರೆ. ಮತ್ತು ಇದಕ್ಕೆ ಕ್ಲಿಯರೆನ್ಸ್ ಕೊಡಲು ಪ್ಲಾನಿಂಗ್ ಕಮಿಷನ್‌ನವರು ಒಪ್ಪಿಕೊಂಡಿದ್ದಾರೆ, ಈ ಒಂದು ಹರ್ಷದ ಸಂಗತಿಯನ್ನು ಈ ಸಭೆಯಲ್ಲಿ ಪ್ರಕಟ ಮಾಡುವುದಕ್ಕೆ ನನಗೆ ಸಂತೋಷವೆನಿಸುತ್ತದೆ.

ಇನ್ನು ಬೆಂಗಳೂರು ಗುಂತಕಲ್ ಲೈನ್ ವಿಚಾರದಲ್ಲಿ ಹೇಳಬೇಕೆಂದರೆ again conversion work is going on. ಇದರಲ್ಲಿ 100 kms. lies within our State and the rest in other State. ಈ ೧೦೦ ಕಿಲೋಮೀಟರುಗಳ ಕನ್‌ವರ್‌ಷನ್ ಕಾರ್ಯದಲ್ಲಿ ಇದಕ್ಕೆ ಕೊಟ್ಟಿರ ತಕ್ಕಂಥ ಹಣ ಬಹಳ ಕಡಿಮೆ ಇದೆ ಇದಕ್ಕೆ ೨-೩ ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಕೊಡಬೇಕೆಂದು ಪ್ರೊ॥ ಮಧುದಂಡವತೆಯವರ ಹತ್ತಿರ ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಅವರಿಗೆ ಹೇಳಿದ್ದೇನೆ. ಅದಕ್ಕೆ ಅವರು "I am sorry I do not know such a meagre money is provided for this work, I will see that more money is immediately provided" ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ, ಅಲ್ಲದೇ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳಿಸಿಕೊಡುತ್ತಿದ್ದೇನೆ, ಅವರು ಅಲ್ಲಿಗೆ ಬಂದನಂತರ ಅವರ ಜೊತೆಯಲ್ಲಿ ಸಂಪೂರ್ಣವಾಗಿ ಇವೆಲ್ಲಾ ವಿಷಯಗಳ ಬಗ್ಗೆ ಮಾತುಕತೆ ನಡೆಸಿ ಹೆಚ್ಚಾಗಿ ಎಷ್ಟು ಹಣವನ್ನು ಕೊಡಬೇಕೆಂಬ ಬಗ್ಗೆ ತೀರ್ಮಾನ ಮಾಡುತ್ತೇವೆ, ಅದಷ್ಟು ಹೆಚ್ಚು ಹಣವನ್ನು ಕೊಡುವುದಕ್ಕೆ ನಾನು ಸಿದ್ಧನಾಗಿದ್ದೇನೆ, ಎನ್ನತಕ್ಕಂಥ ಮಾತನ್ನು ಸಹ ಹೇಳಿದ್ದಾರೆ,

ಇನ್ನು ಹಾಸನ-ಮಂಗಳೂರು ರೈಲ್ವೆ ಲೈನನ್ನು ಷೆಡ್ಯೂಲ್ಡ್ ಟೈಮ್‌ನಲ್ಲಿ ಮುಗಿಸಿಕೊಡುತ್ತೇವೆ ಎಂದು ಅವರು ನಮಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅವರು ಆದಷ್ಟು ಜಾಗ್ರತೆಯಾಗಿ ಅದನ್ನು ಮುಗಿಸಿಕೊಡುತ್ತಾರೆ ಎನ್ನುವ ನಂಬಿಕೆ ನಮಗಿದೆ. ಆಮೇಲೆ ಈ ಹುಬ್ಬಳ್ಳಿ-ಕಾರವಾರ ರೈಲ್ವೆ ಲೈನ್ ಬಗ್ಗೆ ಹೇಳಬೇಕೆಂದರೆ...

ಹುಬ್ಬಳ್ಳಿ-ಕಾರವಾರದ ರೈಲು ರಸ್ತೆಗಳನ್ನು ಮಾಡಬೇಕೆಂಬ ಪ್ರಶ್ನೆಗೆ ಕಾರವಾರದ ಬಂದರು ಇನ್ನೂ ಅಭಿವೃದ್ಧಿಯಾಗಿಲ್ಲ, ಆದ್ದರಿಂದ ಹೇಗೆ ಮಾಡುವುದಕ್ಕಾಗುತ್ತದೆ? ಎಂಬ ಮಾತನ್ನು ಹೇಳಿದರು, ಅಂದ ಮಾತ್ರಕ್ಕೆ ಆ ಕೆಲಸವನ್ನು ಮಾಡಬಾರದೆಂದಲ್ಲ. ಕಬ್ಬಿಣದ ಅದಿರು ಪ್ರೊಡಕ್ಷನ್ ಚೆನ್ನಾಗಿ ಬಂದು ಪೋರ್ಟ್ ಬೆಳವಣಿಗೆಯಾದಮೇಲೆ ವಿಚಾರ ಮಾಡೋಣ ಎನ್ನತಕ್ಕಂಥಾ ಮಾತನ್ನು ತಿಳಿಸಿದರು. ಈ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನು ಏರ್‌ಪೋರ್ಟ್ ಮತ್ತು ಏರ್ ಸ್ಟ್ರಿಪ್ಸ್ ಬಗ್ಗೆ ನಾನು ಕೆಲವು ವಿಷಯಗಳನ್ನು ಹೇಳಬೇಕಾಗಿದೆ ಇದನ್ನು ವಿಚಾರ ಮಾಡುವುದಕ್ಕಾಗಿ ಕೇಂದ್ರ ಸರ್ಕಾರದವರು ಸಂಬಂಧಪಟ್ಟ ಸಮಿತಿಯವರನ್ನು ಬೆಂಗಳೂರಿಗೆ ಕಳುಹಿಸಿಕೊಟ್ಟಿದ್ದರು. ಬೆಂಗಳೂರು ನಗರದಲ್ಲಿರುವ ವಿಮಾನ ನಿಲ್ದಾಣವನ್ನು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿ ಮಾಡಬೇಕೆಂಬುದು ನಮ್ಮ ಒತ್ತಡ. ಏಕೆಂದರೆ ದೊಡ್ಡ ದೊಡ್ಡ ವಿಮಾನಗಳು ಅಂದರೆ ಬೋಯಿಂಗ್ ಮತ್ತು ಜಂಬೋಜಟ್ ವಿಮಾನಗಳೂ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದು ಹೋಗಬೇಕೆಂಬುದು ನಮ್ಮ ಒತ್ತಡ. ಅದಕ್ಕಾಗಿ ಈಗಾಗಲೇ ಕೇಂದ್ರ ಸರ್ಕಾರ

ದವರು ೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ರನ್‌ವೇ ದೊಡ್ಡದು ಮಾಡಬೇಕು, ದೊಡ್ಡ ದೊಡ್ಡ ವಿಮಾನಗಳು ಇಳಿಯುವಂತಹ ಅವಕಾಶ ಮಾಡಬೇಕೆಂದಿರುವ, ಈಗ ಕೊಟ್ಟಿರುವಾಗ ೪ ಕೋಟಿ ರೂಪಾಯಿಗಳು ಸಾಲದು ಇನ್ನೂ ಜಾಸ್ತಿ ಕೊಡಬೇಕೆಂದು ನಮ್ಮ ಒತ್ತಡ ಕೇಂದ್ರ ಸರ್ಕಾರದ ಮೇಲೆ ಇದೆ. ಇದರ ಬಗ್ಗೆ ನಾವು ಇನ್ನೂ ಪ್ರಯತ್ನ ಮಾಡುತ್ತೇವೆನ್ನುವ ವಿಷಯವನ್ನು ಈಗ ತಮಗೆ ತಿಳಿಸುತ್ತಿದ್ದೇನೆ. ಮತ್ತು ಜಿಲ್ಲೆಗಳಲ್ಲಿ ಏರ್ ಸ್ಟ್ರಿಫ್ಸ್‌ನ್ನು ಸ್ಥಾಪಿಸುವ ಬಗ್ಗೆ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ, ಬಿಜಾಪುರ, ಹಾಸನ, ಹುಬ್ಬಳ್ಳಿ, ಅದೇರೀತಿ ಶರಾವತಿಯನ್ನು ನೋಡುವುದಕ್ಕೆ ಹೋಗಬೇಕಾದರೆ ಶಿವಮೊಗ್ಗ ಹಾಗೂ ಸಾಗರಕ್ಕೂ ಒಂದೊಂದು ಏರ್‌ಸ್ಟ್ರಿಫ್ಸ್ ಬೇಕಾಗುತ್ತದೆ. ಅದೇ ರೀತಿ ಗುಲ್ಬರ್ಗ ಬಿಜಾಪುರ ಈ ಜಿಲ್ಲೆಗಳಿಗೂ ಏರ್‌ಸ್ಟ್ರಿಫ್ಸ್ ಬೇಕಾಗುತ್ತದೆ. ಬಿಜಾಪುರ ಜಿಲ್ಲೆ ಚಾರಿತ್ರಿಕ ಜಿಲ್ಲೆಯೆಂಬುದನ್ನು ನೆನಪಿನಲ್ಲಿಟ್ಟುಕೊಂಡು ಹೈದರಾಬಾದ್ ಕರ್ನಾಟಕದಲ್ಲಿ ಮೂರು ಜಿಲ್ಲೆಗಳಿಗೆ ಏರ್ ಸ್ಟ್ರಿಫ್ಸ್ ಬೇಕಾಗುತ್ತದೆ. ಅದೇ ರೀತಿ ದಾವಣಗೆರೆಗೂ ಬೇಕಾಗುತ್ತದೆ ಈ ರೀತಿ ಅನೇಕ ಏರ್ ಸ್ಟ್ರಿಫ್ಸ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಕೇಂದ್ರ ಸರ್ಕಾರದವರ ಮೇಲೆ ಹೆಚ್ಚಿನ ಒತ್ತಡವನ್ನು ಹಾಕಿ ವಿಮಾನ ನಿಲ್ದಾಣಗಳನ್ನು ಪಡೆಯುತಕ್ಕಂಥ ಪ್ರಯತ್ನ ಮಾಡುತ್ತೇವೆ. ಈಗಾಗಲೇ ಬೆಳಗಾಂ ಮತ್ತು ಮಂಗಳೂರಿನಲ್ಲಿ ವಿಮಾನ ನಿಲ್ದಾಣಗಳನ್ನು ಮಾಡಲಾಗಿದೆ. ಆದರೆ ಬೆಳಗಾಂನಲ್ಲಿರುವ ವಿಮಾನ ನಿಲ್ದಾಣ ಲಾಭದಿಂದ ನಡೆಯುತ್ತಿಲ್ಲ. ಅದು ಚೆನ್ನಾಗಿ ಅಭಿವೃದ್ಧಿಯಾಗಬೇಕು. ಮತ್ತೆ ಮಂಗಳೂರು ಬಹಳ ಚೆನ್ನಾಗಿ ನಡೆಯುತ್ತಿದೆ. ಆದರೂ ಅದನ್ನು ವಿಸ್ತರಿಸಬೇಕಾದರೆ ಹಾಗೂ ಅಭಿವೃದ್ಧಿಪಡಿಸಬೇಕಾದರೆ ಈಗ ಇರುವ ಸ್ಥಳದಲ್ಲಿ ಸಾಧ್ಯವಿಲ್ಲ ಎನ್ನುವ ಅಭಿಪ್ರಾಯ ಬಂದಿದೆ. ಅದನ್ನು ಪಡುಬಿದ್ರಿಯ ಹತ್ತಿರ ಮಾಡಿದರೆ ದೊಡ್ಡದಾಗಿ ಮಾಡಬಹುದೆನ್ನುವ ಅಭಿಪ್ರಾಯ ಇದೆ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರೆಲ್ಲರೂ ಸಮಾಲೋಚನೆ ನಡೆಸಿ ಒಂದು ತೀರ್ಮಾನಕ್ಕೆ ಬಂದರೆ ಸುಮಾರು ೮-೧೦ ಮೈಲಿ ದೂರವಾದರೂ ಚಿಂತೆಯಿಲ್ಲ, ಅದು ಪಡುಬಿದ್ರಿಯ ಹತ್ತಿರವಾಗಲೀ ಅಥವಾ ಬೇರೆ ಕಡೆಯಲ್ಲಾಗಲೀ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಮತ್ತೆ ಪಿ.ಎಚ್.ಇ. ಬಗ್ಗೆ ಎರಡು ವಿಚಾರಗಳನ್ನು ಹೇಳಬೇಕಾಗಿದೆ. ಇದಕ್ಕೆ ಒದಗಿಸಿರುವ ೧೦ ಕೋಟಿ ರೂಪಾಯಿಗಳು ಕುಡಿಯುವ ನೀರಿನ ಯೋಜನೆಗಾಗಿ ಎಂದು ಮಾನ್ಯ ಸದಸ್ಯರು ತಿಳಿದುಕೊಂಡಿರಬಹುದು. ಇದರಲ್ಲಿ ಒಂದು ಕೋಟಿ ರೂಪಾಯಿ ಮಾತ್ರ ನಮ್ಮ ಸಿಬ್ಬಂದಿ ಹಾಗೂ ಯಂತ್ರೋಪಕರಣಗಳನ್ನು ಕೊಳ್ಳುವ ಸಲುವಾಗಿ ಇಟ್ಟಿದೆ. ಇನ್ನು ಬಾಕಿ ೯ ಕೋಟಿ ರೂಪಾಯಿಗಳನ್ನು ಗ್ರಾಮಾಂತರ ನೀರು ಸರಬರಾಜು ಯೋಜನೆಗಾಗಿ ಇಟ್ಟಿದೆ. ಅದನ್ನು ನಾನು ಕೊಡುವ ಹಾಗೆ ಇಲ್ಲ. ಅದು ಗ್ರಾಮೀಣ ಅಭಿವೃದ್ಧಿ ಇಲಾಖೆಗೆ ಸೇರಿದೆ. ಆದರೆ ನಾವು ಏಜೆನ್ಸಿ ತರಹ ಕೆಲಸ ಮಾಡುತ್ತೇವೆ. ಸಿಬ್ಬಂದಿ ಮತ್ತು ಮೆಷನರೀಸ್‌ಗಳನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದರು ನಾನು ಸುಮಾರು ಎಲ್ಲ ವಿಷಯಗಳನ್ನು ಕವರ್ ಮಾಡಿದ್ದೇನೆಂಬ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಮತ್ತೆ ಮಂಡ್ಯ ಜಿಲ್ಲೆಯಲ್ಲಿ ಸುಮಾರು ಎರಡೂವರೆ ಸಾವಿರ ಕಿಲೋಮೀಟರ್ ನೀರಾವರಿ ಏರಿಯಾ ಇದೆ. ಅದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ರಸ್ತೆಯನ್ನು ಅನುಕೂಲವನ್ನು ಕಲ್ಪಿಸಿಕೊಡಬೇಕೆಂಬ ಮಾತನ್ನು ಹೇಳಿದರು. ಅದೇ ರೀತಿ ಬೇರೆ ಏರಿಯಾಗಳಲ್ಲಿ ಅಂದರೆ ನೀರಾವರಿ ಏರಿಯಾಗಳಲ್ಲಿ ಬರುವ ರಸ್ತೆಯ ಬಗ್ಗೆ ಹೆಚ್ಚಿನ ಗಮನ ಕೊಡುತ್ತೇವೆ. ಇದಕ್ಕಾಗಿ ಒಂದು ದೊಡ್ಡ ಮಾಸ್ಟರ್ ಪ್ಲಾನ್‌ಗೆ ತಾವೆಲ್ಲರೂ ಒಪ್ಪಿಗೆ ಕೊಡುವುದಾದರೆ ಸುಮಾರು ೪-೫ ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಎಲ್ಲ ಕಡೆ ರಸ್ತೆಯ ನಿರ್ಮಾಣ ಕಾರ್ಯವನ್ನು ಬಗೆಹರಿಸಬಹುದೆಂಬ ಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಬಾಕಿ ಇನ್ನೂ ಅನೇಕ ವಿಷಯಗಳಿಗೆ ನಾನು ಉತ್ತರ ಕೊಡಲು ಸಾಧ್ಯವಾಗುವುದಿಲ್ಲ. ಕಾರಣ ಈಗಾಗಲೇ ಬಹಳ ಸಮಯವಾಗಿರುವುದರಿಂದ, ಕೆಲವು ಮಾನ್ಯ ಸದಸ್ಯರು ಎತ್ತಿರುವ ವಿಷಯಗಳಿಗೆ ಉತ್ತರ ಸಿಗದಿದ್ದರೆ ಅಂತಹವರು ಪ್ರತ್ಯೇಕವಾಗಿ ನನ್ನ ಕಛೇರಿಗೆ ಬಂದರೆ ಅವರಿಗೆ ಉತ್ತರ ಕೊಡುವುದಕ್ಕೆ ನಾನು ಸದಾ ಕಾಲ ಸಿದ್ಧನಿದ್ದೇನೆ, ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸುತ್ತಾ ಕೊನೆಯದಾಗಿ ಒಂದು ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದಕ್ಕೆ ತಾವೆಲ್ಲರೂ ಒಪ್ಪುತ್ತೀರೆಂಬ ಭಾವನೆ ನನಗಿದೆ. ಕರ್ನಾಟಕ ರಾಜ್ಯ ಸರ್. ಎಂ. ವಿಶ್ವೇಶ್ವರಯ್ಯನವರಂತಹ ಮಹಾ ವ್ಯಕ್ತಿಯನ್ನು ಪಡೆದಿದ್ದಂತಹ ರಾಜ್ಯ. ಇವತ್ತು ಅಂತಹವರ ಫೋಟೋವನ್ನು ಗೋಡೆಯಲ್ಲಿ ಹಾಕಿ ಅದಕ್ಕೆ ಹೂವಿನ ಹಾರ ಹಾಕಿ ಪೂಜೆ ಮಾಡುವುದನ್ನು ಇನ್ನಾದರೂ ನಾವು ಬಿಡಬೇಕು. ಅವರ ಫೋಟೋವನ್ನು ಗೋಡೆಯಲ್ಲಿ ಹಾಕಿ ಹೂವಿನ ಹಾರವನ್ನು ಹಾಕಿ ಪೂಜೆ ಮಾಡುವ ಮಟ್ಟಕ್ಕೆ ನಾವು ಇಳಿಯುವುದಾದರೆ ನನಗನಿಸುತ್ತದೆ ಅವರು ಮಾಡಿದ್ದಂತಹ ಯೋಜನೆಯು ಕೊನೆಯದಾಗಿ ನಿಲ್ಲುತ್ತದೆ. ಆದ್ದರಿಂದ ಅಂತಹ

ಮತ್ತೊಬ್ಬ ಇಂಜಿನೀಯರನ್ನು ತಯಾರು ಮಾಡಬೇಕೆಂಬ ಭಾವನೆಯನ್ನು ನಾನು ಹೊಂದಿದ್ದೇನೆ. ಇವತ್ತು ಅನೇಕ ಇಂಜಿನೀಯರ್‌ಗಳು ಅಕೌಂಟ್ಸ್ ಬರೆದುಕೊಂಡು ಕೆಲಸ ಮಾಡುತ್ತಿರುವವರು ಇದ್ದಾರೆ. ವಿಶ್ವೇಶ್ವರಯ್ಯನವರು ಕಟ್ಟಿದಂತಹ ಕನ್ನಂಬಾಡಿ ಅಣೆಕಟ್ಟು ಕಟ್ಟಿ ಬಹಳ ವರ್ಷಗಳಾದರೂ ಇನ್ನೂ ಅನೇಕ ವರ್ಷಗಳವರೆಗೆ ಬಾಳಿಕೆ ಬರುತ್ತದೆ. ಇವತ್ತಿನ ದಿವಸ ವೈಜ್ಞಾನಿಕ ಕಾಲದಲಿ ಇತರ ದೇಶಗಳು ಬಹಳವಾಗಿ ಮುಂದುವರಿದಿವೆ. ಅದೇರೀತಿ ತಾಂತ್ರಿಕ ವಿಷಯದಲ್ಲಿ ಮುಂದುವರಿಯುತ್ತಿರುವ ಈ ಪ್ರಪಂಚದಲ್ಲಿ ನಾವು ಇನ್ನೂ ಕೂಡ ಬರೀ ಲೆಕ್ಕ ಬರೆಯುತಕ್ಕಂಥ ಇಂಜಿನೀಯರ್ ಗಳು ಇರುವುದಾದರೆ, ಅದು ಸರಿಯಲ್ಲ. ಇದರ ಬಗ್ಗೆ ಒಂದು ಹೊಸ ಯೋಜನೆಯನ್ನು ಮಾಡುವ ಕಾಲ ಬರಬಹುದು. ಅಂತಹ ಇಂಜಿನಿಯರ್ಸ್‌ಗಳನ್ನು ಇಟ್ಟುಕೊಳ್ಳುವುದನ್ನು ವ್ಯಯಕ್ತಿಕವಾಗಿ ನಾನಂತೂ ಒಪ್ಪುವುದಿಲ್ಲ, ನಮ್ಮ ಮಿತ್ರರೂ ಇದಕ್ಕೆ ಬೆಂಬಲ ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಕಾರಣ ನಮ್ಮಲ್ಲಿ ಒಳ್ಳೆಯ ಇಂಜಿನೀಯರ್ಸ್ ಇದ್ದಾರೆ. ಅವರಿಂದ ಒಳ್ಳೆಯ ಕೆಲಸ ಕಾರ್ಯಗಳು ಆಗಬೇಕು, ಅವರಿಗೂ ಕೆಲವು ಅಡೆತಡೆಗಳಿವೆ. ಅವುಗಳೇನೆಂದರೆ, ಯಾವುದಾದರೂ ಒಂದು ವಿಷಯದಲ್ಲಿ ರೀಸರ್ಚ್ ಮಾಡುತ್ತಿರುವ ಸಂದರ್ಭದಲ್ಲಿ ಅವರನ್ನು ಆ ಸ್ಥಳದಿಂದ ವರ್ಗ ಮಾಡುತ್ತಾರೆ ಎನ್ನುವ ದೂರು ಇದೆ. ಅದು ನನಗೆ ಗೊತ್ತಿದೆ. ಇನ್ನು ಮುಂದೆ ಅಂತಹ ತೊಂದರೆಗಳಾಗದಂತೆ ನಾನು ಇಲ್ಲಿ ಇರುವವರೆಗೂ ನೋಡಿ ಕೊಳ್ಳುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ. ಸರ್ಕಾರ ಅದರ ಜವಾಬ್ದಾರಿಯನ್ನು ಹೊರುತ್ತದೆ. ಏಕೆಂದರೆ ಅಂತಹ ಭರವಸೆಯನ್ನು ಇವತ್ತು ಸದನದವರು ಅವರಿಗೆ ಕೊಡಬೇಕಾಗುತ್ತದೆ. ವಿಶ್ವೇಶ್ವರಯ್ಯ ನವರಂತಹ ಮತ್ತೊಬ್ಬ ಇಂಜಿನೀಯರ್ ಅನ್ನು ನಾವು ತಯಾರು ಮಾಡಬೇಕಾಗಿದೆ. ನಮ್ಮಲ್ಲಿರುವವರು ಜೂನಿಯರ್ ಇಂಜಿನೀಯರ್ ಆಗಿರಬಹುದು, ಸಿಸ್ಟೆಂಟ್ ಇಂಜಿನೀಯರ್ ಆಗಿರಬಹುದು, ಚೀಫ್ ಇಂಜೀನಿಯರ್ ಆಗಿರಬಹುದು ಅವರಿಗೆ ಎಲ್ಲಾ ರೀತಿಯ ಸಹಾಯ ಹಾಗೂ ರಕ್ಷಣೆಯನ್ನು ಸರ್ಕಾರ ಕೊಡುತ್ತದೆಂಬ ಭರವಸೆಯನ್ನು ಕೊಡುತ್ತೇನೆ, ಇನ್ನೂ ಅನೇಕ ವಿಷಯಗಳು ಹಾಗೆಯೇ ಬಿಟ್ಟುಹೋಗಿರ ಬಹುದು. ಸಮಯ ಬಹಳ ಆಗಿದೆ. ಆದ್ದರಿಂದ ನಾನು ಮಂಡಿಸಿರುವ ಬೇಡಿಕೆಗೆ ತಾವೆಲ್ಲರೂ ಸರ್ವಾನು ಮತದಿಂದ ಒಪ್ಪಿಗೆ ನೀಡಬೇಕೆಂದು ಹೇಳಿ ತಮಗೆಲ್ಲರಿಗೂ ವಂದಿಸಿ, ಅಧ್ಯಕ್ಷರಿಗೂ ವಂದಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

ಶ್ರೀ ಎ. ಜಿ. ಕೊಡಗಿ.—ಪ್ರತಿ ತಾಲ್ಲೂಕಿನಲ್ಲಿ ೫ ಕಿಲೋಮೀಟರ್ ರಸ್ತೆ ದುರಸ್ತಿ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ, ಅದೇರೀತಿ ಪ್ರತಿ ತಾಲೂಕಿನಲ್ಲಿ ಒಂದು ಲಕ್ಷ ರೂಪಾಯಿಗಳಿಗೂ ಮೇಲ್ಪಟ್ಟ ೧ ಅಥವಾ ೨ ಸೇತುವೆಗಳನ್ನು ಕಟ್ಟಿಕೊಡುವ ಕಾರ್ಯಕ್ರಮವನ್ನೂ ಹಾಕಿಕೊಂಡಿದ್ದೀರಿ ಬಹಳ ಸಂತೋಷ. ಆದರೆ ಮಲೆನಾಡಿನ ಪ್ರದೇಶದಲ್ಲಿ ಹೊಳೆಗಳು, ಹಳ್ಳಗಳು ಹೆಚ್ಚಾಗಿ ಇರುವುದರಿಂದ ಮಲೆನಾಡಿನ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇತುವೆಗಳನ್ನು ಮಾಡಿಸಿಕೊಡಬೇಕಾದುದು ಅವಶ್ಯಕ ಇದೆ. ಮತ್ತೊಂದು ಪ್ರಶ್ನೆಯೇನೆಂದರೆ, ತಾಲ್ಲೂಕುವಾರು ಹಣವನ್ನು ವಿಂಗಡಿಸುವ ಯೋಜನೆಯನ್ನು ಹಾಕಿಕೊಂಡಿದ್ದೀರಿ ಸಂತೋಷ. ಆದರೆ ಈಗ ತಾವು ಏನು ತಾಲ್ಲೂಕುವಾರು ಹಣವನ್ನು ವಿಂಗಡಿಸುವ ಯೋಜನೆಯನ್ನು ಹಾಕಿಕೊಂಡಿದ್ದಿರೋ ಅದರಿಂದ ನಮ್ಮಲ್ಲಿ ಒಂದು ಗಾದೆ ಇದೆ ಅದು ನೆನಪಿಗೆ ಬರುತ್ತದೆ. ಅದೇನೆಂದರೆ, ಉಂಡವನಿಗೂ ಒಂದೂ ದೋಸೆ ಉಣ್ಣದವನಿಗೂ ಒಂದು ದೋಸೆ ಎಂಬ ಗಾದೆಯಂತೆ ಆಗಬಾರದು. ಆದ್ದರಿಂದ ಆಯಾ ತಾಲ್ಲೂಕಿನ ಕನಿಷ್ಟ ಬೇಡಿಕೆಗಳನ್ನು ಪರೀಕ್ಷೆ ಮಾಡಬೇಕು. ಮತ್ತು ಕೆಲವು ಪ್ರದೇಶಗಳು ಅಭಿವೃದ್ಧಿಯಾಗಿವೆ. ಕೆಲವು ಪ್ರದೇಶಗಳು ಅಭಿವೃದ್ಧಿಯಾಗಿಲ್ಲ. ಆದ್ದರಿಂದ ಅಭಿ ವೃದ್ಧಿಯಾಗದೇ ಇರುವಂತಹ ಪ್ರದೇಶಗಳಿಗೆ ಹೆಚ್ಚಿನ ಗ್ರಾಂಟನ್ನು ಕೊಡುವ ವಿಚಾರ ಮಾಡುತ್ತೀರಾ ?

ನಮ್ಮ ಉತ್ತರ ಕರ್ನಾಟಕದಲ್ಲಿ ಅನೇಕ ಕಡೆಗಳಲ್ಲಿ ಕಾಡು ಮರಗಳನ್ನು ನೆಟ್ಟಿದ್ದಾರೆ. ಇದರ ಬದಲು ಫಲ ಕೊಡುವಂತಹ ಮಾವು, ಹಲಸು ಮುಂತಾದ ಮರಗಳನ್ನು ಬೆಳೆಸಿದರೆ ಈ ಇಲಾಖೆಗೂ ಆದಾಯ ಬರುತ್ತದೆ. ಆದಕಾರಣ ಇದರ ಕಡೆಗೆ ಮಾನ್ಯ ಮಂತ್ರಿಗಳು ಸೂಕ್ತ ಗಮನ ಹರಿಸಬೇಕೆಂದು ಹೇಳುತ್ತೇನೆ.

೨-೩೦ ಪಿ.ಎಂ.

ಶ್ರೀ ಎಚ್. ಡಿ. ಚೌಡಯ್ಯ.—ನನ್ನ ಭಾಷಣದಲ್ಲಿ ಪ್ರಮುಖವಾಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆ. Rest of expenditure at the end of the financial year,

ಇದನ್ನು ಈ ಇಲಾಖೆಯಲ್ಲಿ ತಡೆಗಟ್ಟದೆ ಹೋದರೆ. ಈಗ ಏನು ಹಣ ದುರುಪಯೋಗವಾಗುತ್ತಿದೆ, ಅದನ್ನು ತಡೆಗಟ್ಟುವುದಕ್ಕೆ ಕಷ್ಟವಾಗುತ್ತದೆ, ಮತ್ತು ಇದು ಭ್ರಷ್ಟಾಚಾರಕ್ಕೆ ಎಡೆಗೊಡುತ್ತದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಇನ್ನು ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ಸನ್ನು ಎಂ.ಎಲ್.ಎ. ಗಳೇ ಆಗಲೀ ಬೇರೆಯವರೆ ಆಗಲೀ ಕೂಡಲೇ ಸಂಪರ್ಕ ಮಾಡಬೇಕೆಂದರೆ, ಅವರಿಗೆ ಟೆಲಿಫೋನ್ ಸೌಲಭ್ಯ ಕೊಟ್ಟಿಲ್ಲ. ಅವರಿಗೂ ಈ ಸೌಲಭ್ಯವನ್ನು ಅವರ ಮನೆಗೆ ಇಲ್ಲದಿದ್ದರೂ ಅವರ ಕಛೇರಿಗಾದರೂ ಒದಗಿಸಬೇಕು. ಇದನ್ನು ಪಾಲಿಸಿ ಮ್ಯಾಟರ್ ಎಂದು ತೆಗೆದುಕೊಂಡು ಶೀಘ್ರವಾಗಿ ಈ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಇನ್ನು ೫ ವರ್ಷಗಳಲ್ಲಿ ದಿನಕೂಲಿಗಾರರನ್ನು ಖಾಯಂ ಮಾಡಲಾಗುವುದೆಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ ೫ ವರ್ಷ ಎಂಬುದು ಬಹಳ ಜಾಸ್ತಿ. ನಾಳೆಯೇ ಮಾಡುತ್ತೇವೆಂದು ಅವರು ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಇನ್ನು ೫ ವರ್ಷದವರೆಗೆ ಅವರು ಯಾವ ರೀತಿ ಜೀವನ ಮಾಡಬೇಕು ಎಂಬ ಪ್ರಶ್ನೆಯೂ ಇಲ್ಲಿ ಬರುತ್ತದೆ. ಕಛೇರಿಯ ನೆರಳಿನಲ್ಲಿ ಕೂತು ಕೆಲಸ ಮಾಡುವ ಜವಾನರಿಗೆ ೩೦೦ ರೂ. ಪಗಾರ ಕೊಡುತ್ತೀರಿ. ಆದರೆ ರಸ್ತೆಯಲ್ಲಿ ಕೆಲಸ ಮಾಡುವವರಿಗೆ ೪–೫ ರೂ. ನಂತೆ ದಿನಗೂಲಿ ಕೊಡಲಾಗುತ್ತಿದೆ. ಅವರನ್ನು ಖಾಯಂ ಮಾಡುವವರೆಗೆ ದಿನಕ್ಕೆ ಕನಿಷ್ಠಪಕ್ಷ ೮ ರೂಪಾಯಿನಂತೆ ಕೂಲಿಯನ್ನು ಹೆಚ್ಚು ಮಾಡುತ್ತೀರಾ ?

ಇನ್ನು ದಾವಣಗೆರೆ ಮತ್ತು ಹರಿಹರದ ನಡುವೆ ೩ ಲೆವೆಲ್ ಕ್ರಾಸಿಂಗ್‌ಗಳಿವೆ ಇಲ್ಲಿ ವಾಹನ ಸಂಚಾರ ಜಾಸ್ತಿಯಿರುವುದರಿಂದ ಲೆವೆಲ್ ಕ್ರಾಸಿಂಗ್‌ಗಳ ಬಳಿ ಅಡೆತಡೆಗಳಾಗುತ್ತಿರುವುದು ತಮಗೂ ಗೊತ್ತಿದೆ ಇದರ ಬಗ್ಗೆ ತಾವು ಏನೂ ಹೇಳಲಿಲ್ಲ. ಈ ಲೆವೆಲ್ ಕ್ರಾಸ್‌ಗಳನ್ನು ತೆಗೆದು ಅಂಡರ್ ಬ್ರಿಡ್ಜ್‌ಗಳನ್ನು ಕಟ್ಟಿಸಲು ಕೂಡಲೇ ಕ್ರಮ ಕೈಗೊಳ್ಳುತ್ತೀರಾ ?

SRI C.M. ARMUGHUM.—I am not seeking any clarification but I would like to say something *i.e.* about the representation of SCs in the Public Works Department.

MR. SPEAKER.—In the temporary establishment ?

SRI C.M. ARMUGHUM.—Yes. Temporary, permanent and everything. Of course, he has noted down and I hope he will also do it. Then, Sir, one S.E. who is working in the Corporation is retiring from the service shortly. I don't know whether he has already retired. For the selection of next promotional post, you need not follow the procedure of interview etc., You can select a couple of Se.s who are efficient and the senior-most persons could be promoted as Chief Engineers. There was a saying that P.W. Department was considered as Number 1 enemy of the SCs in so faras service matter is considered but I know the Hon. Minister will falsify it. As I told you earlier, out of 1500 Assistant Excutive Engineers, there are only 13 Engineers who belongs to SCs and for the last 17 years, there was no direct recruitment in the P.W. Department. They have conspired to avoid the recruitment of SCs in this Department

In addition, I am so much pleased and I congratulate the Hon. Minister and thank him very much for having taken a historic decision to regularise 24,000 Gangmen including the work charge establishments. On their behalf, I thank the Hon, Minister very much.

ಶ್ರೀ ರಾಮಚಂದ್ರ ರೆಡ್ಡಿ.—ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಈ ಇಲಾಖೆಯಲ್ಲಿ ಹಣ ಉಳಿತಾಯ ಮಾಡುವ ಬಗ್ಗೆ ಸಲಹೆಗಳನ್ನು ಕೊಡಿ ಎಂದು ನಮಗೆ ತಿಳಿಸಿದರು. ಅದರಂತೆ ಕೆಲವು ಸಲಹೆಗಳನ್ನು ಕೊಡುತ್ತೇನೆ. ಟೆಂಡರ್ ಜೊತೆಯಲ್ಲಿಯೇ ಡಿಜೈನನ್ನು ಕೊಡಬೇಕೆಂದು ತಾವು ಕಡ್ಡಾಯ ಮಾಡಬೇಕು. ಈಗಿನ ಕ್ರಮದಲ್ಲಿ ಗೋಲಿಮಾರ್ ನಡೆಯುತ್ತಿದೆ. ಇದನ್ನು ತಡೆಗಟ್ಟಲು ಇದನ್ನು ತಾವು ಕಡ್ಡಾಯ ಮಾಡಬೇಕು. ಈಗ ಕ್ಲಾಸ್—೧ ಕಂಟ್ರಾಕ್ಟರ್‌ಗೆ ಇ.ಎಂ.ಡಿ.ಯನ್ನು ರೆಡ್ಯೂಸ್ ಮಾಡಿದ್ದೀರಿ. ಅದರಂತೆ ಕ್ಲಾಸ್—೨, ಕ್ಲಾಸ್—೩, ಕ್ಲಾಸ್—೪, ಗೂ ರೆಡ್ಯೂಸ್ ಮಾಡಿದರೆ ಪೈಪೋಟಿಯಲ್ಲಿ ಟೆಂಡರುಗಳು ಬರುತ್ತವೆ. ಇದರಿಂದ ಇಲಾಖೆಗೂ ಆದಾಯ ಬರುತ್ತದೆ.

ಇನ್ನು ಕೆಳ ಮಟ್ಟದ ಅಧಿಕಾರಿಗಳಿಗೂ ಸಹ ಆಲ್ಟರೇಷನ್ ಪವರ್ ಕೊಟ್ಟಿದ್ದೀರಿ. ಇದರ ಬದಲು ಯಾರು ಟೆಕಿಕಲ್ ಸ್ಯಾಂಕ್ಷನ್ ಮಾಡುತ್ತಾರೋ ಅಂತಹ ಅಧಿಕಾರಿಗಳಿಗೆ ಈ ಪವರ್ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಎ.ಆರ್. ವರ್ಕ್ಸ್‌ನಲ್ಲಿ ಬಹಳ ಅನ್ಯಾಯಗಳಾಗುತ್ತಿದೆ. ಆದ ಕಾರಣ ಓಪನ್ ಆಗಿ ಒಂದೊಂದು ಗ್ರೂಪ್ ತರಹ ಮಾಡಿ ಟೆಂಡರ್ ಮೂಲಕ ಕೆಲಸ ಮಾಡಿಸಿದರೆ ಇಲಾಖೆಗೆ ೩೦ ಪರ್ಸೆಂಟ್ ನಷ್ಟು ಉಳಿತಾಯ ವಾಗುತ್ತದೆಂದು ಹೇಳುತ್ತೇನೆ. ನಾನು ಹೇಳಿದ ಈ ಕ್ರಮಗಳನ್ನು ಜಾರಿಗೆ ತಂದರೆ ಈ ವರ್ಷವೇ ಆದಷ್ಟೂ ಉಳಿತಾಯವಾಗುತ್ತದೆ. ಇದರಿಂದ ನಿಮ್ಮ ಅಧಿಕಾರಿಗಳಿಗೆ ಸಂಬಳ ಹೆಚ್ಚು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಸಿ. ರುದ್ರಪ್ಪ.—ಮಾನ್ಯ ಮಂತ್ರಿಗಳು ಬಹಳ ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ. ೧೯೭೮–೭೯ನೇ ಸಾಲಿನ ಅಂಕಿಅಂಶಗಳನ್ನು ನೋಡಿದಾಗ ಮಾಡತಕ್ಕಂಥ ಕೆಲಸಗಳು ಜಾಸ್ತಿ ಇದ್ದು ಹಣದ ಸಂಗ್ರಹ ಮಾತ್ರ ಬಹಳ ಕಡಿಮೆ ಇದೆ ಎಂಬುದಾಗಿ ನಾನು ಬೆಳಗಿನಿಂದಲೂ ಚಿಂತೆ ಮಾಡುತ್ತಿದ್ದೇನೆ.

ಅಧ್ಯಕ್ಷರು: ತಾವು ಸ್ಪಷ್ಟಕಾರಣ ಕೇಳಿ, ಭಾಷಣ ಮಾಡಬೇಡಿ;

ಶ್ರೀ ಸಿ. ರುದ್ರಪ್ಪ.—ನಮ್ಮ ಸೊಂಡೂರು, ತೋರಣಗಲ್ಲು. ಬಳ್ಳಾರಿ, ಇಲ್ಲೆಲ್ಲಾ ಇರತಕ್ಕಂಥ ರಸ್ತೆಗಳನ್ನು ಅಗಲ ಮಾಡಬೇಕು. ಏಕೆಂದರೆ ಅಲ್ಲಿ ಜನರ ಓಡಾಟ ಜಾಸ್ತಿಯಾಗಿದೆ ಮತ್ತು ನೂರಾರು ಲಾರಿಗಳು ಓಡಾಡುತ್ತವೆ. ಅದಕ್ಕಾಗಿ ರಸ್ತೆಗಳನ್ನು ಅಗಲ ಮಾಡಬೇಕೆಂದು ಹೇಳುತ್ತೇನೆ ಮತ್ತು ಆ ಭಾಗದಲ್ಲಿ ಒಂದು ಗೆಸ್ಟ–ಹೌಸ್ ಕಟ್ಟಬೇಕೆಂದು ಹೇಳುತ್ತೇನೆ.

ಶ್ರೀ ವಿ.ವಿ. ಬಾವಿ.—ನಾನು ನನ್ನ ಭಾಷಣದಲ್ಲಿ ಒಂದು ಸೇತುವೆಯ ಬಗ್ಗೆ ಹೇಳಿದ್ದೆ. ಅದು ಕಳೆದ ೨೦ ವರ್ಷಗಳಿಂದ ಪೆಂಡಿಂಗ್‌ನಲ್ಲಿದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಬಿ. ಬಾಸ್ಕರಶೆಟ್ಟಿ.—ನಮ್ಮ ಮಂಗಳೂರಿನ ಈಗಿನ ವಿಮಾನ ನಿಲ್ದಾಣ ಬಹಳ ಅಪಾಯಕಾರಿಯಾಗಿದೆ. ಈ ಕಾರಣದಿಂದ ಅಲ್ಲಿ ಇನ್ನೊಂದು ವಿಮಾನ ನಿಲ್ದಾಣ ರಚನೆ ಮಾಡುವುದಕ್ಕೆ ಕಾರ್ಯಕ್ರಮ ಕೈ ಕೊಂಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಸಾಧಾರಣವಾಗಿ ೪ ವರ್ಷಗಳ ಹಿಂದೆ ಪಡುಬದ್ರಿಯ ಬಳಿ ಇರತಕ್ಕಂಥ ೫೦೦ ಎಕರೆಗಳಷ್ಟು ಸಮತಟ್ಟಾದ ಜಮೀನಿನಲ್ಲಿ ವಿಮಾನ ನಿಲ್ದಾಣ ಮಾಡಬಹುದೆಂದು ಆಗಿನ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು, (ಅವರು ಈಗ ಚೀಫ್–ಇಂಜಿನಿಯರ್ ಆಗಿದ್ದಾರೆ) ೬ ಕೋಟಿ ರೂ. ಗಳ ಒಂದು ಅಂದಾಜನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟರು. ಇಷ್ಟರವರೆಗೆ ಅದರ ಗತಿ ಏನಾಯಿತೆಂಬುದನ್ನು ನಮಗೆ ಗೊತ್ತಿಲ್ಲ. ಆ ಜಾಗ ಈಗಲೂ ಹಾಗೆಯೇ ಉಳಿದಿದೆ. ಜನತಾ ನಿವೇಶನ ಮಾಡುವುದಕ್ಕೂ ಆ ಜಾಗವನ್ನು ಕೊಟ್ಟಿಲ್ಲ.

ಅಧ್ಯಕ್ಷರು:—ತಮಗೆ ಆ ಜಾಗ ಯಾವುದಕ್ಕೆ ಬೇಕು? ಜನತಾ ನಿವೇಶನಗಳಿಗೋ ಅಥವಾ ವಿಮಾನ ನಿಲ್ದಾಣಕ್ಕೋ?

ಶ್ರೀ ಬಿ. ಬಾಸ್ಕರ ಶೆಟ್ಟಿ.—ಅಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣವಾಗಬೇಕೆಂಬುದೇ ನಮ್ಮೆಲ್ಲರ ಇಚ್ಛೆಯಾಗಿದೆ. ಈಗಿನ ವಿಮಾನ ನಿಲ್ದಾಣದಲ್ಲಿ ಬೋಯಿಂಗ್ ವಿಮಾನಗಳು ಬಂದರೆ ಅಲ್ಲಿ ಮಂಜೇನಾದರೂ ಇದ್ದರೆ, ಇಳಿಯಲು ಸಾಧ್ಯವಾಗದೆ ವಾಪಸ್ ಬೆಂಗಳೂರಿಗೆ ಹೋಗುತ್ತಿರುವುದು ಉಂಟು. ಇದರ ಜೊತೆಗೆ ದೊಡ್ಡ ವಿಮಾನಗಳು ಬಂದರೆ ಅಲ್ಲಿ ಲ್ಯಾಂಡ್ ಮಾಡುವುದಕ್ಕಾಗುವುದಿಲ್ಲ. ಅದು ಅಷ್ಟು ನಿಕೃಷ್ಟ ಪರಿಸ್ಥಿತಿಯಲ್ಲಿದೆ. ಇದನ್ನು ಹಾಗೆಯೇ ಬಿಟ್ಟರೆ ಅಲ್ಲಿ ದುರಂತ ಸಂಭವಿಸಬಹುದು. ಆದ ಕಾರಣ ತಾವು ಈ ಬಗ್ಗೆ ಕೇಂದ್ರಸರ್ಕಾರದ ಗಮನವನ್ನು ಸೆಳೆದಿದ್ದೀರಾ? ಮತ್ತು ಈ ಕೆಲಸ ಯಾವಾಗ

ಆಗುತ್ತದೆಂಬುದನ್ನು ತಾವು ಹೇಳಬೇಕು? ಕುದುರೆ ಮುಖ ಯೋಜನೆಯಲ್ಲಿ ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆಯವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಕೆಲಸಕಾರ್ಯದ ತೀವ್ರತೆಯಲ್ಲಿ ಕಂಟ್ರಾಕ್ಟರುಗಳು ಮಾಡಿದ ಕೆಲಸಕ್ಕೆ ಬಿಲ್ ಮಾಡುವುದರಲ್ಲಿ ಸ್ವಲ್ಪ ತೊಂದರೆಯಾಗಿದ್ದು, ಅವರು ಬ್ಯಾಂಕಿನಿಂದ ತಂದ ಹಣಕ್ಕೆ ಬಡ್ಡಿ ಕಟ್ಟುತ್ತಿದ್ದಾರೆಂದು ಕೇಳಿದ್ದೇನೆ. ಸರ್ಕಾರದವರು ಇದರ ಬಗ್ಗೆ ಗಮನ ಕೊಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ವಿವರಣೆ ಕೇಳುವುದಿಲ್ಲ. ಆದರೆ, ಮಾನ್ಯ ಸಚಿವರಿಂದ ಒಂದು ಭರವಸೆ ಕೇಳುತ್ತೇನೆ. ನಮ್ಮ ರಾಜ್ಯದ ಇಂಜಿನಿಯರುಗಳಿಗೆ ಎಚ್ಚರಿಕೆ ಕೊಡುತ್ತ ಮಾನ್ಯ ಸಚಿವರು ವಿಶ್ವೇಶ್ವರಯ್ಯನವರಂಥ ಇಂಜಿನಿಯರುಗಳು ಬರಬೇಕೆಂದು ಕರೆ ಇತ್ತಿದ್ದಾರೆ. ನಮ್ಮ ರಾಜ್ಯದ ಇಂಜಿನಿಯರುಗಳು ಶರಾವತಿ, ಕೃಷ್ಣ, ಕಾವೇರಿ ಮತ್ತು ಕಾಳಿ ಯೋಜನೆಗಳಲ್ಲಿ ಅಭಿಮಾನ ಪಡುವಂಥ ಕಾರ್ಯಗಳನ್ನು ಮಾಡಿದ್ದಾರೆ. ಆದರೆ, ತೊಂದರೆ ಏನೆಂದರೆ, ಇಂಜಿನಿಯರುಗಳನ್ನು ರಾಜಕೀಯಕ್ಕೆಳೆದು ಅವರನ್ನು ರಾಜಕೀಯವಾಗಿ ಲಾಭ ಮಾಡಿ ಕೊಳ್ಳುವುದಕ್ಕೆ ಕೆಲವರು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಅನೇಕ ಸಾರಿ ಅಗತಕ್ಕ ಕೆಲಸಗಳು ಸರಿಯಾಗಿ ಆಗುತ್ತಿಲ್ಲ. ಇದು ಇಂಜಿನಿಯರುಗಳ ತಪ್ಪಲ್ಲ, ಅವರನ್ನು ರಾಜಕೀಯಕ್ಕೆಳೆಯುವವರು ಮಾಡುವ ತಪ್ಪು. ಇಂಜಿನಿಯರುಗಳನ್ನು ರಾಜಕೀಯಕ್ಕೆಳೆಯಬಾರದು, ಅವರನ್ನು ಸ್ವತಂತ್ರವಾಗಿ ಬಿಡಬೇಕು. ಒಂದು ವೇಳೆ ಅವರು ತಪ್ಪು ಮಾಡಿದರೆ ಶಿಕ್ಷೆ ವಿಧಿಸಬೇಕು. ಅವರನ್ನು ರಾಜಕೀಯಕ್ಕೆಳೆಯುವುದು ನಿಂತು ಹೋದರೆ, ಇಲಾಖೆಯ ಕೆಲಸಗಳು ತ್ವರಿತಗತಿಯಲ್ಲಿ ಆಗುವುದಕ್ಕೆ ಸಾಧ್ಯವಾಗುತ್ತದೆ. ರಾಜಕೀಯ ಹಸ್ತಕ್ಷೇಪ ನಿಂತರೆ ನಮ್ಮ ಇಂಜಿನಿಯರುಗಳು ಚೆನ್ನಾಗಿ ಕೆಲಸ ಮಾಡುತ್ತಾರೆ.

ಶ್ರೀ ಗೂಡು ಸಾಹೇಬ್ ಕೆ.—ಹೊಸ ಪೇಟೆಯಲ್ಲಿ ತುಂಗಭದ್ರ ಬೋರ್ಡ್ ಇದೆ. ಆದರಿಂದ ನಮ್ಮ ರಾಜ್ಯಕ್ಕೆ ಯಾವ ಕೆಲಸವೂ ಬೇಗ ಆಗುವುದಿಲ್ಲ. ಇದನ್ನು ಸರ್ಕಾರದವರು ಗಮನಿಸಬೇಕೆಂದು ಹೇಳುತ್ತೇನೆ ಮತ್ತು ಈ ಬಗ್ಗೆ ಒಂದು ಪಾಲಸಿ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಎತ್ತಿರುವ ಹಲವಾರು ವಿಚಾರಗಳಿಗೆ ಉತ್ತರ ಸಿದ್ಧವಾಗಿದೆ. ಆದರೂ ಕೂಡ ನಾನು ಕೆಲವು ವಿಚಾರಗಳಿಗೆ ಮಾತ್ರ ಉತ್ತರ ಕೊಡುತ್ತೇನೆ. ಏಕೆಂದರೆ, ಅವುಗಳಲ್ಲಿ ಹಲವಾರು ವಿಚಾರಗಳಿಗೆ ನಾನಾಗಲೇ ಉತ್ತರಿಸಿದ್ದೇನೆ. ತಾಲ್ಲೂಕುವಾರು ಹಣ ಹಂಚಿಕೆ ವಿವರವನ್ನು ಕೇಳಿರುವ ಶ್ರೀ ಕೊಡಗಿಯವರು, ಹಿಂದೆ ಅವರ ತಾಲ್ಲೂಕಿಗೆ ಕಡಮೆ ಹಣ ಹಂಚಿದ್ದರಿಂದ ಈ ಸಲ ಅದನ್ನು ಸರಿಪಡಿಸಿ ಎಂದು ಹೇಳಿದ್ದಾರೆ. ಈ ವರ್ಷ ಸರಿಯಾಗಿ ಕೊಡಲಾಗಿದೆ ಎಂದು ಅವರಿಗೆ ಹೇಳ ಬಯಸುತ್ತೇನೆ. ಇನ್ನು ಸಾಲು ವರ್ಗಗಳ ಬಗ್ಗೆ ನಾನು ಆಗಲೇ ಉತ್ತರ ಕೊಟ್ಟಿದ್ದೇನೆ. ಇನ್ನು ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರುಗಳಿಗೆ ದೂರವಾಣಿ ಸೌಲಭ್ಯ ಒದಗಿಸಬೇಕೆನ್ನುವ ವಿಚಾರ. ಈಗ ಕೆಲವು ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರುಗಳ ಕಛೇರಿಗಳಿಗೆ ದೂರವಾಣಿ ಸೌಲಭ್ಯ ಒದಗಿಸಲಾಗಿದೆ. ಇದರ ಬಗ್ಗೆ ಸರ್ಕಾರ ಕೂಡಲೇ ತೀರ್ಮಾನ ಮಾಡಿ ಎಲ್ಲಾ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರುಗಳ ಕಛೇರಿಗಳಿಗೆ ದೂರವಾಣಿ ಸೌಲಭ್ಯವನ್ನು ಒದಗಿಸುವುದು. ಇದರಿಂದ ಶಾಸಕರಿಗೆ, ಸಾರ್ವಜನಿಕರಿಗೆ ಮತ್ತು ಸರ್ಕಾರಕ್ಕೆ ಅನುಕೂಲವಾಗುತ್ತದೆ. ಇನ್ನು, ಹರಿಜನ ಮುಖ್ಯ ಇಂಜಿನಿಯರೊಬ್ಬರು ನಿವೃತ್ತರಾಗುವ ಸಂದರ್ಭವಿದೆಯಾದ್ದರಿಂದ ಆ ಸ್ಥಳಕ್ಕೆ ಒಬ್ಬ ಹರಿಜನ ಸೂಪರಿಂಟೆಂಡೆಂಟ್ ಇಂಜಿನಿಯರನ್ನು ಸೆಲೆಕ್ಷನ್ ಗ್ರೇಡ್ ಮುಖ್ಯ ಇಂಜಿನಿಯರ್ ಎಂದು ಮಾಡಬೇಕೆಂದು ಮಾನ್ಯ ಆರುಮುಗಂ-ಅವರು ಹೇಳಿದರು. ಬಡ್ತಿ ವಿಚಾರದಲ್ಲಿ ಸರ್ಕಾರ ತನ್ನ ನೀತಿಯನ್ನು ವ್ಯಕ್ತಪಡಿಸಿದೆ, ಮತ್ತು ಅದರಂತೆ ಅದು ನಡೆದುಕೊಳ್ಳುತ್ತದೆ. ಬಡ್ತಿ ವಿಚಾರದಲ್ಲಿ ಹರಿಜನರಿಗೆ ಅನ್ಯಾಯವಾಗದ ರೀತಿ ಸರ್ಕಾರ ನಡೆದುಕೊಳ್ಳುತ್ತದೆ ಮತ್ತು ಹರಿಜನ ಮುಖ್ಯ ಇಂಜಿನಿಯರೊಬ್ಬರು ಇರುವಂತೆ ಸರ್ಕಾರ ನೋಡಿ ಕೊಳ್ಳುತ್ತದೆ, ಇದರಲ್ಲಿ ಸಂಶಯ ಬೇಡ.

ಶ್ರೀ ಮಲ್ಲಿಕಾರ್ಜುನ್ ಖಾರ್ಗೆ.—ಸರ್ಕಾರ ಹೊರಡಿಸಿರುವ ಬಡ್ತಿಗೆ ಸಂಬಂಧಪಟ್ಟ ಆದೇಶ ಇಲ್ಲಿಗೆ ಅನ್ವಯಿಸುವುದಿಲ್ಲವೆಂದು ನನ್ನ ಅಭಿಪ್ರಾಯ. Tahsildar can become Assistant

Commissioner, B.D.O. can become B.D A. Whereas that is not applicable here. They have not taken this issue.

ಶ್ರೀ ಎಸ್. ಬಂಗಾರಪ್ಪ.—ಇದು ಕಾನೂನು ಪ್ರಶ್ನೆಯಾಗುತ್ತದೆ.

SRI MALLIKARJUNA KHARGE.—When you canno promote Assistant Engineer to th cadre of Executive Engineer, there is no question of promoting Superinting Engineer to the cadre of Chief Engineer.

ಶ್ರೀ ಎಸ್. ಬಂಗಾರಪ್ಪ.—ಹರಿಜನ ಮುಖ್ಯ ಇಂಜಿನಿಯರ್ ಒಬ್ಬರು ನಿವೃತ್ತರಾದ ಮೇಲೆ ಬೇರೆ ಯಾರೂ ಹರಿಜನ ಮುಖ್ಯ ಇಂಜಿನಿಯರ್ ಅವರು ಇರುವುದಿಲ್ಲ ಎನ್ನುವ ಭಾವನೆಯನ್ನು ಮಾನ್ಯ ಆರ್ಮುಗಂ ಅವರು ವ್ಯಕ್ತಪಡಿಸಿದರು. ಹರಿಜನರಿಗೆ ಅನ್ಯಾಯವಾಗದ ಹಾಗೆ ಕನಿಷ್ಟಪಕ್ಷ ಒಬ್ಬರಾದರೂ ಹರಿಜನ ಮುಖ್ಯ ಇಂಜಿನಿಯರ್ ಇರುವಂತೆ ಮಾಡಲಾಗುವುದೆಂದು ಈಗಾಗಲೇ ಹೇಳಿದ್ದೇನೆ. ಈಗ ತಾವು ಕಾನೂನು ವಿಚಾರ ಪ್ರಸ್ತಾಪ ಮಾಡಿದ್ದೀರಿ. ಇದರ ಬಗ್ಗೆ ಸರ್ಕಾರ ತೀರ್ಮಾನ ಮಾಡಬೇಕಾಗುತ್ತದೆ ನಾನು ಮಾನ್ಯ ಆರ್ಮುಗಂ ಅವರಿಗೆ ಭರವಸೆ ನೀಡುವ ಮುನ್ನ ಕಾನೂನು ಈ ರೀತಿ ಇದೆ ಎನ್ನುವುದು ಗಮನಕ್ಕೆ ಬಂದಿರಲಿಲ್ಲ. ಆದುದರಿಂದ ಇದರ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಪಡೆದು ಸರ್ಕಾರ ಯೋಗ್ಯ ತೀರ್ಮಾನ ತೆಗೆದು ಕೊಳ್ಳುತ್ತದೆಂದು ಹೇಳುತ್ತೇನೆ. ಮಾನ್ಯ ರೆಡ್ಡಿಯವರ ಭಾಷಣವನ್ನು ನಾನು ಸಂಪೂರ್ಣವಾಗಿ ಕೇಳಿದೆ, ಅವರು ನೀಡಿದ ಸಲಹೆಗಳನ್ನು ನಾನು ಮರೆಯುವುದಿಲ್ಲ. ಮಾನ್ಯ ಪಂಪಾಪತಿಯವರು ಗ್ಯಾಂಗ್‌ಮನ್‌ಗಳ ಬಗ್ಗೆ ಕೇಳಿರುವ ಐದು ವರ್ಷಗಳ ಕಾಲಾವಕಾಶ ಬಹಳವಾಯಿತೆಂದರು. ಈ ತೀರ್ಮಾನಕ್ಕೆ ನಾವು ಬರಬೇಕಾದರೆ ಕೆಲವು ಗಂಟೆಗಳನ್ನೇ ನಾವು ಇದಕ್ಕಾಗಿ ವ್ಯಯ ಮಾಡಿದ್ದೇವೆ ಮತ್ತು ಸರ್ಕಾರಿ ಅಧಿಕಾರಿಗಳ ಶ್ರಮ ಇದರಲ್ಲಿದೆ ಎನ್ನುವುದನ್ನು ಅವರು ಮರೆಯಬಾರದು.

ಶ್ರೀ ಪಂಪಾಪತಿ.—೨೦ ವರ್ಷಗಳ ಕಾಲ ಕೆಲಸ ಮಾಡಿ, ಈಗ ಇನ್ನೂ ಐದು ವರ್ಷದವರೆಗೆ ಕಾಯಲಿ ಎಂದು ಹೇಳಿದರೆ ಏನರ್ಥ?

ಶ್ರೀ ಎಸ್ ಬಂಗಾರಪ್ಪ.—ಈಗ ಮಾನ್ಯ ಸದಸ್ಯರು ಅವರ ಭಾವನೆಯಲ್ಲಿ ತಪ್ಪು ಅಭಿಪ್ರಾಯ ಗ್ರಹಿಸಿದ್ದಾರೆ. ಯಾರು ೨೦ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ ಅವರು ಇನ್ನೂ ೫ ವರ್ಷ ಕಾಲ ಕಾಯಬೇಕಾಗಿಲ್ಲ. ಯಾರು ಹೆಚ್ಚು ವರ್ಷ ಕೆಲಸ ಮಾಡಿದ್ದಾರೆ ಅವರು ಈ ವರ್ಷ ಖಾಯಂ ಆಗುತ್ತಾರೆ. ನಂತರ ಮುಂದಿನ ವರ್ಷ ಇನ್ನೂ ಸ್ವಲ್ಪ ಜನ ಖಾಯಂ ಆಗುತ್ತಾರೆ. ಇದೇ ರೀತಿ ವರ್ಷೇ ವರ್ಷೇ ಖಾಯಂ ಆಗುತ್ತಾ ಇರುತ್ತಾರೆ. ಈಗ ೨ ಕೋಟಿ ರೂಪಾಯಿ ಹಣ ಹೇಗೆ ತರಬೇಕು ಎಂದು ವಿಚಾರ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಸರ್ವಸಮ್ಮತವಾದ ತೀರ್ಮಾನ ಮಾಡಬೇಕಾಗುತ್ತದೆ. ನನಗೇನೋ ಈಗಲೇ ಈ ೨೪ ಸಾವಿರ ಜನರನ್ನು ಖಾಯಂ ಮಾಡಬೇಕು ಎಂದು ಇದೆ. ಆದರೆ ಅದಕ್ಕೆ ಹಣ ಬೇಕಾಗುತ್ತದೆ. ಹಣ ಇಲ್ಲದೆ ನಾವು ನೀವು ಭಾಷಣ ಮಾಡಿದರೆ ಏನೂ ಉಪಯೋಗವಾಗುವುದಿಲ್ಲ. ಈಗ ಇರತಕ್ಕ ಸೀನಿಯಾರಿಟಿ ಲಿಸ್ಟ್ ಮೇಲೆ ಹಂತಹಂತವಾಗಿ ಖಾಯಂ ಆಗುತ್ತಾರೆ. ಇದು ಇರತಕ್ಕ ಪರಿಸ್ಥಿತಿ. ನಾನು ಈ ಇಲಾಖೆ ವಹಿಸಿಕೊಂಡ ಮೇಲೆ ಕೆಲವರನ್ನು ಬಿಡಿಸಬೇಕು ಎಂದು ಮಾಡುತ್ತಿದ್ದರು. ಈಗ ನಾನು ಯಾರನ್ನೂ ಕೂಡ ಬಿಡಿಸಬಾರದು ಎಂದು ಸ್ಪಷ್ಟವಾಗಿ ಆದೇಶ ಕೊಟ್ಟಿದ್ದೇನೆ. ಆದ್ದರಿಂದ ವರ್ಕ್‌ಚಾರ್ಜ್‌ನಲ್ಲಿರತಕ್ಕವರಿಗೆ, ಮತ್ತು ಗ್ಯಾಂಗ್‌ಮನ್‌ಗಳಿಗೆ ಯಾವ ತೊಂದರೆ ಆಗುವುದಿಲ್ಲ. ಇನ್ನು ಮಾನ್ಯ ಸದಸ್ಯರೊಬ್ಬರು ನಮ್ಮ ಕಡೆ ರಸ್ತೆ ಅಗಲ ಮಾಡಬೇಕು ಎಂದು ಹೇಳಿದ್ದಾರೆ ಅವರು ಆ ಊರಿನ ಹೆಸರುಗಳನ್ನು ಕೊಟ್ಟರೆ ನಾನು ಅದರ ಬಗ್ಗೆ ನೋಡಿಸುತ್ತೇನೆ. ಇನ್ನು ಮಂಗಳೂರು ಏರ್‌ಪೋರ್ಟ್ ಬಗ್ಗೆ ಮಾನ್ಯ ಸದಸ್ಯರಾದ ಭಾಸ್ಕರ ಶೆಟ್ಟಿಯವರು ಕೇಳಿದ್ದಾರೆ. ಅದರ ಬಗ್ಗೆ ವಿವರಣೆಯನ್ನು ನಾನು ಈ ಸದನದಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ಈಗ ಅಲ್ಲಿ ಮಂಜು ಕವಿದರೆ ವಿಮಾನ ಇಳಿಯಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ನಾವು ಅದರ ಬಗ್ಗೆ ಚರ್ಚೆ ಮಾಡಿ ನೋಡೋಣ. ರಕ್ಷಣೆಯ ಹಿತದೃಷ್ಟಿಯಿಂದ ಒಳ್ಳೆಯ ವ್ಯವಸ್ಥಿತವಾದ ರೀತಿಯಲ್ಲಿ ಇರಬೇಕು. ಏಕೆಂದರೆ ವಿಮಾನ ಏನಾದರೂ ಸ್ವಲ್ಪ ಹೆಚ್ಚು ಕಡಿಮೆಯಾದರೂ ಒಳಗಡೆ ಇದ್ದವರು ಏನಾಗುತ್ತಾರೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಆದುದರಿಂದ ಈ

ವಿಚಾರವನ್ನು ಮಾನ್ಯ ಸದಸ್ಯರು ಸರ್ಕಾರದ ಕಡೆಗೆ ಬಿಟ್ಟುಬಿಡಿ. ತಾಂತ್ರಿಕವಾಗಿ ಇದನ್ನೆಲ್ಲಾ ಯೋಚನೆ ಮಾಡಿ ಮಾಡುತ್ತೇವೆ. ಇನ್ನು ಮಾನ್ಯ ಸದಸ್ಯರೊಬ್ಬರು ಕುದುರೆ ಮುಖನಲ್ಲಿ ಕಂಟ್ರಾಕ್ಟ್‌ದಾರರು ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅದೇ ರೀತಿ ನಮಗೆ ನಾಲ್ಕೈದು ಕಂಟ್ರಾಕ್ಟರುಗಳಿಂದ ಅರ್ಜಿ ಬಂದಿದೆ. ಅದರ ವಿಷಯ ನೋಡಿದ್ದೇನೆ. ಕಾನೂನು ಚೌಕಟ್ಟಿನಲ್ಲಿ ಅವರಿಗೆ ಅನುಕೂಲಮಾಡಿಕೊಡಲಿಕ್ಕೆ ಬಂದರೆ ಮಾಡಿಕೊಡುತ್ತೇನೆ. ಇಲ್ಲದೇ ಹೋದರೆ ಬಹಳ ಕಷ್ಟ ಆಗುತ್ತದೆ ಎಂದು ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರೊಬ್ಬರು ತುಂಗಭದ್ರ ವಿಚಾರ ಹೇಳಿದರು, ಅದು ನನ್ನ ಖಾತೆಗೆ ಬರುವುದಿಲ್ಲ. ಈಗ ನನ್ನ ಹತ್ತಿರ ಮಾನ್ಯ ಸದಸ್ಯರಿಗೆ ಬೇಕಾಗತಕ್ಕಂತಹ ಉತ್ತರದಲ್ಲಿ ಎಪ್ಪತ್ತೈದು ಪರ್‌ಸೆಂಟ್ ಉತ್ತರ ಇದೆ. ಆದರೆ ಕಾಲದ ಅಭಾವ ಇರುವುದರಿಂದ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರಿಗೆ ಯಾವುದೇ ಉತ್ತರ ಬೇಕಾದರೂ ನನ್ನ ಬಳಿ ಬಂದರೆ ಅವರಿಗೆ ಪೂರ್ಣ ವಿವರ ಕೊಡುತ್ತೇನೆ. ಆದುದರಿಂದ ಮಾನ್ಯ ಸದಸ್ಯರು ಕೇಳಿದವರಿಗೆ ಮಾತ್ರ ಉತ್ತರ ಹೇಳುತ್ತಿದ್ದಾರೆ ಎಂದು ತಿಳಿದುಕೊಳ್ಳಬಾರದು. ಇನ್ನು ಮಾನ್ಯ ವಿರೋಧ ಪಕ್ಷದ ನಾಯಕರಾದ ಬೊಮ್ಮಾಯಿಯವರು ರಾಜಕೀಯ ಹಸ್ತಕ್ಷೇಪ ಬರಬಾರದು ಎಂದು ಹೇಳಿದರು. ಈಗ ಅವರು ಇಲ್ಲಿ ಇಲ್ಲದೇ ಇರುವುದರಿಂದ ಮಾನ್ಯ ಸದಸ್ಯರಾದ ಲಕ್ಷ್ಮೀಸಾಗರ ಅವರಿಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ರಾಜಕೀಯ ಹಸ್ತಕ್ಷೇಪ ಸಲ್ಲದು, ಅದನ್ನು ಯಾರು ಒಪ್ಪುವ ಮಾತಲ್ಲ. ರಾಜಕೀಯ ಹಸ್ತಕ್ಷೇಪ ಬಂದಾಗ ಎಲ್ಲ ಮೂಲಗಳಿಂದ ಗಮನಿಸುವುದು ಒಳ್ಳೆಯದು. ಇವೊತ್ತು ಮಂತ್ರಿಯಾಗಿ ರಾಜಕೀಯ ಮಾಡಿದರೆ, ಒಬ್ಬ ಆಫೀಸರ್ ರಾಜಕೀಯ ಮಾಡಿದರೆ ಅದು ರಾಜಕೀಯ ಹಸ್ತಕ್ಷೇಪವಾಗುತ್ತದೆ. ಅದನ್ನೇ ಸರ್ಕಾರದಿಂದ ಎಂದು ವ್ಯಕ್ತಪಡಿಸುವುದು ಬೇಡ. ಅದಕ್ಕೆ ನಾವು ನೀವು ಸೇರಿ ಒಳ್ಳೆಯ ವಾತಾವರಣ ಉಂಟು ಮಾಡಬೇಕು. ಇದು ನಮ್ಮ ಸರ್ಕಾರದ ಜವಾಬ್ದಾರಿ ಇದೆ ನಾನು ನುಣಚಿಕೊಳ್ಳುವ ಮಾತನ್ನು ಆಡುವುದಿಲ್ಲ. ಇದು ಪ್ರಮುಖವಾದ ವಿಷಯ. ಇದಕ್ಕೆ ಗಮನ ಕೊಡಲೇ ಬೇಕು. ಆದ್ದರಿಂದ ಒಳ್ಳೆಯ ವಾತಾವರಣ ನಿರ್ಮಾಣ ಮಾಡುವುದಕ್ಕೆ ತಮ್ಮೆಲ್ಲರ ಸಹಕಾರ ಕೋರುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಒಂದು ವಿಚಾರ ಹೇಳಬೇಕು ಎಂದರೆ, ಸಾರ್ವಜನಿಕ ಹಿತದೃಷ್ಟಿಯಿಂದ ನಮ್ಮ ಕಡೆಗೆ ಒಳ್ಳೆಯ ಆಫೀಸರ್ ಹಾಕಿಕೊಡಿ ಎಂದು ಕೇಳುತ್ತಾರೆ. ಅದರೂ ಕೂಡ ಅವರು ಹೇಳಿದಂತಹ ಆಫೀಸರ್‌ಗಳನ್ನು ಹಾಕಿಕೊಡಲಿಕ್ಕೆ ಆಗುವುದಿಲ್ಲ. ಈ ವಿಚಾರ ತಾವು ಇಲ್ಲಿ ಕುಳಿತಿದ್ದರೆ ತಮಗೆ ಅರ್ಥವಾಗುತ್ತಿತ್ತು ತಾವು ಈ ತರಹ ವರ್ಗಾವಣೆ ಮಾಡಿಕೊಡುವುದನ್ನೇ ರಾಜಕೀಯ ಎಂದು ತಿಳಿಯುವುದಾದರೆ ಬಹಳ ಕಷ್ಟವಾಗುತ್ತದೆ. ಇವೊತ್ತು ತಮ್ಮ ಕ್ಷೇತ್ರದ ದೃಷ್ಟಿಯಿಂದ ಮಾನ್ಯ ಸದಸ್ಯರು ಹೇಳುತ್ತಾರೆ. ಅದನ್ನು ಮಾಡುತ್ತೇವೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ರಾಜಕೀಯ ಹಸ್ತಕ್ಷೇಪ ಆಗಬಾರದು ಎಂದು ಏನು ಹೇಳಿದಾರೆ ಅದಕ್ಕೆ ನಾನು ನೂರು ಪರ್‌ಸೆಂಟ್ ಭರವಸೆ ಕೊಡುತ್ತೇನೆ ಎಲ್ಲಾ ಮೂಲೆಗಳಿಂದಲೂ ಎಲ್ಲಾ ಕಡೆಯಿಂದಲೂ ಇದು ಬರಬೇಕು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

MR. SPEAKER.—I shall now put the Demands to the vote of the House. The question is:

"That a sum not exceeding Rs. 26,11,19,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Demend No. 41 'Public Works (Exclusive Construction)'."

"That a sum not exceeding Rs. 14,45,81,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Demend No. 42 'Buildings'."

"That a sum not exceeding Rs. 31,63,00,000 inclusive of the sum granted 'on account' be granted to the Government to defrav the charges which will come in course of payment during the financial year ending 31st day of March 1979 in respect of Demend No. 43 'Roads and Bridges'."

' That a sum not exceeding Rs. 10,95,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1979 in respect of Dememd No. 44 'Public Health Engineering'."

The motion was adopted and the sums were granted

Business of the House:

MR. SPEAKER.—On Monday we shall take up the following Demands:

1 Agriculture (Excluding Horticulture and DPAP)

3 Soil and Water Conservation

35 Elections

33 State Legislature.

The House will now adjourn to meet at 12 Noon on Monday, the 24th July 1978.

The House adjourned at Three of the Clock to meet again at Twelve of the Clock on Monday, the 24th July 1978.

WD 9149